ಕನ್ನಡ ಅಮೃತ ಬಳ್ಳಿ ಮಾಲೆ - ೮೧

ಕನ್ನಡ ಅಮೃತ ಬಳ್ಳಿ ಮಾಲೆ

ಶಿಕ್ಷಣ ಶಿಲ್ಪಿ

ನಾಡೋಜ ಡಾ. ವೂಡೇ ಪಿ. ಕೃಷ್ಣರವರ ಸಂಕ್ಷಿಪ್ತ ಜೀವನಚಿತ್ರ

ಡಾ. ಕೆ.ವಿ. ಮುದ್ದವೀರಪ್ಪ
ಪ್ರೊ. ಎಂ.ಜಿ. ರಂಗಸ್ವಾಮಿ





ಶಿಕ್ಷಣ ಶಿಲ್ಪಿ

ನಾಡೋಜ ಡಾ. ವೂಡೇ ಪಿ. ಕೃಷ್ಣರವರ
ಸಂಕ್ಷಿಪ್ತ ಜೀವನಚಿತ್ರ

ಶಿಕ್ಷಣ ಶಿಲ್ಪಿ

ನಾಡೋಜ ಡಾ. ವೂಡೇ ಪಿ. ಕೃಷ್ಣರವರ
ಸಂಕ್ಷಿಪ್ತ ಜೀವನಚಿತ್ರ

ನಾಡೋಜ ಡಾ. ವೂಡೇ ಪಿ. ಕೃಷ್ಣ

ಬೆಂಗಳೂರಿನ ಪ್ರತಿಷ್ಠಿತ ವೂಡೇ ಕುಟುಂಬದಲ್ಲಿ 1-2-1963ರಲ್ಲಿ ಜನನ. ತಾತ ದಿ. ಡಬ್ಲ್ಯೂ.ಹೆಚ್. ಹನುಮಂತಪ್ಪ (ಸೀನಿಯರ್), ತಂದೆ ದಿ. ಡಬ್ಲ್ಯೂ.ಹೆಚ್. ಪುಟ್ಟಯ್ಯ, ತಾಯಿ ದಿ. ದೊಡ್ಡಮ್ಮಯ್ಯ. ತಾತ, ತಂದೆ ಉದ್ಯಮಿಗಳು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಮಾಜ ಸೇವಕರು.

ಬೆಂಗಳೂರಿನ ಪೂರ್ಣಪ್ರಜ್ಞ ಶಾಲೆ, ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯಲ್ಲಿ ಓದಿದ ಕೃಷ್ಣ ಅವರು ನಂತರದ ದಿನಗಳಲ್ಲಿ ಪಡೆದುಕೊಂಡ ಪದವಿಗಳು ಹಲವಾರು. ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ., ಎಂ.ಎಸ್. ಪದವಿಗಳು, ಕಾನೂನಿನಲ್ಲಿ ಎಲ್‌ಎಲ್.ಬಿ., ಎಂ.ಎಲ್. ಪದವಿಗಳು, ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ, ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್.ಡಿ ಪದವಿ.

ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಕೃಷ್ಣ ಅವರು ಭಾರತ ಸರ್ಕಾರದ ಅನುಮೋದಿತ ವಾಲ್ಯುಯರ್ ಹಾಗೂ ಟೆಕ್ನಿಕಲ್ ಆರ್ಬಿಟ್ರೇಟರ್ ಆಗಿ 30ಕ್ಕೂ ಹೆಚ್ಚು ವರ್ಷಗಳ ಸೇವೆ. ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ ರಾಜ್ಯ ಸಚಿವ ದರ್ಜೆಯಲ್ಲಿ (2009-2011) ಸೇವೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾರತೀಯ ಇಂಜಿನಿಯರುಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಣೆ. ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಅನೇಕ ವಿಚಾರ ಗೋಷ್ಠಿ, ಸಮ್ಮೇಳನ, ಕಾರ್ಯಾಗಾರಗಳ ಸಂಘಟನೆ, ಪ್ರಬಂಧಗಳ ಮಂಡನೆ ಹಾಗೂ ಪ್ರಕಟಣೆ. ಸರ್. ಎಂ. ವಿಶ್ವೇಶ್ವರಯ್ಯ ಜೀವನ- ಸಾಧನೆ ಕುರಿತ ಕೃತಿ ರಚನೆ (2012), ನದಿಯಂತೆ ನೆನಪು (ಆತ್ಮಕಥನ), ಬೆಳ್ಳಕ್ಕಿ ಸಾಲು (ವ್ಯಕ್ತಿಚಿತ್ರಗಳು) 2016.

ಅಲಂಕರಿಸಿದ ಸ್ಥಾನಮಾನಗಳು

ಸದಸ್ಯರು, ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರ; ಗೌ. ಪ್ರಧಾನ ಕಾರ್ಯದರ್ಶಿಗಳು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ; ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ನವದೆಹಲಿ; ಅಧ್ಯಕ್ಷರು, ಕರ್ನಾಟಕ ರಾಜ್ಯ ಕೇಂದ್ರ, ಭಾರತೀಯ ಇಂಜಿನಿಯರುಗಳ ಸಂಸ್ಥೆ; ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ; ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ; ಗೌ. ಕೋಶಾಧ್ಯಕ್ಷರು, ಭಾರತ ಸೇವಾದಲ ಕೇಂದ್ರ ಸಮಿತಿ; ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರು, ಭಾರತೀಯ ಕ್ಷಯರೋಗ ಸಂಸ್ಥೆ, ನವದೆಹಲಿ; ಆಡಳಿತ ಮಂಡಲಿ ಸದಸ್ಯರು, ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾ, ಹೈದರಾಬಾದ್; ಉಪಾಧ್ಯಕ್ಷರು, ವ್ಯಾಲ್ಯುಯರ್ ಸಂಸ್ಥೆ, ಬೆಂಗಳೂರು ಶಾಖೆ; ಅಧ್ಯಕ್ಷರು, ಕರ್ನಾಟಕ ರಾಜ್ಯ ಕೇಂದ್ರ, ಭಾರತೀಯ ಆರ್ಬಿಟ್ರೇಟರುಗಳ ಸಂಸ್ಥೆ; ಅಧ್ಯಕ್ಷರು, ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು ದಕ್ಷಿಣ ಘಟಕ; ಅಧ್ಯಕ್ಷರು, ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘ, ಕರ್ನಾಟಕ ಅಧ್ಯಾಯ; ಅಧ್ಯಕ್ಷರು,

ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘ; ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆ; ವ್ಯವಸ್ಥಾಪಕ ಧರ್ಮದರ್ಶಿ, ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ಟ್ರಸ್ಟ್; ಕಾರ್ಯದರ್ಶಿಗಳು, ಕರ್ನಾಟಕ ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸಂಘ; ಗೌ. ವ್ಯವಸ್ಥಾಪಕ ನಿರ್ದೇಶಕರು, ನೆಹರೂನಗರ ಸಹಕಾರಿ ಬ್ಯಾಂಕ್ ನಿಯಮಿತ; ಅಧ್ಯಕ್ಷರು, ಆಡಳಿತ ಮಂಡಳಿ, ಸದಾಶಿವನಗರ ವಿದ್ಯಾಸಂಸ್ಥೆಗಳು; ಉಪಾಧ್ಯಕ್ಷರು, ನವಜೀವನ ವ್ಯಾಯಾಮಶಾಲಾ ಟ್ರಸ್ಟ್; ಉಪಾಧ್ಯಕ್ಷರು, ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ; ಕರ್ನಾಟಕ ಸರ್ಕಾರದ ನಾಮನಿರ್ದೇಶಿತ ಧರ್ಮದರ್ಶಿ, ಬಳೇಪೇಟೆ ಶ್ರೀನಿವಾಸ ಮಂದಿರಂ ಮತ್ತು ಚಾರಿಟೀಸ್; ಕಾರ್ಯಕಾರಿ ಸಮಿತಿ ಸದಸ್ಯರು, ಕರ್ನಾಟಕ ಸರ್ವೋದಯ ಮಂಡಲ ಹಾಗೂ ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ; ಪಟೇಲ್ ಪ್ರತಿಷ್ಠಾನದ ಗೌರವ ಅಧ್ಯಕ್ಷರು; ಸ್ಥಾಪಕ ಧರ್ಮದರ್ಶಿ, ವೂಡೇ ಪ್ರತಿಷ್ಠಾನ.

ಸಂದ ಪ್ರಶಸ್ತಿ ಗೌರವಗಳು

ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರಪತಿಗಳ ಚಿನ್ನದ ಪದಕ(2012), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2004), ವಿಕಲಚೇತನರ ಸಬಲೀಕರಣ ರಾಜ್ಯ ಪ್ರಶಸ್ತಿ (2008), ಕರ್ನಾಟಕ ರಾಜ್ಯ ಯುವ ಪ್ರಶಸ್ತಿ (1992), ಬೆಂಗಳೂರು ಮೆಟ್ರೊ ರೋಟರಿಯ ಗೌರವ ಸದಸ್ಯತ್ವ (2012), ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಫೆಲೋ ಗೌರವ (2016), ಇಂಗ್ಲೆಂಡಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಫೆಲೋ ಗೌರವ (2012), ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ (2011), ಕರ್ನಾಟಕ ರಾಜ್ಯಪಾಲರಿಂದ ರೆಡ್‌ಕ್ರಾಸ್ ಪ್ರಶಸ್ತಿ (2005), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ (2002), ಭಾರತೀಯ ವಿದ್ಯಾ ಭವನದಿಂದ ಭಾರತೀಯ ವಿದ್ಯಾ ವಿಶಾರದ ಗೌರವ (1990), ವಿವೇಕಾನಂದ ಕಲಾ ಕೇಂದ್ರದಿಂದ ಸೇವಾಶ್ರೀ ಪ್ರಶಸ್ತಿ (1999), ಡಿ.ವಿ.ಜಿ. ಪುರಸ್ಕಾರ (2005), ನ್ಯೂಯಾರ್ಕ್‌ನ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಸೈಟೇಷನ್ ಪ್ರಶಸ್ತಿ (2008), ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೌರವ(2014). ಕಿರಿಯ ವಯಸ್ಸಿನಲ್ಲೇ ಹಿರಿಯ ಸಾಧನೆ ಮಾಡಿದ ಇವರಿಗೆ 2016ರಲ್ಲಿ 'ಕೃಷ್ಣಸಿರಿ' ಎಂಬ ಗೌರವ ಗ್ರಂಥವನ್ನು ಅರ್ಪಿಸಲಾಗಿದೆ. ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ, ಮಂಡ್ಯ(2017), ದಿ ಹಿಂದೂ ಗ್ರೂಪ್ ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ 'ಡಾಯನ್ಸ್' ಪ್ರಶಸ್ತಿ(2017), ಸಮಾಜಸೇವೆಗಾಗಿ ಮಂಡ್ಯದ ಡಾ.ಜಿ.ಮಾದೇಗೌಡ ಪ್ರತಿಷ್ಠಾನ ಪ್ರಶಸ್ತಿ(2020), ಉದಯಭಾನು ಕಲಾ ಸಂಘದ ಆಜೀವ ಸದಸ್ಯತ್ವ ಗೌರವ (2020), ಶಿಕ್ಷಣ ಕ್ಷೇತ್ರದ ಅನುಪಮ ಸೇವೆಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್‌ಗೆ ತತ್ಸಮಾನವಾದ ಪ್ರತಿಷ್ಠಿತ ನಾಡೋಜ ಗೌರವ ಪದವಿ(2020)– ಹೀಗೆ ಹಲವು ಗೌರವಗಳು ಇವರಿಗೆ ಸಂದಿವೆ.

ಪ್ರಸ್ತುತ ಅವರು ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

391/1, 8ನೇ ಅಡ್ಡರಸ್ತೆ, 13ನೇ ಮುಖ್ಯರಸ್ತೆ, ರಾಜಮಹಲ್ ವಿಲಾಸ್ ಬಡಾವಣೆ
ಸದಾಶಿವನಗರ, ಬೆಂಗಳೂರು – 560 080
ಸ್ಥಿರವಾಣಿ : +91 –80–2361 8406 ಚರವಾಣಿ : 98441 56100
ಮಿಂಚಂಚೆ : woodaypkrishna@yahoo.co.in
ಅಂತರ್ಜಾಲ : www.woodaypkrishna.in

ಸಿವಿಜಿ ಇಂಡಿಯಾ 212ನೆಯ ಪ್ರಕಟಣೆ

ಕನ್ನಡ ಅಮೃತ ಬಳ್ಳಿ ಮಾಲೆ - 81

ಶಿಕ್ಷಣ ಶಿಲ್ಪಿ

ನಾಡೋಜ ಡಾ. ವೂಡೇ ಪಿ. ಕೃಷ್ಣರವರ
ಸಂಕ್ಷಿಪ್ತ ಜೀವನಚಿತ್ರ



ಡಾ. ಕೆ. ವಿ. ಮುದ್ದವೀರಪ್ಪ
ಪ್ರೊ. ಎಂ. ಜಿ. ರಂಗಸ್ವಾಮಿ

ಸಿವಿಜಿ ಇಂಡಿಯಾ
ಕಸ್ತೂರಬಾ ಭವನ
ಗಾಂಧಿ ಭವನ ಆವರಣ
ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

KANNADA AMRUTHA BALLI SERIES - 81

SHIKSHANA SHILPI

A short Biography of Nadoja Dr. Wooday P. Krishna

by

Dr. K. V. Muddaveerappa
Prof. M. G. Rangaswamy

Published by
CVG INDIA
Kusturaba Bhavana
Gandhi Bhavan Campus
Kumara Park East
Bangalore - 560 001
Phone : 080-22340799

© Authors

ಪುಸ್ತಕ ಮಾರಾಟದ ಹಕ್ಕು – ಪ್ರಕಾಶಕರದ್ದು

First Impression : 2017
Second Impression : 2018
Third Impression : 2021 (Revised)
Fourth Impression : 2023 (Revised)
Price: ₹ **150/-**
Pages : xx + 124 + 8 = 152
Paper Used : 80 GSM Maplitho
Book Size : 1/8th Demmy

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080 - 2674 2233

ಕುವೆಂಪು ನುಡಿ

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಲು (ಭರತ ಭೂಮಿ ನನ್ನ ತಾಯಿ)

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ! (ಅಖಂಡ ಕರ್ನಾಟಕ)

ಎಲ್ಲವೊಂದುಗೂಡಲೆಂದು
ವಿಧಿಯ ಮನಸು ಕಡೆದ ಕನಸು
ಕಾಣ್ಬ ಕಣಸೆ, ಕಾಣ್: ಕುವೆಂಪು (ಕುವೆಂಪು)

ಯಾವ ದೇವಶಿಲ್ಪಿಯಿಂತು
ನಿನ್ನ ಕೊರೆದನು?
ಯಾವ ಬಣ್ಣಗಾರನಿಂತು
ರಂಗನೆರೆದನು?
ಒಲವಿನೊಡೆಯ ಸೊಬಗಿನೊಡೆಯ-
ನೊಡನೆ ಕೂಡಿ ಸಂಚುಮಾಡಿ
ನಿನ್ನ ಪಡೆದನೆ?
ಮಳೆಯಬಿಲ್ಲ ಕರಗಿಸಿಂತು
ನಿನ್ನ ಕಡೆದನೆ?

– **ಕುವೆಂಪು**

ಪರಂಪರೆ ಮತ್ತು ಸೃಜನಶೀಲತೆ

ಕನ್ನಡ ಸಾರಸ್ವತಲೋಕ ಬಹು ದೊಡ್ಡ ಪರಂಪರೆಯನ್ನು ಹೊಂದಿದೆ. ಈ ಹದಿನೈದು ಶತಮಾನಗಳವರೆಗೆ ನಡೆದು ಬಂದ ದಾರಿ ವೈವಿಧ್ಯಮಯವಾದುದು. ಅನೇಕ ವಿಚಾರಧಾರೆಗಳು ಕನ್ನಡ ಸಾಹಿತ್ಯವನ್ನು ನಿರ್ದೇಶಿಸಿವೆ. ಪಂಪ-ರನ್ನರ ರಾಜಪ್ರಭುತ್ವಗಳ ಉಚ್ಚಕಾಲದಲ್ಲಿ ಆಸ್ಥಾನದಲ್ಲಿ ಬೆಳೆದು ಬಂದ ಸಾಹಿತ್ಯ ರಾಮಾಯಣ-ಮಹಾಭಾರತಗಳ ಸಾರ್ವಕಾಲಿಕ ಶ್ರೇಷ್ಠ ಕಾವ್ಯಗಳ ಪುನರ್‌ಸೃಷ್ಟಿಯಾದರೂ ತಮ್ಮ ಕಾಲದ ರಾಜಕೀಯ-ಸಾಮಾಜಿಕ ಛಾಪನ್ನು ಪುರಾಣ ಕಥನಗಳ ಪರಿವೇಷದ ಮೂಲಕ ನಿತ್ಯಸಮಕಾಲೀನವಾಗಿ ಒಡಮೂಡಿಸಿದ ಪರಿ ಅನನ್ಯವಾದುದು. ಸಂಸ್ಕೃತಭೂಯಿಷ್ಠ ಚಂಪೂ ಕಾವ್ಯ ಹೋಗಿ ಶಿವಶರಣರ ಕಾಲಕ್ಕೆ ಜನಸಾಮಾನ್ಯರ ಸಾಹಿತ್ಯಯುಗ ಪ್ರಾರಂಭವಾಯಿತು. ಛಂದಸ್ಸಿನ ಹಂಗಿಲ್ಲದ ಗಪದ್ಯವು ಸರಳ ಆಡುನುಡಿಯ ಕನ್ನಡದಿಂದ ಗಮನ ಸೆಳೆಯಿತು. ಆದರೆ ತಮ್ಮ ಕಾಲದ ಬದುಕಿನ ಕ್ರೂರ ಸತ್ಯಗಳ ಮೇಲೆ ಅನುಭಾವದ ಮುಸುಕು ಕವಿಯಿತು. ಅಲ್ಲಮ-ಬಸವರಂಥವರು ತಮ್ಮ ಸುತ್ತಿನ ಬದುಕಿನ ಸೂಕ್ಷ್ಮತೆಯನ್ನು ಚಿತ್ರಿಸಿದರೂ ಆಧ್ಯಾತ್ಮ ಲೇಪನದಿಂದ ಬೇರೆಯದೇ ತಿರುವನ್ನು ಪಡೆಯಿತು. ಈ ಶಿವಶರಣರ

ಕತೆಗಳನ್ನೇ ಆಧರಿಸಿ ಹರಿಹರ-ರಾಘವಾಂಕರು ಕಾವ್ಯ ರಚಿಸುವ ಮೂಲಕ ಹೊಸ ಹಾದಿ ತುಳಿದರು. ಹಿಂದಿನ ಚಂಪೂ ಕಾವ್ಯ ಶೈಲಿಯನ್ನು ಧಿಕ್ಕರಿಸಿ ದೇಸಿ ಛಂದಸ್ಸಿನ ರಗಳೆ-ಷಟ್ಪದಿಯಲ್ಲಿ ಕಾವ್ಯ ರಚಿಸಿದರು. ಕುಮಾರವ್ಯಾಸನಂಥ ಭಾಗವತ ಕವಿ ಭಕ್ತಿಯ ಸಂಭ್ರಮದಲ್ಲೂ ಸುತ್ತಿನ ವಾಸ್ತವಗಳಿಗೆ ಕಣ್ಣು ತೆರೆಯುವುದನ್ನು ಮರೆಯಲಿಲ್ಲ. ಇಡೀ ವ್ಯವಸ್ಥೆ ಹೇಗೆ ಗಬ್ಬೆದ್ದು ಹೋಗಿದೆ ಎಂಬುದನ್ನು 'ಅರಸು ರಾಕ್ಷಸ, ಮಂತ್ರಿ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಬಡವರ ಮೊರೆಯ ಕೇಳುವವರಾರಿನ್ನು' ಎಂದು ಅಪರೋಕ್ಷವಾಗಿ ತನ್ನ ಕಾಲದ ಅರಾಜಕಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಪುರಂದರ-ಕನಕರ ಕೀರ್ತನೆಗಳು, ಷರೀಫರ ತತ್ವಪದಗಳು ಇತ್ಯಾದಿ ಬಹುದೊಡ್ಡ ಅಧ್ಯಾತ್ಮಿಕ ಸಂತ ಪರಂಪರೆ ಮೊದಲ ಬಾರಿಗೆ ಕಾವ್ಯವನ್ನು ಸಂಗೀತದ ಸಾತತ್ಯದಿಂದ ಬೆಸೆಯುವ ಮೂಲಕ ಜನಸಾಮಾನ್ಯರ ಬಳಿ ತೆಗೆದುಕೊಂಡು ಬಂತು. ಸಾಹಿತ್ಯ ಕಾವ್ಯದ ಶೃಂಖಲೆಯಿಂದ ಬಿಡಿಸಿಕೊಂಡು ಮುದ್ದಣನ ಮೂಲಕ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ಗದ್ಯದ ಮೂಲಕ ಜನಗಳ ಹೃದಯಕ್ಕೆ ಇನ್ನೂ ಹತ್ತಿರವಾಯಿತು. ಇನ್ನು ಇಪ್ಪತ್ತನೇ ಶತಮಾನವಂತೂ ಶ್ರೀಸಾಮಾನ್ಯನ ಯುಗವಾಯಿತು. ನವೋದಯ-ಪ್ರಗತಿಪರ-ನವ್ಯ-ಬಂಡಾಯ-ದಲಿತ ಎಂದು ಆಧುನಿಕ ಕನ್ನಡ ಕಾವ್ಯ ಅನೇಕ ಧಾರೆಗಳಲ್ಲಿ ಕಾಣಿಸಿಕೊಂಡಿದ್ದು ಶ್ರೀಸಾಮಾನ್ಯರ ಚಿಂತನೆಗೆ ಹೊಸ ಆಯಾಮವನ್ನು ನೀಡಿವೆ.

ಜನಪದ ಸಾಹಿತ್ಯ ಶತಶತಮಾನಗಳುದ್ದಕ್ಕೂ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಬಂದಿದ್ದು ಶಿಷ್ಟ ಕವಿಗಳ ಆವಜ್ಞೆಗೆ ಒಳಗಾಗಿತ್ತು. ಜನಪದ ಮಹಾಕಾವ್ಯಗಳು ನಮ್ಮ ಸಾಂಪ್ರದಾಯಿಕ ಚಿಂತನೆಯ ದಿಕ್ಕನ್ನೇ ಬದಲಿಸಿದವು. ಆ ಕಾವ್ಯಗಳ ನಾಯಕರು ಆಯಾ ಸಮುದಾಯಗಳ ಸಾಂಸ್ಕೃತಿಕ ನಾಯಕರು ತಮ್ಮದೇ ಆದ ಭಿನ್ನ ವಿಚಾರಧಾರೆಯ ಮೂಲಕ ಆಯಾ ಜನಾಂಗದ ಅಸ್ಮಿತೆಗೆ ಕಾರಣರಾದರು. ಶತಮಾನದ ಮೇರು ಪ್ರತಿಭೆ ಕುವೆಂಪು ತಮ್ಮ ವೈಚಾರಿಕ ಕ್ರಾಂತಿಯಿಂದ ಕನ್ನಡ ಭಾಷೆ ಎದುರಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಕುರಿತು ಚಿಂತಿಸಿದರು. ವಿಶ್ವಮಾನವತ್ವ, ಅನಿಕೇತತ್ವ, ಮಂತ್ರ-ಮಾಂಗಲ್ಯಗಳ ಹೊಸ ಕಲ್ಪನೆಯನ್ನು ನೀಡಿದರು. ಕನ್ನಡವನ್ನು ಇವರೆಲ್ಲಾ ಆಯಾ ಕಾಲಕ್ಕೆ ತಕ್ಕಂತೆ ಮುರಿದು ಹೊಸದಾಗಿ ಕಟ್ಟಿದರು. T.S. Eliot ಹೇಳುವ "Language is Made, Remade and Unmade" ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಕನ್ನಡ ಅಂದಂದಿಗೆ ಹೊಸದಾಗುತ್ತಲೇ ಬಂದಿದೆ, ಪರಂಪರೆಯನ್ನು ಸೃಜನಶೀಲತೆ ಮೀರುತ್ತಲೇ ಬಂದಿದೆ.

ಕರ್ನಾಟಕಕ್ಕೆ ತನ್ನ ಭೌತಿಕ ಸ್ವರೂಪಕ್ಕಿಂತ ಭಿನ್ನ ಆಯಾಮಗಳಿವೆ ಎಂದು 'ಕರ್ನಾಟಕವೇನು ಹೆಸರೆ ಬರಿಯ ಮಣ್ಣಿಗೆ' ಎಂದು ಕವಿಯೊಬ್ಬರು ಪ್ರಶ್ನಿಸಿದ್ದಾರೆ. 'ದೇಶಮಂಟೆ ಮಟ್ಟಿ ಕಾದೋಯ್, ದೇಶಮಂಟೆ ಮನುಷುಲೋಯ್' (ದೇಶವೆಂದರೆ ಬರಿ ಮಣ್ಣಲ್ಲ, ದೇಶವೆಂದರೆ ಮನುಜರು) ಎಂಬ ತೆಲುಗು ಕವಿಯ ಮಾತು ಇದನ್ನೇ ಹೇಳುತ್ತದೆ. ಬಿ.ಎಂ. ಶ್ರೀಯಂಥವರು 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂದು 50-60 ವರ್ಷಗಳ ಕೆಳಗೆ ಚಿಂತಿಸಿದುದು ಇಂದಿಗೂ ಆ ಸ್ಥಿತಿಯೇ ಮುಂದುವರಿದಿರುವುದು ವಿಷಾದನೀಯ. ಹರಿದು ಹಂಚಿಹೋಗಿದ್ದ ಕನ್ನಡನಾಡು ಅಖಂಡ ಕರ್ನಾಟಕವಾಗಿ ಹೊಮ್ಮಿದರೂ ಕನ್ನಡ ಆಡಳಿತ ಭಾಷೆಯಾಗಲು ದೊಡ್ಡ ಹೋರಾಟವನ್ನೇ ನಡೆಸಬೇಕಾಯಿತು. ಮಾತೃಭಾಷಾ ಅಧ್ಯಯನದ ಬಗ್ಗೆ ಗೋಕಾಕ್‌ನಂತಹ ಬಹುದೊಡ್ಡ ಚಳವಳಿಗಳು ನಡೆದರೂ ಮತ್ತೆ ಕನ್ನಡ ಭಾಷೆ ಮಾತೃಭಾಷಾ ಶಿಕ್ಷಣ ಇತ್ಯಾದಿ ವಿಷಯಗಳಲ್ಲಿ ಗಂಡಾಂತರದಲ್ಲಿದೆ. ಈ ಸಂದರ್ಭದಲ್ಲಿ 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಆಧುನಿಕ ತಂತ್ರಜ್ಞಾನಕ್ಕೆ ಕನ್ನಡವನ್ನು ಸಜ್ಜುಗೊಳಿಸಬೇಕಿದೆ.

* * *

ಈ ಹಿನ್ನೆಲೆಯಲ್ಲಿ ಸಿವಿಜಿ ಪಬ್ಲಿಕೇಷನ್ಸ್ ಮತ್ತು ಅದರ ಸೋದರ ಸಂಸ್ಥೆಗಳು ಕಳೆದ 20 ವರ್ಷಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ವೈವಿಧ್ಯಮಯ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಕನ್ನಡವನ್ನು ಸಾಂಸ್ಕೃತಿಕವಾಗಿ ಕಟ್ಟುವ ಕೆಲಸದಲ್ಲಿ ತನ್ನದೇ ಆದ ಸೇವೆ ಸಲ್ಲಿಸುತ್ತಾ ಬಂದಿದೆ. ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ ಏಕಕಾಲಕ್ಕೆ ತಮ್ಮ ಸಂಸ್ಥೆಯ ದಶಮಾನೋತ್ಸವವೂ ಸೇರಿದಂತೆ ಒಟ್ಟಾರೆ 110 ಪುಸ್ತಕಗಳನ್ನು; ಕುವೆಂಪು ಅವರ 108 ಜನ್ಮದಿನೋತ್ಸವಕ್ಕೆ 'ಕುವೆಂಪು ನೂರೆಂಟು' ಎಂದು 108 ಪುಸ್ತಕಗಳನ್ನು; ಮಹಿಳಾಭಾರತಿ ಎಂದು 50, ಮಕ್ಕಳ ಭಾರತಿ ಎಂದು 50 ಪುಸ್ತಕಗಳನ್ನು ಪ್ರಕಟಿಸುವ ಮೂಲಕ ತಮ್ಮ ದಾಖಲೆಗಳನ್ನು ತಾವೇ ಮುರಿಯುತ್ತಾ 'ಸುಜ್ಞಾನದ ಅಡಿಗೆಯ ಮಾಡಬೇಕಣ್ಣಾ' ಎಂಬ ತತ್ವಪದಕಾರನ ಆಶಯದಂತೆ ಕೆಲಸ ಮಾಡುತ್ತಿದ್ದಾರೆ. ಈಗ ಮತ್ತೆ ತಮ್ಮ ಸಂಸ್ಥೆಯ ದ್ವಿದಶಮಾನೋತ್ಸವದೊಂದಿಗೆ ಕನ್ನಡ ರಾಜ್ಯೋತ್ಸವ-ಕುವೆಂಪು ಜನ್ಮದಿನದ ಆಸುಪಾಸಿನಲ್ಲಿ 'ಕನ್ನಡದ ಅಮೃತ ಬಳ್ಳಿ' ಮಾಲೆಯ ಮೂಲಕ 'ಹಲವು ತೋಟದ ಹೂಗಳ'ನ್ನು ಇಲ್ಲಿ ಕಲೆಹಾಕುವ ಕೆಲಸ ಮಾಡಿದ್ದಾರೆ. ಈ ಮಾಲೆಗೆ 'ಕನ್ನಡ ಅಮೃತಬಳ್ಳಿ' ಎಂದು ಹೆಸರಿಟ್ಟಿರುವುದು ಅರ್ಥಪೂರ್ಣವಾಗೇ

ಇದೆ. ಅಮೃತಬಳ್ಳಿ ಎಂಬುದು ಔಷಧೀಯ ಗುಣವುಳ್ಳ ಬಳ್ಳಿಯಾಗಿದ್ದು ಆರೋಗ್ಯ ವರ್ಧನೆಗೆ ಸಹಕಾರಿಯಾಗಿದ್ದು, ಕನ್ನಡ ಸಾಹಿತ್ಯಕ್ಕೆ ಈ ಮಾಲೆ ಅದೇ ಚಿಕಿತ್ಸಕ ಗುಣವನ್ನು ತುಂಬುತ್ತದೆ ಎಂದು ಭಾವಿಸಿದ್ದೇನೆ. ಕನ್ನಡ ರಾಜ್ಯೋತ್ಸವದ ನೆಪದಲ್ಲಿ 58 ಮತ್ತು ಸಂಸ್ಥೆಯ ದ್ವಿದಶಮಾನೋತ್ಸವಕ್ಕಾಗಿ 20, ಒಟ್ಟು 80 ಪುಸ್ತಕಗಳ ಪ್ರಕಟಣೆ ಮಾಡಿದ್ದಾರೆ. ಆ ಮಾಲೆಯಲ್ಲಿ ಅರಳಿದ ಹೂಗಳು ಇವು. ಇದನ್ನು ಮತ್ತೆ ಶತಕದತ್ತ ಕೊಂಡೊಯ್ಯುವ ಆಶಯವೂ ಇದೆ. ಈ ಹೂಗಳನ್ನು ಕುರಿತು ನನ್ನ ಅಭಿಪ್ರಾಯಗಳನ್ನು ಆಯಾ ಕೃತಿಗಳ ಬೆನ್ನುಡಿಯಲ್ಲೇ ಬರೆದಿದ್ದೇನೆ. ಏಕೆಂದರೆ ಈಗಾಗಲೇ ಲೇಖಕರು ಮತ್ತು ಮುನ್ನುಡಿಕಾರರು ಕೃತಿ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದರಿಂದ ಮತ್ತೆ ಈ ಅಧ್ಯಾಯದಲ್ಲೇ ನನ್ನ ಭಾವನೆಗಳನ್ನು ದಾಖಲಿಸಿದರೆ ಪುನರುಕ್ತಿ ಆಗುತ್ತದೆಂದು ಕೃತಿಯ ಬೆನ್ನುಡಿಯಲ್ಲೇ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದೇನೆ.

ನನ್ನ 25ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸುವ ಮೂಲಕ ನನ್ನನ್ನು ಸಾಹಿತ್ಯಿಕವಾಗಿ ಬೆಳೆಸಿದುದಲ್ಲದೆ, ಇಂಥದೊಂದು ಮಾಲೆಗೆ ನನ್ನನ್ನು ಸಂಪಾದಕನನ್ನಾಗಿಸುವ ಮೂಲಕ ತಮ್ಮ ಹೃದಯದ ಪ್ರೀತಿಯನ್ನು ಮೆರೆದಿರುವ ಸಿವಿಜಿ ಚಂದ್ರು–ಗಿರಿಜಾ ದಂಪತಿಗೆ ಆಭಾರಿಯಾಗಿದ್ದೇನೆ. ಈ ಕೃತಿಗಳಿಗೆ ಸೂಕ್ತ ಮುಖಪುಟಗಳನ್ನು ರಚಿಸಿಕೊಟ್ಟ ಕಲಾವಿದರಿಗೆ ಕೃತಜ್ಞನಾಗಿದ್ದೇನೆ. ಈ ಪುಸ್ತಕಗಳ ಬೆರಳಚ್ಚು ಮಾಡಿದುದಲ್ಲದೆ, ಸರ್ವಾಂಗ ಸುಂದರವಾಗಿ ರೂಪಿಸಲು ನೆರವಾದ ಕಂಪ್ಯೂಟರ್ ಸಿಬ್ಬಂದಿಯಾದ ಶ್ರೀಮತಿ ಬಿ.ಎಸ್. ಶ್ವೇತ, ಶ್ರೀಮತಿ ಮಂಜುಳ, ಶ್ರೀಮತಿ ಲತಾ ಆರ್.ಎಸ್. ಅವರ ಸಹಕಾರವನ್ನು ಮರೆಯಲಾರೆ, ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್ ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು ಸಲ್ಲುತ್ತವೆ.

ಡಾ. ಮೀರಾಸಾಬಿಹಳ್ಳಿ ಶಿವಣ್ಣ
ಸಂಪಾದಕರು

ಲೇಖಕರ ಮಾತು

ಡಾ. ವೂಡೇ ಪಿ. ಕೃಷ್ಣ ಅವರು ಐವತ್ತಕ್ಕೆ ಕಾಲಿಟ್ಟಾಗ ಅವರ ಅಭಿಮಾನಿಗಳು ಸೇರಿ 'ಕೃಷ್ಣಸಿರಿ' ಎಂಬ ಗೌರವಗ್ರಂಥವನ್ನು ಅರ್ಪಿಸಿದರು. ಅದು ಅವರ ಸಾಧನೆಯ ವಿವಿಧ ಮುಖಗಳ ವಿರಾಟ್‌ದರ್ಶನ ಮಾಡಿಸುವ 600 ಪುಟಗಳಿಗೂ ಮೀರಿದ ಒಂದು ಬೃಹತ್ ಹೊತ್ತಿಗೆ. ಅದು ಎಲ್ಲರ ಕೈಗೂ ಸುಲಭವಾಗಿ ಸಿಗುವ ವಸ್ತು ಅಲ್ಲ. ಆದರೆ ಕೃಷ್ಣರವರ ಇಡೀ ಬದುಕೇ ಒಂದು ಸಂದೇಶದಂತಿದ್ದು, ಇದನ್ನು ಜನಸಾಮಾನ್ಯರಿಗೆ, ವಿಶೇಷವಾಗಿ ವಿದ್ಯಾರ್ಥಿಗಳಿಗೆ ತಲುಪಿಸಿದರೆ ಅವರ ಬದುಕಿಗೆ ಇದೊಂದು 'ದಾರಿದೀಪ'ವಾಗುತ್ತದೆ ಎಂದು ಭಾವಿಸಲಾಯಿತು. ಹೀಗೆ ಅನಿಸತೊಡಗಿದಂತೆ ಇದಕ್ಕೆ ಏನಾದರೂ ಪರಿಹಾರ ಹುಡುಕಬೇಕು ಎಂದು ಚಿಂತನೆ ನಡೆಸಿದಾಗ ಹೊಳೆದದ್ದು– 'ಕೃಷ್ಣಸಿರಿ'ಯನ್ನೇ 'ಶಿಕ್ಷಣ ಶಿಲ್ಪಿ' ಎಂಬ ಒಂದು ಪುಟ್ಟ ಕನ್ನಡಿಯಲ್ಲಿ ತೋರಿಸಬಾರದೇಕೆ ಎಂಬ ಚಿಂತನೆ ಹರಳುಗಟ್ಟತೊಡಗಿತು.

ಕೃಷ್ಣರವರ ಜೀವನದ ಎಲ್ಲ ಮುಖಗಳೂ ಬಿಂಬಿಸುವಂತೆ ಸಂಗ್ರಹಿಸುವ ಸವಾಲು ಸ್ವೀಕರಿಸಿ ಈ ಬಗ್ಗೆ ಕೆಲಸ ಮಾಡುವ ಜವಾಬ್ದಾರಿಯನ್ನು 'ಕೃಷ್ಣಸಿರಿ'ಯ ಸಂಪಾದಕ ಮಂಡಳಿಯು ನಮಗೆ ವಹಿಸಿತು.

ಹೀಗಾಗಿ ಕೃಷ್ಣರವರ ಸಂಕ್ಷಿಪ್ತ ಜೀವನ ಚಿತ್ರವನ್ನು ವಿದ್ಯಾರ್ಥಿಸ್ನೇಹಿಯಾಗಿ ಸರಳವಾಗಿ ರೂಪಿಸುವ ಅಂಶವನ್ನು ಮುಂದಿಟ್ಟುಕೊಂಡು ಇದನ್ನು ರೂಪಿಸಲಾಯಿತು. ಈ ಹೊಣೆಗಾರಿಕೆಯನ್ನು ನಮಗೆ ನೀಡಿದ 'ಕೃಷ್ಣಸಿರಿ'ಯ ಮುಖ್ಯ ಸಂಪಾದಕರೂ ಹಾಗೂ ಅರ್ಥಪೂರ್ಣ ಬೆನ್ನುಡಿಯನ್ನು ಬರೆದ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರಿಗೆ, ಇದನ್ನು ಪ್ರಕಟಿಸುತ್ತಿರುವ ಸಿವಿಜಿ ಇಂಡಿಯಾ ಸಂಸ್ಥೆಗೆ ಅಭಾರಿಯಾಗಿದ್ದೇವೆ.

ನಾವು ಕೆಲವು ತಿಂಗಳ ಹಿಂದೆಯೇ ಸಿದ್ಧಪಡಿಸಿದ ಈ ಕೃತಿಯ ಬಿಡುಗಡೆಗಾಗಿ ಸೂಕ್ತ ಸಮಯಕ್ಕೋಸ್ಕರ ಕಾಯುತ್ತಿದ್ದೆವು. ಯೋಗಾಯೋಗವೆಂಬಂತೆ ಬೆಂಗಳೂರು ನಗರ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಡಾ. ವೂಡೇ ಪಿ. ಕೃಷ್ಣ ಅವರನ್ನು ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಇಂಥ ಆಯ್ಕೆಗೆ ಕಾರಣರಾದ ಗಾಂಧಿನಗರ ವಿಧಾನಸಭಾ ಕ್ಷೇತ್ರ ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಶಿವಾನಂದ ಅವರನ್ನು ಅಭಿನಂದಿಸುತ್ತೇವೆ. ಹಾಗೂ ಇದೇ ಸಂದರ್ಭದಲ್ಲಿ ಕೃತಿಯನ್ನು ಬಿಡುಗಡೆಗೊಳಿಸುವ ಆಶಯ ವ್ಯಕ್ತಪಡಿಸಿದಾಗ ತುಂಬು ಹೃದಯದಿಂದ ಒಪ್ಪಿ ಅದಕ್ಕಾಗಿ ವ್ಯವಸ್ಥೆ ಮಾಡಿದ ಎಲ್ಲ ಪದಾಧಿಕಾರಿಗಳಿಗೆ ಕೃತಜ್ಞರಾಗಿದ್ದೇವೆ.

ಇದರ ಕರಡು ತಿದ್ದುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಹಿರಿಯ ಪತ್ರಕರ್ತೆ ಶಾಂತಮ್ಮನವರಿಗೆ ನಮ್ಮ ಕೃತಜ್ಞತೆಗಳು. ಇಂಥದೊಂದು ಪ್ರಯತ್ನಕ್ಕೆ ನಾವು ತೊಡಗಿದಾಗ ಕೃಷ್ಣರವರು ಹಿಂಜರಿಕೆ ತೋರಿದರೂ, ಕೊನೆಗೆ ನಮ್ಮ ಆಗ್ರಹಕ್ಕೆ ಮಣಿದು ಒಪ್ಪಿಗೆ ಸೂಚಿಸಿದ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ತಮ್ಮ ರಕ್ಷಾಪುಟ ಹಾಗೂ ಪುಟವಿನ್ಯಾಸದ ಮೂಲಕ ಕೃತಿಯನ್ನು ಸರ್ವಾಂಗ ಸುಂದರಗೊಳಿಸಿದ ಶ್ರೀಮತಿ ಶ್ವೇತ ಅವರಿಗೆ ನಮ್ಮ ಮನದಾಳದ ನಮನಗಳು.

ಈ ಮುಂಚೆ 'ಶಿಕ್ಷಣ ಶಿಲ್ಪಿ' ಎರಡು ಮುದ್ರಣಗಳನ್ನು ಕಂಡಿದ್ದು, ಅದರ ಪ್ರತಿಗಳೆಲ್ಲ ಖಾಲಿಯಾಗಿದ್ದವು. ಕೃಷ್ಣ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪದವಿ ಪ್ರದಾನ ಮಾಡಿದ ನಂತರ ಮತ್ತೆ ಶಿಕ್ಷಣ ಶಿಲ್ಪಿಗೆ ಬೇಡಿಕೆ ಸೃಷ್ಟಿಯಾಯಿತು. ಈ ಸಂದರ್ಭವನ್ನೇ ಬಳಸಿಕೊಂಡು ಹೆಚ್ಚುವರಿ ಮಾಹಿತಿಗಳನ್ನು, ಹೆಚ್ಚುವರಿ ಪುಟಗಳನ್ನು ಸೇರಿಸಿ ಕೃತಿಯನ್ನು ಆಮೂಲಾಗ್ರವಾಗಿ ಪರಿಷ್ಕರಿಸಬೇಕಾಯಿತು. ಹೀಗಾಗಿ ಈಗ ಈ ಪರಿಷ್ಕೃತ ಮೊದಲ ಮುದ್ರಣ ಬರುತ್ತಿದೆ.

ಈ ಕೃತಿಯನ್ನು ತಮ್ಮ ಎಂದಿನ ಕಲಾತ್ಮಕ ಸ್ಪರ್ಶದಿಂದ ಮುದ್ರಿಸಿದ ಸ್ವಾನ್ ಪ್ರಿಂಟರ್ಸ್ ಮಾಲೀಕರಾದ ಎಂ. ಕೃಷ್ಣಮೂರ್ತಿಯವರಿಗೆ ನಮ್ಮ ನೆನೆಕೆಗಳು.

ಡಾ. ಕೆ. ವಿ. ಮುದ್ದವೀರಪ್ಪ
ಪ್ರೊ. ಎಂ. ಜಿ. ರಂಗಸ್ವಾಮಿ

ಬಹುರೂಪಿ

ಕರ್ನಾಟಕದ ಶೈಕ್ಷಣಿಕ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಡಾ. ವೂಡೇ ಪಿ. ಕೃಷ್ಣ ಒಂದು ಗೌರವದ ಹೆಸರು. ಉದಾರತೆ ಮತ್ತು ಅನುಕಂಪದ ಉನ್ನತ ಗುಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊರಸೂಸುವ ಅವರ ನಡೆ–ನುಡಿಗಳು ಎಲ್ಲರನ್ನೂ ಸೆಳೆಯುವಂತಹವು. ಆಡಂಬರವಿಲ್ಲದ ಸರಳತೆ ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಗಳಿಲ್ಲದ ಆರ್ದ್ರ ಮಾನವೀಯತೆಯ ನಿರ್ಲಿಪ್ತ ಸೇವಾಭಾವದ ವ್ಯಕ್ತಿ ಇವರು. ನಾಡಿನ ಪ್ರತಿಷ್ಠಿತ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿವಿಧ ಸಂಘಸಂಸ್ಥೆಗಳಲ್ಲಿ ಸದಸ್ಯರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರು ಸಾರ್ವಜನಿಕ ಕ್ಷೇತ್ರಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು ನೀಡಿರುವ ಕೊಡುಗೆಗಳು ಬಹುರೂಪಿ.

ಡಾ. ಕೃಷ್ಣ ಅವರಿಗೆ ಐವತ್ತು ವರ್ಷಗಳು ತುಂಬಿದ ನೆನಪಿಗಾಗಿ, ಇವರನ್ನು ಗೌರವಿಸಲು ಸಂವೇದನಾಶೀಲರು ಮತ್ತು ಹಿತೈಷಿಗಳೆಲ್ಲ ಒಟ್ಟುಗೂಡಿ, ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಡಾ. ಕೆ. ಎ. ಮುದ್ದವೀರಪ್ಪ ಅವರ ಸಂಪಾದಕತ್ವದಲ್ಲಿ 'ಕೃಷ್ಣಸಿರಿ' ಎನ್ನುವ

ಅರ್ಥಪೂರ್ಣವಾದ ಸಂಭಾವನ ಗ್ರಂಥವನ್ನು ಬಹಳ ಪ್ರೀತಿಯಿಂದ ಅರ್ಪಿಸಿದ್ದಾರೆ. 'ಕೃಷ್ಣಸಿರಿ'ಯಲ್ಲಿ ಡಾ. ಕೃಷ್ಣ ಅವರ ವ್ಯಕ್ತಿತ್ವದ ಹತ್ತಾರು ಮುಖಗಳನ್ನು, ಸಾರ್ವಜನಿಕ ಜೀವನಕ್ಕೆ ಅವರು ನೀಡಿದ ಮೌಲಿಕ ಕೊಡುಗೆಗಳನ್ನು, ಸಜ್ಜನಿಕೆ ಹಾಗೂ ಗರ್ವಪಿಲ್ಲದ ಮಾನಪೀಯ ನಡವಳಿಕೆಗಳನ್ನು, ಅವರನ್ನು ಹತ್ತಿರದಿಂದ ಬಲ್ಲ ಹಲವಾರು ಹಿರಿಯರು-ಕಿರಿಯರು ಅತ್ಯಂತ ಆರ್ದ್ರವಾಗಿ ನಿರೂಪಿಸಿದ್ದಾರೆ. ಆ ಎಲ್ಲ ಚಿತ್ರಗಳೂ ನನ್ನ ಓದಿನಲ್ಲಿ ಹಾಗೆಯೇ ಹಸುರಾಗಿ ಉಳಿದಿವೆ. ಹೀಗೆ ಸಮಾಜದ ಎಲ್ಲ ವಲಯದ ಗೌರವಕ್ಕೆ ಪಾತ್ರರಾಗಿರುವ ಡಾ.ಕೃಷ್ಣ ಅವರ ವ್ಯಕ್ತಿತ್ವ ಬಹುಮುಖಿಯಾದದ್ದು.

ಸುಸಂಸ್ಕೃತ ಹಾಗೂ ಸುಶಿಕ್ಷಿತ ವೂಡೇ ಕುಟುಂಬದಲ್ಲಿ ಡಾ.ಕೃಷ್ಣ 1963 ಫೆಬ್ರವರಿ 1 ರಂದು ಜನಿಸಿದವರು. ಡಾ. ಕೃಷ್ಣ ಅವರ ಪೂರ್ವಿಕರು ಚಳ್ಳಕೆರೆ ತಾಲೂಕಿನ ಆಂಧ್ರ ಗಡಿಭಾಗದಲ್ಲಿರುವ 'ವೂಡೇ' ಗ್ರಾಮದಿಂದ (ಈಗ ಬೇಚರಕ್ ಆಗಿರುವ ವೂಡೇ ಗ್ರಾಮ ಆಂಧ್ರಪ್ರದೇಶದ ಮಡಕಶಿರಾ ತಾಲೂಕಿಗೆ ಸೇರಿದೆ.) 1800ರಲ್ಲೇ ಬೆಂಗಳೂರಿಗೆ ವಲಸೆ ಬಂದವರು. ಇವರ ತಂದೆ ಡಬ್ಲ್ಯೂ. ಹೆಚ್. ಪುಟ್ಟಯ್ಯನವರು ಹಾಗೂ ದೊಡ್ಡಪ್ಪ ಡಬ್ಲ್ಯೂ. ಹೆಚ್. ಹನುಮಂತಪ್ಪ (ಜೂನಿಯರ್), ಮಹಾತ್ಮಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡವರು. ಡಾ. ಕೃಷ್ಣ ಅವರ ಬಾಲ್ಯದ ವಿದ್ಯಾಭ್ಯಾಸ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ. ಗಾಂಧೀವಾದಿಯಾದ ಮತ್ತು ನೇರ ನಡೆನುಡಿಯವರಾದ ತಮ್ಮ ತಂದೆ ಹಾಗೂ ರಾಮಕೃಷ್ಣ ಮತ್ತು ವಿವೇಕಾನಂದರ ತತ್ವ-ಆದರ್ಶಗಳು, ವಿಚಾರಧಾರೆಗಳು ಡಾ. ಕೃಷ್ಣ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ.

ಸಮಾಜದಲ್ಲಿ ಉನ್ನತ ಸ್ಥಾನಮಾನದಲ್ಲಿದ್ದರೂ ಕೀರ್ತಿಯನ್ನು ಎಂದೂ ಬೆನ್ನಟ್ಟಿ ಹೋಗದ ಡಾ. ಕೃಷ್ಣ ಅವರು ಸ್ವಭಾವತಃ ವಿವೇಕ-ವಿನಯವಂತಿಕೆಯ ಮಿತಭಾಷಿಯಾಗಿದ್ದಾರೆ. ತಮ್ಮ ಸಾಧನೆಗಳ ಬಗ್ಗೆ ಯಾರಾದರೂ ಪ್ರಶಂಸಿಸಿದರೆ ಕೃಷ್ಣ ಅವರು ಮೌನವಾಗುತ್ತಾರೆ. ಆದರೆ ಶೈಕ್ಷಣಿಕ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಸಾಧಿಸಿರುವ ಸಾಧನೆಗಳೇ ಡಾ. ಕೃಷ್ಣ ಅವರ ಉನ್ನತ ಆದರ್ಶಗಳನ್ನು ಮತ್ತು ಅವರಿಗಿರುವ ಸಾಮಾಜಿಕ ಬದ್ಧತೆಯನ್ನು ನಮಗೆ ತಿಳಿಸಿಕೊಡುತ್ತವೆ. 21,000 ವಿದ್ಯಾರ್ಥಿಗಳು, 1,200 ಸಿಬ್ಬಂದಿ ವರ್ಗದವರು ಮತ್ತು 33 ವಿದ್ಯಾಸಂಸ್ಥೆಗಳು ಇವನ್ನೆಲ್ಲಾ ಹೆಚ್ಚಿನ ಗುಣಮಟ್ಟದಿಂದ ನಿರ್ವಹಿಸುವುದು ಸಾಧಾರಣ ಸಂಗತಿಯಲ್ಲ! ತಮ್ಮ ವಿಸ್ತೃತವಾದ ದೃಷ್ಟಿಕೋನ, ಸಂಘಟನಾಚಾತುರ್ಯ ಹಾಗೂ ಜಾತ್ಯತೀತ ಮನೋಭಾವದಿಂದ ಮಹಾತ್ಮಗಾಂಧಿ ಅವರ ಆದರ್ಶದಲ್ಲಿ

ನಂಜಿಕೆಯಿಟ್ಟಿರುವ ಡಾ.ಕೃಷ್ಣ ಅವರು ಇವನ್ನೆಲ್ಲಾ ಹೆಚ್ಚು ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ತಮ್ಮ ಬದುಕಿನ ಗುರಿಯನ್ನಾಗಿರಿಸಿಕೊಂಡಿರುವ ಉನ್ನತ ಆದರ್ಶಗಳನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ತಮ್ಮ ಕ್ರಿಯಾತ್ಮಕ ಸಂಕಲ್ಪ ಹಾಗೂ ಪ್ರಯತ್ನಬಲದಿಂದ, ಇರುವ ಸಂಸ್ಥೆಗಳನ್ನು ಬಲಪಡಿಸುತ್ತಾ, ಹೊಸ ಸಂಸ್ಥೆಗಳನ್ನು ಕಟ್ಟುತ್ತಿರುವ ಡಾ. ಕೃಷ್ಣ ಅವರು ತಾವೇ ಒಂದು ಸಂಸ್ಥೆಯಾಗಿ ಬೆಳೆದಿರುವುದು ಅಚ್ಚರಿ ಹುಟ್ಟಿಸುತ್ತದೆ. ಹೀಗೆ ಸಾಧನೆಯಿಂದ ಸಾಧನೆಯ ಕಡೆಗೆ ನಡೆಯುವ ಮೂಲಕ ಇತರರಿಗೆ ಸ್ಫೂರ್ತಿಯಾಗಿದ್ದಾರೆ.

'ನನ್ನ ಜೀವನವೇ ನನ್ನ ಸಂದೇಶ' ಎಂಬ ಗಾಂಧೀಜಿಯವರ ಮಾತಿನಂತೆ ಇವರ ಜೀವನ ಇಂದು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯೂ, ಆದರ್ಶವೂ ಆಗಿದೆ.

ಡಾ. ವೂಡೇ ಪಿ. ಕೃಷ್ಣ ಅವರ ಉತ್ಕೃಷ್ಟ ಸಾಧನೆಗಳು, ವಿದ್ಯಾರ್ಥಿಜೀವನ ಮತ್ತು ಅವರು ಹಾದು ಬಂದ ಬದುಕಿನ ವಿವರಗಳನ್ನು ಒಳಗೊಂಡಿರುವ ಈ ಕೃತಿಯನ್ನು ಲೇಖಕರು ಅತ್ಯಂತ ಒಪ್ಪವಾಗಿ ರೂಪಿಸಿದ್ದಾರೆ. ಡಾ. ಕೃಷ್ಣ ಅವರು ತಮ್ಮ ಬದುಕಿನ ಪಯಣದಲ್ಲಿ ಸಾಧಿಸಿರುವ ಸಿದ್ಧಿಗಳನ್ನು ಈ ಕೃತಿ ಅತ್ಯಂತ ಸಂಭ್ರಮದಿಂದ ನಿರೂಪಿಸಿದೆ. ಇಂತಹ ಗೌರವಾನ್ವಿತರ ಬದುಕಿನ ವಿವರಗಳನ್ನು ಓದುಗರಿಗೆ ನೀಡಿದ ಕಾರಣಕ್ಕಾಗಿ ಲೇಖಕರನ್ನು ನಾನು ಅಭಿನಂದಿಸುತ್ತೇನೆ.

ತುಮಕೂರು **ಡಾ. ಜಿ. ವಿ. ಆನಂದಮೂರ್ತಿ**



WHEEL OF LIFE
Gandhian Path

Nadoja Dr. Wooday P. Krishna

ಪರಿವಿಡಿ

ಸಂಪಾದಕರ ಮಾತು : ಡಾ. ಮೀರಾಸಾಬಿಹಳ್ಳಿ ಶಿವಣ್ಣ / ix

ಲೇಖಕರ ನುಡಿ : ಡಾ. ಕೆ. ವಿ. ಮುದ್ದವೀರಪ್ಪ

ಪ್ರೊ. ಎಂ. ಜಿ. ರಂಗಸ್ವಾಮಿ / xiii

ಮುನ್ನುಡಿ: ಬಹುರೂಪಿ : ಡಾ. ಜಿ. ವಿ. ಆನಂದಮೂರ್ತಿ / xv

1	ಬಹುಮುಖಿ ವ್ಯಕ್ತಿತ್ವ	.. 1
2	ವೂಡೇ ಮನೆತನ	.. 11
3	ಬೆಳೆಯುವ ಸಿರಿ	.. 12
4	ವೃತ್ತಿ ಜೀವನ	.. 17
5	ಶೈಕ್ಷಣಿಕ ಅಭಿವೃದ್ಧಿಯ ಹರಿಕಾರ	.. 19
6	ದಕ್ಷ ಆಡಳಿತಗಾರ	.. 23
7	ಶಿಕ್ಷಣದ ಅಂತಾರಾಷ್ಟ್ರೀಕರಣ	.. 25
8	ಸೇವೆಯೆಂಬ ಮಂತ್ರ	.. 29
9	ರಾಷ್ಟ್ರ ಸೇವೆಗೆ ಮುಡಿಪು	.. 34
10	ಯುವಜನ ಸೇವೆ	.. 38
11	ಪಾರದರ್ಶಕ ವ್ಯಕ್ತಿತ್ವ	.. 41
12	ವೂಡೇ ಪ್ರತಿಷ್ಠಾನ	.. 44
13	ಶಿಸ್ತಿನ ಸಿಪಾಯಿ	.. 46
14	ಜೀವನ ಸಂಗಾತಿ	.. 49
15	ಸುದ್ದಿ ಮಾಧ್ಯಮಗಳಲ್ಲಿ ಕೃಷ್ಣ	.. 51
16	ವಿದೇಶಗಳಲ್ಲಿ ಹೆಜ್ಜೆ ಗುರುತುಗಳು	.. 57
17	ಪ್ರಶಸ್ತಿಗಳ ಸಾಲು	.. 60
18	ಪ್ರತಿಷ್ಠಿತ ನಾಡೋಜ ಗೌರವ	.. 65
18	ಸಾಧನೆಗೆ ಸಾವಿರ ಮುಖ	.. 68
19	ಜೀವಮಾನದ ಘಟನಾವಳಿ	.. 71
20	ಗಣ್ಯರ ಕಣ್ಣಲ್ಲಿ ಕೃಷ್ಣ	.. 79
21.	ಕವಿಗಳ ಕಣ್ಣಲ್ಲಿ ಕೃಷ್ಣ	.. 87
22.	ಕೃಷ್ಣ ಕೃತಿಗಳ ಅಂತರಂಗ	.. 91
23.	ಎಷ್ಟು ಉನ್ನತವಾಗಿದೆ ನಮ್ಮ ಉನ್ನತ ಶಿಕ್ಷಣ?	.. 107
23.	ಚಿತ್ರಾವಳಿ	.. 125



ಬಹುಮುಖಿ ವ್ಯಕ್ತಿತ್ವ

ಉತ್ತಮ ಮೌಲ್ಯಗಳನ್ನು ಯುವಜನರಲ್ಲಿ ತುಂಬಿ ಅವರನ್ನು ಜವಾಬ್ದಾರಿಯುತ ಪೌರರನ್ನಾಗಿಸುವ ದೃಷ್ಟಿಯನ್ನೇ ಪ್ರಧಾನವಾಗಿಟ್ಟು ಕೊಂಡಿರುವ ಆದರ್ಶಪ್ರಾಯರಾದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಶಿಕ್ಷಣ ಕ್ಷೇತ್ರದಲ್ಲಿ ಕಂಡ ಅಪರೂಪದ ಸಾಧಕರು. ಕೃಷ್ಣ ಅವರು ಅಧ್ಯಯನಶೀಲರು ಮಾತ್ರವಲ್ಲದೇ, ಉತ್ತಮ ಬರಹಗಾರರು, ಒಳ್ಳೆಯ ವಾಗ್ಮಿ ಕೂಡಾ ಆಗಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ಸಜ್ಜನರು. 'ವಿದ್ಯಂ ದಧಾತಿ ವಿನಯಂ' ಎಂಬ ಮಾತಿಗೆ ವ್ಯಾಖ್ಯಾನದಂತಿದ್ದಾರೆ. ಹಾಗೆಯೇ ಬದುಕುತ್ತಿದ್ದಾರೆ. ಪ್ರಸ್ತುತದಲ್ಲಿ ಶಿಕ್ಷಣ ಕಲಿಯುವ ಯುವ ಸಮುದಾಯವು ಹೀಗೆ ಬದುಕಬೇಕೆಂಬ ಆಸೆಗಣ್ಣಿನಿಂದ ನೋಡುವಂತಿದ್ದಾರೆ. ಅವರ ಏಳಿಗೆಗಾಗಿ ಸದಾ ಸಭೆ ಸಮಾರಂಭಗಳಲ್ಲಿ ಭಾಷಣಗಳಿಂದ ತಿಳಿವಳಿಕೆ ಮೂಡಿಸುತ್ತಿದ್ದಾರೆ.

ಡಾ. ವೂಡೇ ಪಿ. ಕೃಷ್ಣರವರ ನಾಯಕತ್ವದಲ್ಲಿ ನಡೆಯುತ್ತಿರುವ ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳು, ಗಾಂಧೀ ಶಾಂತಿ ಪ್ರತಿಷ್ಠಾನ, ಭಾರತೀಯ ಇಂಜಿನಿಯರುಗಳ ಸಂಸ್ಥೆ ಮೊದಲಾದ ಸಂಸ್ಥೆಗಳಿಗೆ ಆಧ್ಯಾತ್ಮಿಕ, ವೈಚಾರಿಕ, ವೈಜ್ಞಾನಿಕ, ಸಾಂಸ್ಕೃತಿಕ ಸ್ಪರ್ಶ ನೀಡಿ; ಶಿಸ್ತು, ಸಹಕಾರ ಮನೋಭಾವ, ಜಾತ್ಯತೀತ ಸ್ವರೂಪ, ಉತ್ತಮ ಸಂಸ್ಕಾರಗಳ ಗುಣಗಳನ್ನು ತುಂಬಿ ಎಲ್ಲರೂ ಮೆಚ್ಚುವಂತಹ ಆದರ್ಶ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ. ಇದು ಗಮನಾರ್ಹ ಮಾತ್ರವಲ್ಲದೆ ಶ್ಲಾಘನೀಯ ಸಾಧನೆಯೂ ಹೌದು. ಅಧಿಕಾರವಿದ್ದರೂ

ಸಾಮಾಜಿಕ
ಹೋರಾಟಗಾರ
ಅಣ್ಣಾ ಹಜಾರೆ

ನಾಡೋಜ
ಸಾಲುಮರದ
ತಿಮ್ಮಕ್ಕ



2014ರ
ಕರ್ನಾಟಕದ
ಗಾಂಧೀ ಸೇವಾ
ಪ್ರಶಸ್ತಿ
ಪುರಸ್ಕೃತ
ಎಸ್. ಎನ್.
ಸುಬ್ಬರಾವ್

ಆಂಧ್ರ ಪ್ರದೇಶದ
ಅನಂತಪುರ ಜಿಲ್ಲೆಯ
ರಾಯದುರ್ಗದಲ್ಲಿ ನಡೆದ
4ನೇ ಆಂಧ್ರ ಗಡಿನಾಡ
ಕನ್ನಡ ಸಾಹಿತ್ಯ
ಸಮ್ಮೇಳನಾಧ್ಯಕ್ಷ ಭಾಷಣ
ಮಾಡುತ್ತಿರುವ ಕೃಷ್ಣ

ಯಾವುದೇ ಜಿಗುವಿಲ್ಲದೆ ಡಂಭಾಚಾರವಿಲ್ಲದೆ ತಾವಿರುವ ಸಂಸ್ಥೆಗಳಿಗೆ ಸಹಾಯಕ್ಕಾಗಿ ಹುಡುಕಿಕೊಂಡು ಬಂದವರನ್ನು ಬರಿಗೈಲಿ ಕಳುಹಿಸದೆ ಕೈಲಾದ ಸಹಾಯವನ್ನು ಮಾಡುವುದರೊಂದಿಗೆ, ಸಂಸ್ಥೆಯ ಕಾನೂನಿನ ಇತಿಮಿತಿಯಲ್ಲಿ ಆರ್ಥಿಕವಾಗಿ ದುರ್ಬಲರಾದವರಿಗೆ, ಗ್ರಾಮೀಣಭಾಗದ ಪ್ರತಿಭಾವಂತರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶ ಒದಗಿಸಿರುವುದು ಕೂಡಾ ಬಡವರ ಬಗ್ಗೆ, ಅದರಲ್ಲೂ ಯುವಪೀಳಿಗೆ ಬಗ್ಗೆ ಇರುವ ಇವರ ಪ್ರೀತಿ ಎಂತಹದ್ದು ಎಂಬುದು ಅರ್ಥವಾಗುತ್ತದೆ.

ಭಾರತದ ರಾಷ್ಟ್ರಪತಿಗಳು ಅಧ್ಯಕ್ಷರಾಗಿರುವ ಬಹು ದೊಡ್ಡ ಮಾನವೀಯ ಸಂಸ್ಥೆಗಳಾದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಗೂ ಭಾರತೀಯ ಕ್ಷಯರೋಗ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಡಾ. ಕೃಷ್ಣರವರು ಒಬ್ಬರಾಗಿರುವುದು ಕನ್ನಡಿಗರಿಗೆ ಹೆಮ್ಮೆ ತರುವ ಸಂಗತಿ. 2013ರಲ್ಲಿ ರೆಡ್‌ಕ್ರಾಸ್ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ರಾಷ್ಟ್ರಪ್ರಶಸ್ತಿಯಾದ 'ರಾಷ್ಟ್ರಪತಿಗಳ ಚಿನ್ನದ ಪದಕ' ಇವರಿಗೆ ಸಂದಿದೆ.

ನಮ್ಮದು ಪ್ರಗತಿಪರ ರಾಷ್ಟ್ರ. ದೇಶದ ಪುನರ್‌ನಿರ್ಮಾಣದಲ್ಲಿ ವಿದ್ಯಾರ್ಥಿಗಳಲ್ಲಿ ಉನ್ನತ ಆದರ್ಶಗಳನ್ನು ಬೆಳೆಸುವುದರಲ್ಲಿ ವಿದ್ಯಾಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಆದರ್ಶ, ನಿಸ್ವಾರ್ಥ, ಬದ್ಧತೆ ಹಾಗೂ ಅರ್ಪಣಾ ಮನೋಭಾವ ಹೊಂದಿರುವ ಏಕವ್ಯಕ್ತಿ ಕಾರ್ಯವು ಬಹುಜನರ ಮೇಲೆ ವಿಶೇಷ ಪ್ರಭಾವವನ್ನು ಬೀರಬಲ್ಲದು.

ವ್ಯಕ್ತಿಗೆ ಒಂದು ಮುಖ. ಆದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು. ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ, ಬೀಸುವ ಗಾಳಿಯಂತೆ, ಸೂಸುವ ಮಳೆಯಂತೆ, ಹರಿಯುವ ನೀರು ತಾನು ಹರಿದ ಎಡೆಯನ್ನೆಲ್ಲಾ ಸಸ್ಯಶ್ಯಾಮಲಗೊಳಿಸುತ್ತದೆ, ಹೊಚ್ಚ ಹೊಸದಾಗಿಸುತ್ತದೆ. ಉರಿಯುವ ಜ್ಯೋತಿ ತಾನು ಉರಿದೊಡೆ ಕತ್ತಲನ್ನು ನೀಗುತ್ತದೆ, ತನ್ನ ಪರಿಸರವನ್ನು ಬೆಳಗುತ್ತದೆ. ಮೋಡದಿಂದ ಹನಿಹನಿಯಾಗಿ ಸೂಸುವ ಮಳೆ ನೆಲದಲ್ಲಿ ತನ್ನ ಕಾಲೂರಿ ಇಳೆಯ ಬೆಳೆಯ ಕತ್ತೆತ್ತಿಸಿ, ಜೀವಕೋಟಿಗಳ ಬದುಕಿಗೆ ಜೀವರಸವಾಗುತ್ತದೆ. ಇದು ಸಹೃದಯ ಚೇತನಗಳಿಗೆ ಮಾತ್ರ ಸಾಧ್ಯ. ಹಾಗೆ ಇದನ್ನು ಸಾಧ್ಯವಾಗಿಸಿಕೊಂಡಿರುವ, ಸ್ಪಂದನಶೀಲ ಹೃದಯವಂತಿಕೆ ಪಡೆದಿರುವವರ ಮೊದಲ ಸಾಲಿನಲ್ಲಿ ಡಾ. ವೂಡೇ ಪಿ. ಕೃಷ್ಣರವರು ನಿಲ್ಲುತ್ತಾರೆ.

ಪದ್ಮಭೂಷಣ
ಡಾ. ಶ್ರೀ ಬಾಲಗಂಗಾಧರನಾಥ
ಸ್ವಾಮೀಜಿ
ಶ್ರೀ ನಿಜಗುಣಾನಂದ ಸ್ವಾಮೀಜಿ

ಪರಿಸರವಾದಿ
ಪದ್ಮವಿಭೂಷಣ
ಸುಂದರ್‌ಲಾಲ್ ಬಹುಗುಣ
ವಿಜ್ಞಾನಿ ಪದ್ಮವಿಭೂಷಣ
ಪ್ರೊ. ಯು.ಆರ್. ರಾವ್

ಜ್ಞಾನಪೀಠ ಪ್ರಶಸ್ತಿ
ಪುರಸ್ಕೃತ
ಡಾ. ಯು. ಆರ್. ಅನಂತಮೂರ್ತಿ
ವಿಮರ್ಶಕ
ಡಾ. ಸಿ. ಎನ್. ರಾಮಚಂದ್ರನ್

ಜ್ಞಾನಪೀಠ ಪ್ರಶಸ್ತಿ
ಪುರಸ್ಕೃತ
ಡಾ. ಚಂದ್ರಶೇಖರ
ಕಂಬಾರ

ಬಹುಶಃ ಅನಾಮಧೇಯವಾಗಿ ಕಳೆದು ಹೋಗಬಹುದಾಗಿದ್ದ ತನ್ನ ಹಳ್ಳಿಯ ಹೆಸರನ್ನು ತನ್ನ ಹೆಸರಿನೊಂದಿಗೆ ಸಂಲಗ್ನಗೊಳಿಸುವ ಮೂಲಕ ಕಾಲಗರ್ಭದಲ್ಲಿ ಕರಗಿಹೋದ ತಮ್ಮ ಮೂಲ ಗ್ರಾಮವನ್ನು ಜೀವಂತವಾಗಿ ಇಟ್ಟಿದ್ದಾರೆ. ಹೀಗಾಗಿ ವೂಡೇ ಇಂದು ಅಸ್ತಿತ್ವದಲ್ಲಿಲ್ಲದಿದ್ದರೂ ಗಮನಾರ್ಹ ಸ್ಥಳವಾಗಿದೆ. ನೆನಪಿನ ರಂಗಸ್ಥಳದಲ್ಲಿ ಚಿರಂತನವಾಗಿದೆ. ಇದಕ್ಕೆ ಕಾರಣ ಡಾ.ವೂಡೇ ಪಿ. ಕೃಷ್ಣ. ನಾನಿಂಥ ಊರಿನವನು ಎಂಬ ಹೆಮ್ಮೆ ವ್ಯಕ್ತಿಯದಾದರೆ, ನನ್ನ ಮಡಿಲಲ್ಲಿ ಇಂಥವನು ಬದುಕಿದ್ದನಲ್ಲಾ ಎಂಬ ಹಿಗ್ಗು ಊರಿನ ಸುತ್ತಿನ ಪರಿಸರದ್ದು.

ಅನ್ಯರ ಮನನೋಯಿಸುವ ಮಾತನ್ನು ಕೃಷ್ಣರವರು ಎಂದೂ ಆಡಿದವರಲ್ಲ. ಸೌಮ್ಯತೆಯೇ ಮೈವೆತ್ತ ಮೂರ್ತಿಯಂತಿರುವ ಡಾ. ಕೃಷ್ಣ ತಮ್ಮ ಬಾಳಿನುದ್ದಕ್ಕೂ ತಮ್ಮ ಉದಾತ್ತ ವ್ಯಕ್ತಿತ್ವವನ್ನು ಮೆರೆದವರು. ಸರಳ ಸಜ್ಜನಿಕೆಯ ಸಾಕಾರಮೂರ್ತಿ, ಅಷ್ಟೇ ಪ್ರಮಾಣದ ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ಘನತೆ ಗೌರವಗಳು ಇವರಲ್ಲಿ ಮನೆಮಾಡಿಕೊಂಡಿವೆ. ಇತರರಿಗಾಗಿ ತಾವು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವನ್ನು, ಫಲಾಪೇಕ್ಷೆಯನ್ನು ಎಂದೂ ನಿರೀಕ್ಷಿಸಿದವರಲ್ಲ. ಇವರಿಗೆ ಮಾರ್ಗವು ಗುರಿಯಷ್ಟೇ ಮುಖ್ಯ. ಜನರ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿರುವ ಕರ್ಮಸಿದ್ಧಾಂತದಲ್ಲಿ ಇವರಿಗೆ ನಂಬಿಕೆ. ಶಿಕ್ಷಣ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿದ ಇವರನ್ನು ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಗಾಂಧೀಜಿ, ಅಂಬೇಡ್ಕರ್‌ರವರ ವಿಚಾರಧಾರೆಗಳು, ತಂದೆ ತಾಯಿಯರ ಮೌಲ್ಯಯುತ ಬದುಕಿನ ಅಂಶಗಳು ವಿದ್ಯಾರ್ಥಿ ದೆಸೆಯಿಂದಲೇ ಪ್ರಭಾವಿಸಿ ಮುನ್ನಡೆಸಿವೆ.

ಕೃಷ್ಣರವರ ಕಾರ್ಯತತ್ಪರತೆ ಇವರನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತು. ಸರಳಜೀವಿ, ಸ್ನೇಹಶೀಲ ವ್ಯಕ್ತಿ. ದೇಶ–ವಿದೇಶಗಳಲ್ಲಿ ಎಷ್ಟೇ ದೊಡ್ಡ ಸಭೆ–ಸಮಾರಂಭವಿರಲಿ ಇವರ ವೇಷಭೂಷಣದಲ್ಲಿ ಯಾವುದೇ ಬದಲಾವಣೆಯೂ ಇಲ್ಲ. ಮಾಮೂಲಿಯಂತೆ ಶ್ವೇತ ಶುಭ್ರವಸ್ತ್ರಧಾರಿ. ಒಮ್ಮೆ ಅಮೆರಿಕದ ಸಿವಿಲ್ ಇಂಜಿನಿಯರುಗಳ ಸೊಸೈಟಿ ಸಮಾರಂಭದಲ್ಲಿ ಸೊಸೈಟಿ ಅಧ್ಯಕ್ಷರಾದ ಡಾ. ರಾಬರ್ಟ್ ಡಿ. ಸ್ಟೀವನ್ಸ್‌ರವರು ಇವರ ಸರಳ ಉಡುಪನ್ನು ಮುಟ್ಟಿನೋಡಿ ಮೆಚ್ಚಿದರು.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಎಷ್ಟು ವರ್ಷ ಬದುಕಿದ್ದಾನೆ ಎನ್ನುವುದಕ್ಕಿಂತ ಹೇಗೆ ಬದುಕಿದ್ದಾನೆ ಎಂಬ ಸಂಗತಿ ಬಹು ಮುಖ್ಯ. ಈ ನಿಟ್ಟಿನಲ್ಲಿ ಕೃಷ್ಣರ ಬಗ್ಗೆ ಯೋಚಿಸಿದಾಗ ಇವರ ಅನನ್ಯತೆ ನಮ್ಮ ಕಣ್ಣಿಗೆ ರಾಚುತ್ತದೆ. ಇವರ ಸರಳತೆ, ಆದರ್ಶ, ನಿರುಪದ್ರವಿ ಬದುಕು ಇಂದಿನ ಯುವಜನಾಂಗಕ್ಕೆ



ಜಸ್ಟೀಸ್ ನಿಟ್ಟೂರು
ಶ್ರೀನಿವಾಸರಾಯರು



ನಟ–ನಿರ್ದೇಶಕ
ಸಿ. ಆರ್. ಸಿಂಹ



ಮಾಜಿ ಪ್ರಧಾನಿ
ಎಚ್. ಡಿ. ದೇವೇಗೌಡ



ಕರ್ನಾಟಕ ರಾಜ್ಯಪಾಲ
ಟಿ. ಎನ್. ಚತುರ್ವೇದಿ
ಮತ್ತು ಮುಖ್ಯಮಂತ್ರಿ
ಎಚ್. ಡಿ. ಕುಮಾರಸ್ವಾಮಿ



ಮಾಜಿ ಕೇಂದ್ರ ಸಚಿವ ಎಂ. ವಿ. ರಾಜಶೇಖರನ್
ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ. ಹೊ. ಶ್ರೀನಿವಾಸಯ್ಯ

ಮಾರ್ಗದರ್ಶಕವಾದುದು. ಕೃಷ್ಣರವರದು ಮೇರು ವ್ಯಕ್ತಿತ್ವ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ವೈಚಾರಿಕವಾಗಿ ಯಾವುದೇ ಕ್ಷೇತ್ರದಲ್ಲಿ ತಮ್ಮ ಮಿತಿಯಲ್ಲಿ ನ್ಯಾಯವನ್ನು ಸಲ್ಲಿಸುವ ದಕ್ಷತೆ ಇವರದು.

ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಪ್ರತಿಭಾವಂತರೆಂದರೆ ಇವರಿಗೆ ಅಚ್ಚುಮೆಚ್ಚು. ಅರ್ಹರನ್ನು ಸನ್ಮಾನಿಸಿ ಗೌರವಿಸಲು ಇವರು ಸದಾ ಮುಂದು. ಜ್ಞಾನದ ಬುತ್ತಿಯನ್ನು ಹೊಂದುವುದು ಎಲ್ಲರಿಂದಲೂ ಸಾಧ್ಯವಾಗುವುದಿಲ್ಲ. ಅಂತಹವರನ್ನು ತಾವಿರುವ ಸಂಸ್ಥೆಗಳಿಗೆ ಕರೆಯಿಸಿ, ವಿದ್ಯಾರ್ಥಿಗಳಿಗೆ ಅವರ ಸಾಧನೆಯ ಮುಖಗಳನ್ನು ತಿಳಿಸಿ, ಆ ರೀತಿಯಲ್ಲಿ ಬೆಳೆಯಲು ಪ್ರೇರೇಪಿಸುತ್ತಾರೆ.

ರಾಜಕೀಯ ಸ್ಥಾನಮಾನಗಳಿಗೆ ಎಂದೂ ಆಸೆಪಡದೆ ರಾಜಕೀಯೇತರ ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ಪ್ರಬಲವಾಗಿ ಗುರುತಿಸಿಕೊಂಡವರು. ರಾಜ್ಯ ಹಾಗೂ ರಾಷ್ಟ್ರಮಟ್ಟದ ಖ್ಯಾತಿ ಪಡೆದ ಸುಸಂಸ್ಕೃತ ಮುತ್ಸದ್ಧಿ. ಇವರ ಬದುಕು ಹಾಗೂ ಅಪೂರ್ವ ಸಾಧನೆಗಳು ಸದಾ ಕಾಲಕ್ಕೂ ಸರ್ವರಿಗೂ ಸ್ಫೂರ್ತಿದಾಯಕ. ಮುಂದಿನ ಪೀಳಿಗೆ ಬಾಳಿದರೆ ಹೀಗೇ ಬಾಳಬೇಕು ಎಂಬ ಸಂದೇಶವನ್ನು ನೀಡುವ ಇವರ ಬದುಕು ಮಾರ್ಗದರ್ಶಕವಾದುದು. ಅಂಥವರ ಬದುಕಿನತ್ತ ಒಂದು ಪಕ್ಷಿನೋಟ ಇದಾಗಿದೆ.

❖

ವೂಡೇ ಮನೆತನ

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಪರಶುರಾಮಪುರಕ್ಕೆ ಸಮೀಪದ ಇಂದಿನ ಆಂಧ್ರಪ್ರದೇಶಕ್ಕೆ ಸೇರಿದ 'ವೂಡೇ' ಗ್ರಾಮ, ಕೃಷ್ಣರವರ ಪೂರ್ವಿಕರು ಹುಟ್ಟಿದ ಊರು. ವೂಡೇದ ಹನುಮಂತಪ್ಪನವರು ವೂಡೇ ಪಿ. ಕೃಷ್ಣರವರ ಮುತ್ತಾತಂದಿರು. ಇಂದು ಬೇಚರಕ್ ಗ್ರಾಮವಾಗಿರುವ ವೂಡೇದಿಂದ ಕ್ರಿ.ಶ. 1800ರಷ್ಟೊತ್ತಿಗೆ ಕಾರಣಾಂತರಗಳಿಂದ ಹೊರಟು ಬಂದು ಬೆಂಗಳೂರು ನಗರದಲ್ಲಿ ನೆಲೆಸಿ ಬೇರೆ ಬೇರೆ ವ್ಯಾಪಾರದಲ್ಲಿ ತೊಡಗಿ ನಂತರ ಮ್ಯಾಂಗನೀಸ್ ಗಣಿಯ ಉದ್ಯಮ ನಡೆಸಿದರು. ಅವರು ವ್ಯಾಪಾರದಂತೆ ಸಾಹಿತ್ಯದಲ್ಲೂ ಆಸಕ್ತರು. ಅವರು ಗಮಕ ಕಲೆಯಲ್ಲಿ ಪಾಂಡಿತ್ಯವನ್ನು ಪಡೆದವರು. 'ಭಾರತವಾಚನ ಪ್ರವೀಣ' ಎಂದು ಹೆಸರಾದವರು. ಇವರ ಪುತ್ರ ಡಬ್ಲ್ಯೂ. ಹೆಚ್. ಹನುಮಂತಪ್ಪ (ಸೀನಿಯರ್) ರವರ ಸಾಧನೆ ಅಮೋಘವಾದದ್ದು. ಬೆಂಗಳೂರಿನ ಲಂಡನ್ ಮಿಷನ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ಇಂಗ್ಲಿಷ್ ಮತ್ತು ಮಾತೃಭಾಷೆಗಳೆರಡರಲ್ಲೂ ಏಕಕಾಲಕ್ಕೆ ಪಾಂಡಿತ್ಯವನ್ನು ಸಾಧಿಸಿದವರು. ಅಂದಿನ ಪ್ರತಿಷ್ಠಿತ ಸಿವಿಲ್ ಇಂಜಿನಿಯರಿಂಗ್ ಕಂಟ್ರಾಕ್ಟರ್‌ಗಳಲ್ಲಿ ಒಬ್ಬರಾದ ಇವರು ಅಂದು ಕಟ್ಟಿದ ಅಣೆಕಟ್ಟು, ಕೆರೆ, ಸರ್ಕಾರಿ ಕಟ್ಟಡಗಳು ಇಂದಿಗೂ ಅವರ ಕಾರ್ಯಕ್ಷಮತೆಯ ಪ್ರತೀಕವಾಗಿ ನಮ್ಮ ಮುಂದಿವೆ. ಆಗಿನ 'ಮೈಸೂರು ಕಾಂಗ್ರೆಸ್' ಸಂಸ್ಥಾಪಕರಲ್ಲಿ ಇವರು ಮೊದಲಿಗರು. ಬ್ರಹ್ಮಸಮಾಜ ಸ್ಥಾಪಕ ರಾಜಾ ರಾಮ್‌ಮೋಹನ್‌ರಾಯ್‌ರವರ ಸಿದ್ಧಾಂತಗಳಿಗೆ ತಮ್ಮನ್ನು

ತಾತ ಡಬ್ಲ್ಯೂ. ಹೆಚ್. ಹನುಮಂತಪ್ಪ (ಸೀನಿಯರ್)

ಸಮರ್ಪಿಸಿಕೊಂಡು ಬೆಳೆದವರು. ಬೆಂಗಳೂರು ನಗರದ ಮುನಿಸಿಪಲ್ ಕೌನ್ಸಿಲರ್ ಆಗಿ 1920ರಿಂದ 1956ರವರೆಗೂ ನಿರಂತರ 36 ವರ್ಷಗಳ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದು. 1940–41ರಲ್ಲಿ ಬೆಂಗಳೂರು ನಗರ ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಕೀರ್ತಿ ಇವರದು. ಇವರ ಯೋಜನೆ ಹಾಗೂ ಂಯೋಚನೆಗಳೆಲ್ಲವೂ ಅತ್ಯಂತ ಎತ್ತರದಲ್ಲಿರುತ್ತಿದ್ದವು. ಡಬ್ಲ್ಯೂ.ಹೆಚ್. ಹನುಮಂತಪ್ಪನವರು ರಾಜಾ ರಾಮ್ ಮೋಹನ್‌ರಾಯ್ ಅವರ ಅಭಿಮಾನಿಯಾದ್ದರಿಂದ ತಾವು ನಿರ್ಮಿಸಿದ ಕೆಂಗಲ್ ಹನುಮಂತಯ್ಯ ರಸ್ತೆಯ ರಾಜಾ ರಾಮ್‌ಮೋಹನ್‌ರಾಯ್ ಬಡಾವಣೆಯಲ್ಲಿ ಒಂದು ರಾಜಾರಾಮ್ ಮೋಹನ್‌ರಾಯ್ ಸ್ಮಾರಕ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಗೆ ಕಾರಣರಾದರು.

ತಂದೆ ಡಬ್ಲ್ಯೂ. ಹೆಚ್. ಪುಟ್ಟಯ್ಯ, ತಾಯಿ ದೊಡ್ಡಮ್ಮಯ್ಯ

ಇಂಥ ಕೌಟಂಬಿಕ ಹಿನ್ನೆಲೆಯಿಂದ ಬಂದ ತಂದೆ ಡಬ್ಲ್ಯೂ.ಹೆಚ್.ಪುಟ್ಟಯ್ಯ-ತಾಯಿ ದೊಡ್ಡಮ್ಮಯ್ಯ ಅವರಿಗೆ ಅಷ್ಟಮ ಗರ್ಭ ಸಂಜಾತರಾಗಿ ಕೃಷ್ಣರವರು 1963 ಫೆಬ್ರವರಿ 1ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.

ಕೃಷ್ಣರವರ ಬಾಲ್ಯದಲ್ಲಿ ಪ್ರಭಾವ ಬೀರಿದ ಕುಟುಂಬ ಸದಸ್ಯರಲ್ಲಿ ದೊಡ್ಡಪ್ಪ ಡಬ್ಲ್ಯೂ. ಹೆಚ್. ಹನುಮಂತಪ್ಪ (ಜೂನಿಯರ್) ಹಾಗೂ ತಂದೆ ಡಬ್ಲ್ಯೂ. ಹೆಚ್. ಪುಟ್ಟಯ್ಯನವರು ಪ್ರಮುಖರು. ಪುಟ್ಟಯ್ಯನವರು ಸರಳತೆಗೆ, ಸ್ವಾವಲಂಬನೆಗೆ, ಶಿಸ್ತಿಗೆ, ಖಚಿತ ತೀರ್ಮಾನಗಳಿಗೆ, ಮಾರ್ಗದರ್ಶನಕ್ಕೆ, ನೇರ ನಡೆ-ನುಡಿಗಳಿಗೆ ಹೆಸರಾದವರು. ಇವರು ದೇಶಪ್ರೇಮದ ಜೊತೆಗೆ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದು, ಎಲೆಮರೆಕಾಯಿಯಂತೆ ಬದುಕಿ ಬಾಳಿದರು. ಸರಳ ಜೀವನ ನಡೆಸುವುದರ ಜೊತೆಗೆ ಇವರು ಸದಾ ಖಾದಿಧಾರಿಯೂ ಆಗಿದ್ದರು. ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದುದರಿಂದ ಸೀನಿಯರ್ ಇಂಟರ್‌ಮೀಡಿಯೆಟ್‌ನಲ್ಲೇ ಕಾಲೇಜು ವಿದ್ಯಾಭ್ಯಾಸವನ್ನು ಬಿಟ್ಟರು. ಆದರೆ ಸ್ವಾತಂತ್ರ್ಯ ಬಂದ ಮೇಲೆ ರಾಜಕೀಯ ಕ್ಷೇತ್ರಗಳಿಂದ ದೂರ ಉಳಿದರು.

ಉದ್ಯಮಿಯಾಗಿದ್ದರೂ ಗಾಂಧೀ ತತ್ವಗಳಲ್ಲಿ ನಂಬಿಕೆ ಇಟ್ಟಿದ್ದರು. ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ಪ್ರಸ್ತುತ ಇರುವ ವಸಂತನಗರದಲ್ಲಿ ವಿದ್ಯಾರ್ಥಿ ನಿಲಯ, ಸಾವನದುರ್ಗದಲ್ಲಿ ಒಂದು ಕಲ್ಯಾಣ ಮಂಟಪ, ಕಿಲಾರಿ ರಸ್ತೆಯಲ್ಲಿ ದೇವಸ್ಥಾನ ನಿರ್ಮಾಣಗಳು ಇವರ ಕಾರ್ಯಕ್ಷಮತೆಯನ್ನು ಎತ್ತಿ ತೋರಿಸುತ್ತವೆ.

ಹಿರಿಯರ ಆದರ್ಶ, ಸಂಸ್ಕೃತಿಯ ಶ್ರೀಮಂತಿಕೆ, ಪ್ರೀತಿಯ ಅವಿಭಕ್ತ ಕುಟುಂಬದ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದುದು ಕೃಷ್ಣರವರ ಬಾಳಿಗೆ ಒಳ್ಳೆಯ ಅಡಿಪಾಯ ಹಾಕಿತು. ಇವರ ತಾಯಿ ದೊಡ್ಡಮ್ಮಯ್ಯ ಮಕ್ಕಳನ್ನು ಅವಿಭಕ್ತ ಕುಟುಂಬದಲ್ಲಿದ್ದರೂ ಮೇರು ಎತ್ತರಕ್ಕೆ ಬೆಳೆಸಿದರು. ಕೃಷ್ಣರವರ ಸಹೋದರ-ಸಹೋದರಿಯರು ಈ ನಾಡಿನ ಉತ್ತಮ ಪ್ರಜೆಗಳಾಗಿ ಬಾಳುತ್ತಿರುವಲ್ಲಿ ಅವರ ಕೊಡುಗೆ ಬಹು ದೊಡ್ಡದು. ಹೆಸರಿಗೆ ತಕ್ಕಂತೆ ಅವರು ನಿಜಕ್ಕೂ ದೊಡ್ಡಮ್ಮಯ್ಯನೇ ಆಗಿದ್ದರು.

ವೂಡೇ ಮನೆತನದ ವಂಶವೃಕ್ಷ

ಕುಂಚಿಟಿಗ ಒಕ್ಕಲಿಗರ ಅಳುವನೋರ ಗೋತ್ರದ

ವೂಡೇದ ಹನುಮಂತಪ್ಪ ಬಿನ್ ಹನುಮಂತಪ್ಪ, ಕೃಷಿಕರು



ಬೆಳೆಯುವ ಸಿರಿ

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಿಂದ ಬಂದ ಶ್ರೀಯುತರ ರಕ್ತದಲ್ಲಿ ರಾಷ್ಟ್ರಭಕ್ತಿ, ಸಾಮಾಜಿಕ ಬದ್ಧತೆ, ಪರೋಪಕಾರ ಇವೇ ಮೊದಲಾದ ಗುಣಗಳು ಸಹಜವಾಗಿ ಮೈದಾಳಿವೆ. ಕೃಷ್ಣರ ಜೀವನದಲ್ಲಿ ಸ್ವಾಮಿ ವಿವೇಕಾನಂದರ 'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ' ಎಂಬುದನ್ನು ಅಕ್ಷರಶಃ ಅಳವಡಿಸಿಕೊಂಡಿದ್ದಾರೆ.

ಡಾ.ಕೃಷ್ಣರವರ ಪ್ರೌಢಶಾಲಾ ವಿದ್ಯಾಭ್ಯಾಸ ಮೈಸೂರಿನ ಹೆಸರಾಂತ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಪ್ರಾರಂಭವಾಯಿತು. ಬಹುಶಃ ಇವರ ಜೀವನದ ನಿರ್ಣಾಯಕ ಘಟ್ಟ ಆರಂಭವಾದದ್ದು ಇಲ್ಲಿಂದಲೇ. ಇಲ್ಲಿ ಇವರು ಶ್ರೀ ರಾಮಕೃಷ್ಣ ಪರಮಹಂಸರ ಹಾಗೂ ಸ್ವಾಮಿ ವಿವೇಕಾನಂದರ ತತ್ವಗಳಿಗೆ ಮಾರುಹೋದರು. 'ಒಳ್ಳೆಯದನ್ನೇ ಯೋಚಿಸು, ಒಳ್ಳೆಯದನ್ನೇ ಮಾಡು' ಇದು ಇವರ ಬದುಕಿನ ಮಂತ್ರ. 'ಉತ್ತಮ ಜನರು, ಉತ್ತಮ ಬಾಂಧವ್ಯವನ್ನು ಸಂಸ್ಥೆಗಳೊಡನೆ ಬೆಳೆಸಿಕೊಂಡಾಗ ನಾವೂ ಉತ್ತಮರಾಗುತ್ತೇವೆ' ಎಂಬುದು ಇವರ ಅಭಿಮತ. ಸ್ವಾಮಿ ವಿವೇಕಾನಂದ! ಇದು ಬರಿಯ ಹೆಸರಲ್ಲ, ಇದೊಂದು ಶಕ್ತಿ, ಅಸೀಮ ಸ್ಫೂರ್ತಿಯ ಸೆಲೆ. ಅವರು ನಡೆದು ತೋರಿದ ದಾರಿಯಲ್ಲಿ ಹೆಜ್ಜೆಗಳನ್ನಿಡುತ್ತಾ ನಡೆದು ಬದುಕಿನ ಉನ್ನತ ಮಜಲುಗಳಿಗೇರಿದ ಯುವಕರ ಸಂಖ್ಯೆ ಅದೆಷ್ಟೋ. ಇವರ ಹಾದಿಯಲ್ಲಿ ನಡೆದ ಕೃಷ್ಣ ಅವರು ಒಬ್ಬರು. ವಿದ್ಯಾರ್ಥಿ ದೆಸೆಯಲ್ಲಿಯೇ ವಿವೇಕಾನಂದರ ಸಮಗ್ರ ಸಾಹಿತ್ಯವನ್ನು ಅಮೂಲಾಗ್ರವಾಗಿ



1977, ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಪರಿಷತ್ತಿನ ಪದಾಧಿಕಾರಿಗಳೊಂದಿಗೆ ಸ್ವಾಮಿ ಸುರೇಶಾನಂದ ಸ್ವಾಮಿ ವೀರೇಶ್ವರಾನಂದ, ಸ್ವಾಮಿ ಸೋಮನಾಥಾನಂದ (ಎರಡನೇ ಸಾಲಿನ ಎಡತುದಿಯಲ್ಲಿ ಕೃಷ್ಣ)

ತಪಸ್ಸಿನಂತೆ ಓದಿ ಪ್ರಭಾವಿತರಾದರು. ವಿವೇಕಾನಂದರ ವಾಣಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಅಲ್ಲಿ ಸ್ವಾಮಿ ಜಗದಾತ್ಮಾನಂದ, ಸ್ವಾಮಿ ಸುರೇಶಾನಂದ, ಸ್ವಾಮಿ ಹರ್ಷಾನಂದ, ಸ್ವಾಮಿ ಅಗೇಹಾನಂದ ಇವರ ಮಾರ್ಗದರ್ಶನ ಇವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದವು. ಒಮ್ಮೆ ಸ್ವಾಮಿ ರಂಗನಾಥಾನಂದರು ತಮ್ಮ ಭಾಷಣದಲ್ಲಿ 'ಮಾನವನ ಧ್ಯೇಯ ಬರೀ ಹಣ ಸಂಪಾದಿಸುವುದಕ್ಕೆ ಮಾತ್ರ ಸೀಮಿತವಾಗಬಾರದು' ಎಂದು ಹೇಳಿದ ಮಾತುಗಳು ವಿವೇಕ ವಾಣಿಯಂತೆ ಇಂದಿಗೂ ಇವರ ಜೀವನದುದ್ದಕ್ಕೂ ಮಾರ್ಗದರ್ಶಕವಾಗಿವೆ. ರಾಮಕೃಷ್ಣಾಶ್ರಮದಲ್ಲಿ ಮಾಡಿದ ವಿದ್ಯಾಭ್ಯಾಸ ಇವರ ಬದುಕಿಗೆ ಬೆಳಕು ನೀಡಿತು. ಕೃಷ್ಣರವರು ಇದನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುವುದರ ಜೊತೆಗೆ 'ತಾಯಿಯೇ ನನ್ನ ಮೊದಲ ಗುರು' ಎನ್ನುವುದನ್ನು ಮರೆಯುವುದಿಲ್ಲ.

ಒಮ್ಮೆ ವೃದ್ಧ ದಂಪತಿಗಳು ರೈಲ್ವೆಸ್ಟೇಷನ್‌ನಲ್ಲಿ ತಮ್ಮ ಲಗೇಜು ಸಾಗಿಸಲು ಪರದಾಡುತ್ತಿದ್ದರು. ಇದನ್ನು ಗಮನಿಸಿದ ಕೃಷ್ಣರವರು ತಕ್ಷಣವೇ ಮುಂದೆ ಬಂದು ಅವರ ಲಗೇಜನ್ನು ಹೊತ್ತು ಬೋಗಿಗೆ ಸಾಗಿಸಿದರು. ದಂಪತಿ ಕೃಷ್ಣರವರನ್ನು ಕೂಲಿ ಆಳು ಎಂದು ಭಾವಿಸಿ ಹಣ ಕೊಡಲು ಬಂದರು. ಆಗ ಕೃಷ್ಣರವರು ನಗುನಗುತ್ತಲೇ, 'ನಾನು ರಾಮಕೃಷ್ಣಾಶ್ರಮದ ವಿದ್ಯಾರ್ಥಿ, ನನಗೆ ಏನೂ ಪ್ರತಿಫಲ ಬೇಡ, ಅದನ್ನು ನಾನು ನಿರೀಕ್ಷಿಸುವುದಿಲ್ಲ' ಎಂದು ವಿನಮ್ರವಾಗಿ ಹೇಳಿದರು. ಬೆಳೆಯುವ ಪೈರು ಮೊಳಕೆಯಲ್ಲೇ ತನ್ನ ಗುಣ ತೋರಿಸುತ್ತದೆ ಎಂಬುದಕ್ಕೆ

ಇದೊಂದು ಸಣ್ಣ ನಿದರ್ಶನ. ತಾನು ಮಾಡುವ ಕೆಲಸ ಕನಿಷ್ಠದ್ದು, ಶ್ರೇಷ್ಠದ್ದು ಎಂಬುದಕ್ಕಿಂತ ಪರರಿಗೆ, ಅದರಲ್ಲೂ ದುರ್ಬಲರಿಗೆ ಅನುಕೂಲವಾಗುತ್ತದೆಯಾ ಎಂಬ ಚಿಂತನೆ ಮಾತ್ರ ಕೃಷ್ಣರಿಗೆ ಮುಖ್ಯವಾಗಿತ್ತು ಎಂಬುದು ತಿಳಿಯುತ್ತದೆ.

ಚುರುಕುತನ, ಅದ್ಭುತ ಜ್ಞಾಪಕಶಕ್ತಿ, ನಿರರ್ಗಳ ವಾಕ್‌ಕೌಶಲ್ಯಗಳು ಬಹುಶಃ ಬಾಲ್ಯದಿಂದಲೇ ಇವರಿಗೆ ಒಲಿದು ಬಂದ ಬಂಡವಾಳಗಳು. ಬದುಕಿನಲ್ಲಿ ಎಷ್ಟು ಹಣ ಗಳಿಸಿದ್ದೇವೆ? ಎಷ್ಟು ಆಸ್ತಿ ಮಾಡಿದ್ದೇವೆ, ಯಾವ ಅಧಿಕಾರವನ್ನು ದಕ್ಕಿಸಿಕೊಳ್ಳಬೇಕು ಇತ್ಯಾದಿಗಳ ಬಗ್ಗೆ ಆಲೋಚಿಸುವಂತಹವರ ಸಂಖ್ಯೆಯೇ ಸಮಾಜದಲ್ಲಿ ಹೆಚ್ಚಾಗಿರುವಾಗ, ಸಮಾಜಕ್ಕೆ ನಮ್ಮ ಕೊಡುಗೆ ಏನು? ಇತರರ ಕಷ್ಟ ಪರಿಹಾರಗಳಲ್ಲಿ ಹೇಗೆ ಭಾಗಿಯಾಗಿದ್ದೇವೆ ಎಂದು ಪ್ರಶ್ನಿಸಿಕೊಂಡು ಬದುಕುವ ಅಪರೂಪದವರಲ್ಲಿ ಅಪರೂಪದ ವ್ಯಕ್ತಿಗಳ ಸಾಲಿನಲ್ಲಿ ಕೃಷ್ಣ ಅವರೂ ಒಬ್ಬರು. ಇವರ ದೈನಂದಿನ ಬದುಕಿನ ಪುಟಗಳಲ್ಲಿ ಒಮ್ಮೆ ಇಣುಕಿ ನೋಡಿದಾಗ ಒಂದು ವ್ಯರ್ಥ ಕ್ಷಣವೂ ಸಿಗಲಾರದೇನೋ. ಹೀಗೆ ಬದುಕಿನಲ್ಲಿ ಪ್ರತಿಕ್ಷಣವೂ ಒಂದಲ್ಲ ಒಂದರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಅಧ್ಯಯನ, ಅವಗಾಹನೆ, ಚಿಂತನೆ, ಅನುಭವಗಳ ಮೂಲಕ ಇವರು ಅಪಾರ ಜ್ಞಾನವನ್ನು ಸಂಪಾದಿಸಿದ್ದಾರೆ. ಯಾವುದೇ ವಿಷಯಗಳ ಬಗ್ಗೆ ಇವರು ಗಂಟೆಗಟ್ಟಲೆ ಅಧಿಕೃತವಾಗಿ ನಿರರ್ಗಳವಾಗಿ ಮಾತನಾಡಬಲ್ಲ ಪ್ರೌಢಿಮೆ ಪಡೆದಿದ್ದಾರೆ. ಇಂತಹ ಸಾಧನೆ ಸಾಧ್ಯವಾಗಿರುವುದು ಅವರಲ್ಲಿರುವ ತಾದ್ಯಾತ್ಮತೆಯೇ ಈ ಮಟ್ಟಕ್ಕೆ ಬೆಳೆಸಿದೆ.

ಇವರಲ್ಲಿರುವ ಮತ್ತೊಂದು ವಿಶೇಷವೆಂದರೆ ಯಾವುದೇ ಕಾರಣಕ್ಕಾಗಲೀ ಯಾರನ್ನೂ ದ್ವೇಷಿಸುವುದಿಲ್ಲ. ಯಾರ ಬಗ್ಗೆಯೂ ಕೆಟ್ಟ ನುಡಿಗಳನ್ನಾಡುವುದಿಲ್ಲ, ಅಸೂಯೆ ಪಡುವುದಿಲ್ಲ. ಯುವ ಪೀಳಿಗೆ ಬಗ್ಗೆ ಇವರಿಗೆ ತುಂಬು ಭರವಸೆ ಇದೆ. ನಿರಂತರ ಕ್ರಿಯಾಶೀಲತೆ, ಬತ್ತದ ಉತ್ಸಾಹ, ಸೇವಾನಿಷ್ಠೆ, ಮಾನವ ಪ್ರೀತಿ– ಇವು ಇವರ ವ್ಯಕ್ತಿತ್ವದ ಅವಿಚ್ಛಿನ್ನ ಭಾಗಗಳು. ಇವರು ನಮ್ಮ ಸಾಂಸ್ಕೃತಿಕ ಪ್ರತಿನಿಧಿ ಎಂದರೆ ತಪ್ಪಾಗಲಾರದು.

ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ತಾಂತ್ರಿಕ ಮಹಾವಿದ್ಯಾಲಯಕ್ಕೆ ಸೇರಿದರು. ವಿದ್ಯಾರ್ಥಿ ಚಳವಳಿಗಳಲ್ಲಿಯೂ ಇವರು ಮುಂಚೂಣಿಯಲ್ಲಿದ್ದರು. ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗಲೇ ಗೋಕಾಕ್ ಚಳವಳಿಯ ಪ್ರಭಾವಕ್ಕೊಳಗಾಗಿ ತಾವೇ ಸ್ಥಾಪಿಸಿದ ಕಾಲೇಜು 'ಕನ್ನಡ ಸಂಘ'ದ ಮೂಲಕ ಧರಣಿ ಕುಳಿತು ಬಂಧಿತರಾಗಿ, ತಾಂತ್ರಿಕ ವಿದ್ಯಾರ್ಥಿಗಳೂ

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಹಳೆಯ ವಿದ್ಯಾರ್ಥಿಗಳ
ವಾರ್ಷಿಕ ಆಧ್ಯಾತ್ಮಿಕ ಶಿಬಿರ– 2007

ಕನ್ನಡ ಹೋರಾಟದಲ್ಲಿ ಭಾಗವಹಿಸಿದ ದಾಖಲೆಯನ್ನು ನಿರ್ಮಿಸಿದರು. ತಾಂತ್ರಿಕ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಪೋಸ್ಟರ್‌ಗಳನ್ನು ತಯಾರಿಸಿ ವಾಹನಗಳ ಮೇಲೆ ಅಂಟಿಸಿದರು. ಇಂಜಿನಿಯರಿಂಗ್ ವಿದ್ಯಾರ್ಥಿ ಸ್ನೇಹಿತರನ್ನೆಲ್ಲಾ ಒಟ್ಟುಗೂಡಿಸಿ ಕನ್ನಡ ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್‌ನ ಮುಂದಾಳತ್ವದಲ್ಲಿ ನಡೆಸುತ್ತಿದ್ದರು. ವಿದ್ಯಾರ್ಥಿ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ ಮಗನ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂಬ ತಂದೆಯವರ ಆತಂಕದ ಮೇರೆಗೆ ಕೃಷ್ಣರವರು ಚಳವಳಿಯಿಂದ ಹಿಂದೆ ಸರಿದು ಅಧ್ಯಯನದಲ್ಲಿ ಮುಳುಗಿದರು.

ಇವರು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದ ನಂತರ, ಇದೇ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಸಂಶೋಧನೆ ಮಾಡಿ ಸ್ನಾತಕೋತ್ತರ ಪದವಿ ಪಡೆದರು. ಈ ಪದವಿಗಳನ್ನು ಪಡೆದಿದ್ದರೂ ಕೆಲಸ ನಿರ್ವಹಿಸಿದ್ದು ಮಾತ್ರ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ. ಮುಂದುವರೆದು ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

'ನಿನಗೆ ಏನು ಇಷ್ಟವೋ ಅದನ್ನೇ ಓದು, ಅದನ್ನೇ ಮಾಡು' ಎಂಬುದು ಇವರ ತಂದೆಯವರ ಆಶಯ. ನಂತರ ಲಾ ಓದಬೇಕೆಂಬ ತುಡಿತ. ಎಲ್‌ಎಲ್.ಬಿ. ಹಾಗೂ ಎಂ.ಎಲ್. ಕಾನೂನು ಪದವಿ ಪಡೆದ ನಂತರವೂ ಇವರ ಓದಿನ ದಾಹ ತೀರಲಿಲ್ಲ. ನಂತರ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಹಳೆಯ ವಿದ್ಯಾರ್ಥಿಗಳ ಸುವರ್ಣ ಸಮಾಗಮ- 2010

ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ ಹಾಗೂ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪಿಹೆಚ್.ಡಿ. ಪದವಿ ಗಳಿಸಿದರೂ, ಈಗಲೂ ಇವರು ನಿರಂತರ ವಿದ್ಯಾರ್ಥಿ.

ವಿದ್ಯಾರ್ಥಿ ದೆಸೆಯಿಂದಲೇ ಬಂದ ಕನ್ನಡ ನಾಡು-ನುಡಿಯ ಬಗೆಗಿರುವ ಕಾಳಜಿ, ವ್ಯಕ್ತಿತ್ವ ನಿರ್ಮಾಣಕ್ಕೆ ಒದಗಿ ಬಂದ ಪ್ರೇರಣೆ-ಪ್ರಭಾವಗಳು, ಶಿಕ್ಷಣ ಮತ್ತು ಸಾಮಾಜಿಕ ಬದ್ಧತೆಗಳು ಇವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದವು. ಕೃಷ್ಣರವರು ಸಮಾಜವನ್ನು ತಮ್ಮ ಕುಟುಂಬ ಎಂದು ಭಾವಿಸಿದವರು. ಅದೇ ರೀತಿಯಲ್ಲಿ ಅದರ ಏಳಿಗೆಯೇ ನನ್ನ ಏಳಿಗೆ ಎಂದು ಬಯಸಿ ದುಡಿಯುತ್ತಿರುವುದನ್ನು ಗಮನಿಸಿದರೆ ಅವರ ಮನಸ್ಸು ಎಷ್ಟು ವಿಶಾಲವೆಂಬುದು ಅರಿವಾಗುತ್ತದೆ.

ವಿಶೇಷವೆಂದರೆ ಯುವಕರಾಗಿದ್ದಾಗ ಇಂಜಿನಿಯರಿಂಗ್ ಮುಗಿಸಿ ಲಾ ಮಾಡಲು ಶೇಷಾದ್ರಿಪುರಂ ಲಾ ಕಾಲೇಜಿಗೆ ಬಂದಿದ್ದರು. ಆದರೆ ಅಲ್ಲಿ ಸೀಟು ಭರ್ತಿಯಾಗಿದ್ದರಿಂದ ಕಾರ್ಪೋರೇಷನ್ ಹತ್ತಿರವಿರುವ ಹಾವನೂರು ಲಾ ಕಾಲೇಜಿನಲ್ಲಿ ಲಾ ಮುಗಿಸಿದರು. ತಾನು ಓದಲು ಬಂದ (ಕಾಲೇಜಿಗೆ) ಸಂಸ್ಥೆಗೆ ಮುಂದೊಂದು ದಿನ ಆ ಸಂಸ್ಥೆಯನ್ನು ಮುನ್ನಡೆಸುವ ಅಧ್ವರ್ಯು ಆದುದು ನಿಜಕ್ಕೂ ಸಾಧನೆಯ ಮೇರುತನವೆನ್ನಬಹುದು.

❖

ವೃತ್ತಿ ಜೀವನ

ಡಾ. ಕೃಷ್ಣ ಬೆಂಗಳೂರಿನ ಖ್ಯಾತ ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ 1987ರಲ್ಲಿ ಕೆಲಕಾಲ ಉಪನ್ಯಾಸಕರಾಗಿ ವೃತ್ತಿಯನ್ನು ಆರಂಭಿಸಿದರೂ, 1989ರಲ್ಲಿ ಡಬ್ಲ್ಯೂ. ಪಿ. ಕೃಷ್ಣ ಅಸೋಸಿಯೇಟ್ಸ್ ಮೂಲಕ ವೃತ್ತಿಜೀವನದಲ್ಲಿ ನೆಲೆನಿಂತರು. ಚಾರ್ಟರ್ಡ್ ಇಂಜಿನಿಯರ್ ಆಗಿ, ಕೈಗಾರಿಕಾ ಸ್ವತ್ತುಗಳ ನೋಂದಾಯಿತ ಮೌಲ್ಯಮಾಪಕರಾಗಿ ಹಾಗೂ ಕಾನೂನು ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಆರ್ಬಿಟ್ರೇಟರ್ ಆಗಿ ವಿಶೇಷ ಸಾಧನೆಯನ್ನೂ ಮಾಡಿದರು. ನ್ಯಾಯಾಲಯಗಳ ಆಯುಕ್ತರಾಗಿ ಮಾತ್ರವಲ್ಲದೆ, ಸರ್ವೋಚ್ಚ ನ್ಯಾಯಾಲಯ ಹಾಗೂ ರಾಜ್ಯ ಉಚ್ಚ ನ್ಯಾಯಾಲಯಗಳ ನಿವೃತ್ತ ನ್ಯಾಯಮೂರ್ತಿಗಳೊಂದಿಗೆ ಆರ್ಬಿಟ್ರೇಟರ್ ಆಗಿ ಸೇವೆ ಸಲ್ಲಿಸಿದ ಹಿರಿಮೆ ಇವರದು. ಇಂಡಿಯನ್ ಕೌನ್ಸಿಲ್ ಆಫ್ ಆರ್ಬಿಟ್ರೇಶನ್‌ನಲ್ಲಿ ಫೆಲೋಷಿಪ್ ದೊರೆತಿರುವ ಡಾ. ಕೃಷ್ಣರವರು ಹೈದರಾಬಾದ್, ಚನ್ನೈ, ಇಂದೋರ್, ದೆಹಲಿ, ಬೆಂಗಳೂರು ಹಾಗೂ ಮೈಸೂರಿನಲ್ಲಿ ಮೊಕದ್ದಮೆಗಳನ್ನು ನಡೆಸಿ ಅನೇಕ ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದಾರೆ. 2010ರಲ್ಲಿ ಕೇರಳ ರಾಜ್ಯದ ಇಡುಕ್ಕಿ ಜಿಲ್ಲೆ ಡಿ. ಸಿ. ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ ಸಂಸ್ಥೆಯಲ್ಲಿ ಕೆಲಕಾಲ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದರು.

ಭಾರತೀಯ ಇಂಜಿನಿಯರುಗಳ ಸಂಸ್ಥೆಯಲ್ಲಿ ಫೆಲೋ ಸದಸ್ಯರಾಗಿ, ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಸೇವೆ

ಸಲ್ಲಿಸಿ ಈ ಸಂಸ್ಥೆಯನ್ನು ಉನ್ನತ ಸ್ಥಿತಿಗೆ ತಂದರು. ಇವರ ಸೇವಾವಧಿಯಲ್ಲಿ ರಾಜ್ಯ ಕೇಂದ್ರಕ್ಕೆ ಎರಡು ಬಾರಿ 'ಉತ್ತಮ ರಾಜ್ಯ ಕೇಂದ್ರ' ಪ್ರಶಸ್ತಿ ದೊರೆತಿದೆ. ಭಾರತೀಯ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಪರಿಷತ್ತಿಗೆ ಆಯ್ಕೆಯಾಗಿಯೂ ಕೆಲಸ ನಿರ್ವಹಿಸಿದರು. ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಆಡಳಿತ ಮಂಡಳಿಯ ಸದಸ್ಯತ್ವ, ನಾಸಿಕ್‌ನಲ್ಲಿ ನಡೆದ 28ನೇ ಮೆಕ್ಯಾನಿಕಲ್ ಇಂಜಿನಿಯರುಗಳ ರಾಷ್ಟ್ರೀಯ ಅಧಿವೇಶನದ ಅಧ್ಯಕ್ಷತೆ ಹಾಗೂ 2011ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರತಿಷ್ಠಿತ ಭಾರತೀಯ ಇಂಜಿನಿಯರಿಂಗ್ ಕಾಂಗ್ರೆಸ್ಸಿನ ಸಂಚಾಲಕತ್ವ ಇವರಿಗೆ ದೊರೆತ ಇತರ ಗೌರವಗಳು. ಇದಲ್ಲದೆ ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ ಹಾಗೂ ಇಂಗ್ಲೆಂಡಿನ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಸಂಸ್ಥೆಯ ಪ್ರತಿಷ್ಠಿತ ಫೆಲೋ ಗೌರವಗಳಿಗೆ ಭಾಜನರಾಗಿದ್ದಾರೆ. ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ.



ಮತ್ತೂರು ಕೃಷ್ಣಮೂರ್ತಿ

ಕಾದಂಬರಿಕಾರ
ಎಸ್.ಎಲ್. ಭೈರಪ್ಪ

ಶೈಕ್ಷಣಿಕ ಅಭಿವೃದ್ಧಿಯ ಹರಿಕಾರ

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಚುಕ್ಕಾಣಿ ಹಿಡಿದು ಅದನ್ನು ಸರ್ವತೋಮುಖವಾಗಿ ಬೆಳೆಸಿದ ಕೀರ್ತಿ ಕೃಷ್ಣ ಅವರಿಗೆ ಸಲ್ಲುತ್ತದೆ. ಇದು ಅವರ ಬದುಕಿನ ಮತ್ತು ಶಿಕ್ಷಣ ದತ್ತಿಯ ಸುವರ್ಣ ಅಧ್ಯಾಯ ಎನ್ನಬಹುದು.

ಡಾ. ಕೃಷ್ಣರವರು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಬಂದಾಗ ಇದ್ದ 9,400 ವಿದ್ಯಾರ್ಥಿಗಳ ಸಂಖ್ಯೆ ಇಂದು 21,000ಕ್ಕೆ ಏರಿದೆ. 1200 ಮಂದಿ ಸಿಬ್ಬಂದಿಗಳಿದ್ದಾರೆ. ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ 33 ವಿದ್ಯಾಸಂಸ್ಥೆಗಳು ಹರಡಿವೆ. ಇದು ಇವರ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿ. ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಪೂರಕವಾಗಿ ಬೋಧಕ ಸಿಬ್ಬಂದಿ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಡಾ. ಕೃಷ್ಣ ಅವರ ವಿಶೇಷತೆ.

ಕೃಷ್ಣರವರು ಕೇವಲ ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ. ರಾಷ್ಟ್ರ, ಅಂತಾರಾಷ್ಟ್ರೀಯ ಶಿಕ್ಷಣದ ಮಹಾನ್ ಚಿಂತಕರು ಎಂಬುದು ಹೆಚ್ಚು ಸಮಂಜಸ. ಶಿಕ್ಷಣ ಕ್ಷೇತ್ರ ಡಾ. ಕೃಷ್ಣರವರ ಇಷ್ಟದ ಆಯ್ಕೆ. 'ನೀನು ಇಷ್ಟಪಟ್ಟದ್ದನ್ನು ಸಮರ್ಥವಾಗಿ ಮಾಡು' ಎಂಬ ಇವರ ತಂದೆಯವರ ಮಾರ್ಗದರ್ಶನದಂತೆ ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಲೇಬೇಕೆಂಬ ಛಲ ಇವರದು. ಸುಧಾರಣೆಗಳನ್ನು ಮಾಡಬೇಕೆಂಬುದು ಇವರ ಇಂಗಿತ. ತಾವು ಮಾಡಬೇಕಿರುವ ಯೋಜನೆಗಳ

ಕೆ. ಸಿ. ಪುಟ್ಟನರಸಯ್ಯನವರ
ಜನ್ಮ ಶತಮಾನೋತ್ಸವ
ಸಮಾರಂಭದಲ್ಲಿ ಸಾಹಿತಿ
ಸಾ. ಶಿ. ಮರುಳಯ್ಯ
ಟಿ. ವಿ. ಮಾರುತಿ
ಕೆ. ಪಿ. ನರಸಿಂಹಮೂರ್ತಿ
ಎನ್. ಆರ್. ಪಂಡಿತಾರಾಧ್ಯ
ಸರೋಜ ಕೆ.ಎಂ. ನಂಜಪ್ಪ

ಶತಾಯುಷಿ ತ್ರಿವಿಧ ದಾಸೋಹಿ
ಡಾ. ಶಿವಕುಮಾರ ಸ್ವಾಮೀಜಿ

ಸಾಹಿತಿಗಳಾದ
ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
ಡಾ. ಪಿ. ವಿ. ನಾರಾಯಣ
ಡಾ. ದೊಡ್ಡರಂಗೇಗೌಡ

ಟಿಪ್ಪಣಿ ತಯಾರಿಸಿಕೊಂಡು ಒಂದೊಂದೇ ಕೆಲಸವನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುತ್ತಾರೆ. ಸ್ನೇಹ-ವಿಶ್ವಾಸಗಳಿಗೆ ಬೆಲೆ ಕೊಡುವ ಕೃಷ್ಣರವರು ಬುದ್ಧಿ ಮತ್ತು ಕಾರ್ಯಸಾಧನೆಯಿಂದ ಶೈಕ್ಷಣಿಕ ರಂಗದಲ್ಲಿ ಉಜ್ವಲವಾದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಸಮಾಜಕ್ಕೆ ಉತ್ತಮ ನಾಗರಿಕರನ್ನು ಒದಗಿಸುವ ಕೆಲಸದಲ್ಲಿ ಶೇಷಾದಿಪುರಂ ಶಿಕ್ಷಣ ಸಂಸ್ಥೆ ನಿರಂತರವಾಗಿ ಶ್ರಮಿಸುತ್ತಿದೆ. ಅಲ್ಲದೆ ಸದಾಶಿವನಗರ ಶಿಕ್ಷಣ ಸಂಸ್ಥೆಗಳು, ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯ ಮುಂತಾದ ವಿದ್ಯಾಸಂಸ್ಥೆಗಳಲ್ಲಿಯೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎಷ್ಟೋ ಸಂಸ್ಥೆಗಳಲ್ಲಿ ಬೃಹತ್ತತೆ ಇರುತ್ತದೆ, ಗುಣಾತ್ಮಕತೆ ಇರುವುದಿಲ್ಲ. ಗುಣಾತ್ಮಕತೆ ಇದ್ದಲ್ಲಿ ಬೃಹತ್ತತೆ ಇರುವುದಿಲ್ಲ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಹೆಗ್ಗಳಿಕೆಯೇ ಬೇರೆ, ಅದು ಇವೆರಡನ್ನೂ ಸಾಧಿಸಿದೆ. ಶಿಶು ವಿಹಾರದಿಂದ ಆರಂಭಿಸಿ ಪಿಎಚ್.ಡಿ. ಪದವಿಯನ್ನೂ ಒಂದೇ ಸೂರಿನಡಿ ಗಳಿಸುವ ಅವಕಾಶವಿರುವಂತೆ ರೂಪಿಸಿದ ಕೆಲವೇ ಶಿಕ್ಷಣ ಸಂಸ್ಥೆಗಳಲ್ಲಿ ಎಸ್‌ಇಟಿ (ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್) ಒಂದು. ಭಾರತದ 28ನೇ ಶ್ರೇಷ್ಠ ಕಾಲೇಜೆಂಬ ಅಧಿಕೃತ ಕೀರ್ತಿ ಶೇಷಾದ್ರಿಪುರಂ ವಿದ್ಯಾಸಂಸ್ಥೆಗೆ ಲಭಿಸಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ 150ಕ್ಕೂ ಹೆಚ್ಚು ಅಂತಾರಾಷ್ಟ್ರೀಯ(ಸೂಡಾನ್, ಭೂತಾನ್, ಮಲೇಷ್ಯಾ, ಬಾಂಗ್ಲಾದೇಶ, ನೇಪಾಳ, ಕೋಸ್ಟರಿಕಾ ಮತ್ತು ಸೌದಿ ಅರೇಬಿಯದಂತಹ ದೇಶಗಳ) ವಿದ್ಯಾರ್ಥಿಗಳು ಶಿಕ್ಷಣ ಪಡೆದಿರುವುದು ಹೆಮ್ಮೆಯ ವಿಷಯ. ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದ ಸೇವೆ ಸಲ್ಲಿಸಿರುವ ಇವರಿಗೆ, ಉತ್ತಮ ಶಿಕ್ಷಣ ಮಾತ್ರವೇ ಒಳ್ಳೆಯ ಬದುಕನ್ನು ಕಟ್ಟಿಕೊಡಬಲ್ಲದು ಎಂಬ ನಂಬಿಕೆ. ಇಂದಿನ ದುಬಾರಿ ಶಿಕ್ಷಣದಲ್ಲಿ ಎಟುಕುವ ಬೆಲೆಗೆ ಗುಣಮಟ್ಟದ ಶಿಕ್ಷಣಕೊಡುವುದೇ ಇವರ ಧ್ಯೇಯವಾಗಿದೆ. ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ಮೌಲ್ಯ, ದೇಶಪ್ರೇಮವನ್ನು ಬಿತ್ತುವ ಕಾಯಕಕ್ಕೂ ಬದ್ಧರಾಗಿ, ನಾಡಿನ ಶ್ರೇಷ್ಠ ಸಾಹಿತ್ಯ ದಿಗ್ಗಜರನ್ನು, ಸಂಸ್ಕೃತಿ ಚಿಂತಕರನ್ನು, ವಿಜ್ಞಾನಿಗಳನ್ನು, ಸಮಾಜ ಸುಧಾರಕರನ್ನು ಕರೆಯಿಸಿ ವಿದ್ಯಾರ್ಥಿಗಳಿಗೆ ಬೋಧನೆ ಕೊಡಿಸುತ್ತಿರುವುದು ಶ್ಲಾಘನೀಯ ಕೆಲಸ.

ಇವರ ದೂರದರ್ಶಿತ್ವ, ಸ್ನೇಹಶೀಲ ವ್ಯವಹಾರ, ಮಂದಹಾಸ, ಸರಳತೆ, ಸಜ್ಜನಿಕೆ, ಎಲ್ಲರೊಳಗೊಂದಾಗಿ ಬೆರೆಯುವ ವ್ಯಕ್ತಿತ್ವದ ಕೃಷ್ಣ ಅವರ ಶೈಕ್ಷಣಿಕ ಸೇವೆ ಅನನ್ಯವಾದುದು. ಕೃಷ್ಣರವರು ಇಂಜಿನಿಯರಿಂಗ್, ಕಾನೂನು ಹಾಗೂ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ ವಿಷಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದಿರುವುದು ಇವರ

ಶಿಕ್ಷಣ ಕ್ಷೇತ್ರದ ಸೇವೆಗೆ ಪೂರಕವಾಗಿದೆ. ಈ ಸಂಸ್ಥೆ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ, ಉನ್ನತ ಶಿಕ್ಷಣದ ವಲಯಗಳಿಗೆ ವಿಸ್ತರಿಸಿಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಜಾಗತಿಕ ಗುಣಮಟ್ಟವನ್ನು ತಲುಪಿದ್ದರೆ ಅದಕ್ಕೆ ಕಾರಣ ಡಾ. ಕೃಷ್ಣರವರು.

ಬೆಂಗಳೂರಿನ ಪ್ರತಿಷ್ಠಿತ ಸಂಘಸಂಸ್ಥೆಗಳಾದ 'ಭಾರತೀಯ ವಿಶ್ವಶಾಂತಿ ಶಿಕ್ಷಣ ಪ್ರತಿಷ್ಠಾನ'ದ ಅಧ್ಯಕ್ಷರಾಗಿ, ಸದಾಶಿವನಗರದ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಖಾಸಗಿ ವಿದ್ಯಾಲಯಗಳ ಆಡಳಿತ ಮಂಡಳಿಗಳ ಸಂಘದ ಕಾರ್ಯದರ್ಶಿಯಾಗಿ, ಆಚಾರ್ಯ ವಿನೋಬಾ ಭಾವೆಯವರಿಂದ ಸ್ಥಾಪಿಸಲಾದ ವಿಶ್ವನೀಡಂ ದತ್ತಿಯ ಮೇನೇಜಿಂಗ್ ಟ್ರಸ್ಟಿಯಾಗಿ, ಅಪ್ಪಾವು ಪಿಳ್ಳೈ ಶಿಕ್ಷಣ ಸಂಸ್ಥೆಗಳ ದತ್ತಿ ಸದಸ್ಯರಾಗಿ, ಪಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪಠ್ಯ ಪ್ರವಚನ ಹಾಗೂ ಪ್ರಗತಿ ಸಮಿತಿಯ ಸದಸ್ಯರಾಗಿ, ಬೆಂಗಳೂರಿನ ವಿಜ್ಞಾನ ಮತ್ತು ತಾಂತ್ರಿಕ ಕೇಂದ್ರದಲ್ಲಿ ಆಡಳಿತ ಸದಸ್ಯರಾಗಿ ಗುರುತರವಾದ ಜವಾಬ್ದಾರಿಗಳನ್ನು ನಿಭಾಯಿಸಿ ಸಂಸ್ಥೆಗಳನ್ನು ಉತ್ತುಂಗಕ್ಕೆ ಬೆಳೆಸಿದ್ದಾರೆ.

ಯೂತ್ ಹಾಸ್ಟೆಲ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರಾಗಿ ಇವರು ಯುವಕರಲ್ಲಿ ಸಾಹಸೀ ಮನೋಭಾವದ ಚೈತನ್ಯವನ್ನು ತುಂಬುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುವ ಸಮಾವೇಶಗಳನ್ನು ಆಯೋಜಿಸಿ ಯುವಕರಲ್ಲಿ ಜ್ಞಾನ-ವಿಜ್ಞಾನಗಳ ವಿನಿಮಯಕ್ಕೆ ಅವಕಾಶ ಕಲ್ಪಿಸಿದ್ದಾರೆ.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

ದಕ್ಷ ಆಡಳಿತಗಾರ

ಡಾ. ಕೃಷ್ಣ ಅವರದು ಆಕರ್ಷಕ ವ್ಯಕ್ತಿತ್ವ. ಮಟ್ಟಸವಾದ ನಿಲುವು, ತಕ್ಷಣ ಗಮನ ಸೆಳೆಯುವ ಬಟ್ಟಲು ಕಣ್ಣುಗಳು, ಗಂಭೀರ ಮುಖ, ಮಂದಸ್ಮಿತವಾದ ಮೃದು ಮಾತು–ಸೌಜನ್ಯವೇ ರೂಪ ಪಡೆದಂತೆ, ಪ್ರದರ್ಶನ ಪ್ರವೃತ್ತಿಗೆ ವಿರುದ್ಧವಾದ ವ್ಯಕ್ತಿತ್ವ. ಮಾತನಾಡಿದಂತೆ ನಡೆದುಕೊಳ್ಳುವುದು ಇವರ ಮೊದಲ ಬದ್ಧತೆ.

ಒಬ್ಬ ಆಡಳಿತಗಾರನಾಗಿ ಕೃಷ್ಣ ಅವರ ಯಶಸ್ಸು ಅಡಗಿರುವುದು ಅವರು ತಳೆಯುವ ಖಚಿತ ನಿರ್ಧಾರಗಳಲ್ಲಿ. ಅವರು ಕಾರ್ಯ ನಿರ್ವಹಿಸುವ ಶೈಲಿಯನ್ನು ಗಮನಿಸಿದರೆ ಇದು ವೇದ್ಯ. ಯಾವುದೇ ವಿಷಯಕ್ಕಾಗಲಿ ಇವರು ಅಗತ್ಯಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ತಕ್ಷಣವೇ ನಿರ್ಧಾರ ಪ್ರಕಟಿಸುತ್ತಾರೆ. ತಮ್ಮ ಸರಳ ಹಾಗೂ ನಿಖರ ಮಾತುಗಳಿಂದ ಕೆಲಸ ಮುಗಿಸಿ, ಮತ್ತೊಂದು ಕೆಲಸಕ್ಕೆ ಹಾಜರಾಗುತ್ತಾರೆ. ಹಲವಾರು ಬಾರಿ ಒಂದೇ ತಾಸಿನಲ್ಲಿ ತಮ್ಮ ಕಛೇರಿಗೆ ಬರುವ 20–25 ಜನರನ್ನು ಭೇಟಿ ಮಾಡಿ, ಎಲ್ಲರ ಕೆಲಸವನ್ನೂ ಮುಗಿಸುತ್ತಾರೆ. ಕೃಷ್ಣರವರು ಒಳ್ಳೆಯ ಆಡಳಿತಗಾರರು, ಮುತ್ಸದ್ಧಿ; ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯನ್ನು ಇವರು ಕಟ್ಟುತ್ತಿರುವ ರೀತಿ ಇದಕ್ಕೆ ಉತ್ತಮ ನಿದರ್ಶನ.

ಸಂಶಯದ ಸಂದರ್ಭದಲ್ಲಿ ಅದನ್ನು ನಿವಾರಿಸುವ, ವಿವಾದದ ಸಂದರ್ಭದಲ್ಲಿ ವಿವೇಕದಿಂದ ವರ್ತಿಸುವ, ಉದ್ವೇಗದ ಸಂದರ್ಭದಲ್ಲಿ ಸಂಯಮ ವಹಿಸುವ ಲೋಕಪ್ರಜ್ಞೆ ಆಡಳಿತ ನಡೆಸುವವರಿಗೆ ಒಂದು ಆದರ್ಶ ಗುಣ. ವ್ಯಕ್ತಿ

ದೊಡ್ಡವರಿರಲಿ, ಚಿಕ್ಕವರಿರಲಿ ಭೇಟಿ ಸಮಯವನ್ನು ನೀಡಿದರೆ ಸಮಯಪಾಲನೆಗೆ ಹೆಚ್ಚು ಗಮನಕೊಡುತ್ತಾರೆ. ಒಂದು ವೇಳೆ ಭೇಟಿ ಸಾಧ್ಯವಿಲ್ಲದಿದ್ದರೆ ಮುಂಚಿತವಾಗಿ ದೂರವಾಣಿ ಕರೆ ಮಾಡಿ ಅವರಿಗೆ ತಿಳಿಸುತ್ತಾರೆ. ಇಂದು ಹೆಚ್ಚು ಜನನಾಯಕರಲ್ಲಿ ಈ ಲೋಕಪ್ರಜ್ಞೆ ಕಾಣಿಸುವುದಿಲ್ಲ. ಒಬ್ಬ ಗಾಂಧಿವಾದಿಗೆ ಮಾತ್ರ ಈ ರೀತಿಯ ಕಾರ್ಯವೈಖರಿ ಸಾಧ್ಯ, ಇತರರಿಗೂ ಇದು ಅನುಕರಣೀಯ.

ಪ್ರಭಾವ ಬೀರಿ ಕೆಲಸ ಕೇಳಲು ಬರುವವರನ್ನು ಮುಲಾಜಿಲ್ಲದೆ ಸಾಗಹಾಕುವ ಸ್ವಭಾವ ಇವರದು. ಬೇರೆಯವರನ್ನು ಮಾತನಾಡಿಸುವಾಗ ಅವರನ್ನು ನೋಯಿಸುವುದಿಲ್ಲ. ಅಧಿಕಾರದಲ್ಲಿದ್ದೇನೆ ಎಂಬ ದರ್ಪ ಎಂದೂ ಅವರನ್ನು ಆವರಿಸಿಲ್ಲ. ಸಮಸ್ಯೆಯನ್ನು ಹೊತ್ತುಬಂದವರಿಗೆ ಇವರೆಂದೂ ಬಗೆಹರಿಸದೆ, ಸಲಹೆಯನ್ನು ಕೊಡದೆ ಕಳುಹಿಸಿಲ್ಲ. ಸರಳತೆಯ ಶುಭ್ರವಾದ ಖಾದಿಯನ್ನು ವಸ್ತ್ರವಾಗಿ ಧರಿಸುವ ಕೃಷ್ಣರವರ ಮನಸ್ಸು ಸದಾ ಸ್ವಚ್ಛ ತಿಳಿಗೊಳದಂತೆ ಇರುತ್ತದೆ. ಅದರಂತೆ ನಡೆದುಕೊಳ್ಳುತ್ತಾರೆ ಕೂಡಾ.

ಹಲವಾರು ಬಾರಿ ಚರ್ಚೆಯ ಬಿಸಿಯನ್ನು ಕಡಿಮೆಯಾಗಿಸಿ, ಅದಕ್ಕೆ ಸಾತ್ವಿಕರೂಪ ನೀಡಿ ಮುಂದುವರಿಸಿ, ಪರಿಹಾರವೆಂಬಂತೆ ಬೇರೊಂದು ಸೂತ್ರವನ್ನು ಮಂಡಿಸುತ್ತಾ, ಎಲ್ಲರಿಗೂ ಇಷ್ಟವಾಗುವ ರೀತಿಯಲ್ಲಿ ಇದನ್ನು ಪರಿಹರಿಸುತ್ತಾರೆ. ಇದು ಇವರ ನಾಯಕತ್ವದ ಅಪರೂಪದ ವ್ಯಕ್ತಿ ವಿಶೇಷ ಗುಣ.

ಆಡಳಿತದ ಸಂದರ್ಭದಲ್ಲಿ ಸದಾ ಶುಭ್ರವಾದ ಮನಸ್ಥಿತಿಯನ್ನು ಹೊಂದಿರುತ್ತಾರೆ. ಗಾಂಧೀಜಿಯವರ ಆದರ್ಶಗಳು, ತಂದೆಯವರ ಗುರುತನದ ಮಾತುಗಳಲ್ಲಿನ ನೈತಿಕ ಶಿಸ್ತು, ಸಾರ್ವಜನಿಕ ಕೆಲಸಗಳಲ್ಲಿ ವಹಿಸುವ ಆಸ್ಥೆ, ರಾಮಕೃಷ್ಣಾಶ್ರಮದ ಮುನಿವರ್ಯರ ಸಾತ್ವಿಕ ಗುಣ ಅವರಲ್ಲಿ ಮೇಳವಿಸಿವೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ದಿನೇಶ್ ಗುಂಡೂರಾವ್

ಶಿಕ್ಷಣದ ಅಂತಾರಾಷ್ಟ್ರೀಕರಣ

2011ರಲ್ಲಿ ಸ್ಥಾಪಿಸಲಾದ ಶೇಷಾದ್ರಿಪುರಂ ಅಕಾಡೆಮಿ ಫಾರ್ ಗ್ಲೋಬಲ್ ಎಕ್ಸಲೆನ್ಸ್ ಸಂಸ್ಥೆ- ಉತ್ಸಾಹಭರಿತ ವಿದ್ಯಾರ್ಥಿಗಳ ಸುಧಾರಿತ ಕಲಿಕೆಯನ್ನು ಉತ್ತೇಜಿಸುವ ಮೂಲಕ ಅಮೇರಿಕದ ಉತ್ತರ ಈಶಾನ್ಯ ರಾಜ್ಯ ವಿಶ್ವವಿದ್ಯಾಲಯ, ಒಕ್ಲಹೋಮ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ಯೂನಿವರ್ಸಿಟಿ ಆಫ್ ವಿಸ್ಕಾನ್ಸಿನ್ ರಿವರ್‌ಫಾಲ್ಸ್, ಇಂಗ್ಲೆಂಡಿನ ಯೂನಿವರ್ಸಿಟಿ ಆಫ್ ಚೆಸ್ಟರ್‌ದಂತಹ ಅಂತಾರಾಷ್ಟ್ರೀಯ ಖ್ಯಾತಿಯ ವಿಶ್ವವಿದ್ಯಾಲಯಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಿದೆ. ಉನ್ನತ ವ್ಯಾಸಂಗ ಪಡೆಯಲು ಅಮೇರಿಕ ಮತ್ತು ಯುಕೆ ವಿಶ್ವವಿದ್ಯಾಲಯಗಳಲ್ಲಿ ಅನೇಕ ವಿದ್ಯಾರ್ಥಿಗಳು ಸೇರಿಕೊಳ್ಳುತ್ತಿರುವುದು ಕೃಷ್ಣರವರ ಶಿಕ್ಷಣ ಕ್ಷೇತ್ರದ ಆಸಕ್ತಿಗೆ, ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಖ್ಯಾತಿಯನ್ನು ವಿಶ್ವದಾದ್ಯಂತ ಪಸರಿಸುವಲ್ಲಿ ಕೃಷ್ಣ ಅವರ ಶ್ರಮ ಶ್ಲಾಘನೀಯವಾದುದು.

150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೇರೆ ಬೇರೆ ರಾಷ್ಟ್ರಗಳಿಂದ ಬಂದು ಶೇಷಾದ್ರಿಪುರಂ ಕಾಲೇಜುಗಳಲ್ಲಿ ಪದವಿಗಳನ್ನು ಪಡೆದಿರುವುದು ಮತ್ತು ಪದವಿಗಳನ್ನು ಪಡೆಯಲು ಪ್ರವೇಶ ಪಡೆದಿರುವುದನ್ನು ಗಮನಿಸಿದರೆ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ನಿಜಕ್ಕೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಕೃಷ್ಣರವರ ಪಾತ್ರ ಬಹಳ ಮುಖ್ಯವಾದದ್ದು ಅನಿಸುತ್ತದೆ.

ಚೀನಾದ ಬೀಜಿಂಗ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಮುಂದೆ
ಡಾ. ಕೃಷ್ಣ, ಮರಿಲಿಂಗೇಗೌಡ, ಎನ್. ತಿಪ್ಪಣ್ಣ, ಇರ್ಫಾನುಲ್ಲಾ ಶರೀಫ್, ವೀರಣ್ಣ ಮತ್ತಿಕಟ್ಟಿ

ಇಂಡಿಯನ್ ಫೌಂಡೇಶನ್ ಫಾರ್ ಗ್ಲೋಬಲ್ ಪೀಸ್ ಎಜುಕೇಶನ್ ಸಮಾಗಮ ಭಾರತ–ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮ – 2012
ಡಾ. ಕೃಷ್ಣ, ಸಿ.ಎಸ್.ಎಸ್. ರಾಜು, ಫಜ಼ಲ್ ಮಹಮೂದ್, ಸುಧೀರ್ ಮೆಹತಾ

ಶಿಕ್ಷಣ ಕ್ಷೇತ್ರ ಇವರಿಗೆ ಬಹಳ ಅಪ್ಯಾಯಮಾನವಾದ ಒಂದು ಪವಿತ್ರ ಕ್ಷೇತ್ರ. ಪ್ರತಿಯೊಬ್ಬರಿಗೂ ವಿದ್ಯೆಯನ್ನು ಪಡೆಯುವ ಹಕ್ಕಿದೆ ಎಂದು ಪ್ರತಿಪಾದಿಸುವ ಇವರು ಇದನ್ನು ತಮ್ಮ ಜೀವನದ ಧ್ಯೇಯವಾಗಿರಿಸಿಕೊಂಡು ಶಾಲಾ-ಕಾಲೇಜುಗಳ ಶಿಕ್ಷಣ ಕ್ಷೇತ್ರಕ್ಕೆ ಅತ್ಯಂತ ಅಮೂಲ್ಯ ಹಾಗೂ ಅನುಪಮ ಕೊಡುಗೆ ನೀಡುತ್ತಾ ಬಂದಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿರುವ ಕಾರಣ ಉದ್ಭವಿಸಬಹುದಾದ ಸಮಸ್ಯೆಗಳಿಗೆ ಪರಸ್ಪರ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಕರ್ನಾಟಕ ಖಾಸಗೀ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ ಒಂದು ಅಸ್ತಿತ್ವದಲ್ಲಿದೆ. ಅದಕ್ಕೆ ಡಾ. ಕೃಷ್ಣ ಅವರು ಕಾರ್ಯದರ್ಶಿಗಳು. ಎನ್.ಎಸ್.ಎಸ್ ಸೇವೆಗಾಗಿ ದೊರೆತ ರಾಷ್ಟ್ರಪ್ರಶಸ್ತಿಗಳ ಸಾಲಿನಲ್ಲಿ ಡಾ. ಕೃಷ್ಣರವರ ನೇತೃತ್ವದ ಶೇಷಾದ್ರಿಪುರಂ ಕಾಲೇಜಿಗೆ ಇಂದಿರಾಗಾಂಧಿ ರಾಷ್ಟ್ರಪ್ರಶಸ್ತಿ ದೊರೆತಿದೆ, ಶ್ರೇಷ್ಠ ಘಟಕ ರಾಜ್ಯಪ್ರಶಸ್ತಿಗೂ ಆಯ್ಕೆಯಾಗಿದೆ.



ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಡಾ. ಸ್ವಾಮಿ ವೀರೇಶಾನಂದ ಸರಸ್ವತಿ

ರಾಮಕೃಷ್ಣ ಮಠದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದ ಹಾಗೂ ಸ್ವಾಮಿ ತದ್ಯುಕ್ತಾನಂದ

ಸೇವೆಯೆಂಬ ಮಂತ್ರ

'ಸಮಾಜ ಸೇವೆ ಎಂಬುದು ನನಗೆ ಅತ್ಯಂತ ಪ್ರಿಯವಾದ ಕ್ಷೇತ್ರ'. ಇದು ಕೃಷ್ಣ ಅವರ ಮನದಾಳದ ಮಾತು. ಹೀಗಾಗಿ ಈ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ತಮ್ಮ ಕನಸಿನ ಯೋಜನೆಗಳನ್ನು ನನಸು ಮಾಡುತ್ತಿದ್ದಾರೆ. ಹಾದಿಯಲ್ಲಿ ತಮಗೆ ಎದುರಾದ ನಿಂದನೆ, ಸೋಲು ಮೊದಲಾದ ನಕಾರಾತ್ಮಕ ಅಭಿಪ್ರಾಯಗಳಿಗೆ ಅಂಜದೆ, ಸಕಾರಾತ್ಮಕ ಚಿಂತನೆಗಳಿಂದ ಹಿಡಿದು ಜನಪರ ಕೆಲಸ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೊದಲಿಗೆ ರೆಡ್‌ಕ್ರಾಸ್ ಸಂಸ್ಥೆ ಸೇರಲು ಪ್ರೋತ್ಸಾಹಿಸಿದ ಮಾಜಿ ಮೇಯರ್ ಕೆ. ಎಂ. ನಂಜಪ್ಪ ಹಾಗೂ ಹಿರಿಯ ಸಹೋದರ ಡಬ್ಲ್ಯೂ. ಪಿ. ಶಿವಕುಮಾರ್ ಅವರನ್ನು ಕೃಷ್ಣ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಡಾ. ಕೃಷ್ಣರವರು ಸಮಾಜ ಸೇವೆ ಮಾಡಬೇಕೆಂಬ ಸದುದ್ದೇಶದಿಂದಲೇ ಮೊದಲಿಗೆ 1984ರಲ್ಲಿ ರೆಡ್‌ಕ್ರಾಸ್ ಸಂಸ್ಥೆಗೆ ಸದಸ್ಯರಾಗಿ ನೋಂದಣಿ ಮಾಡಿಸಿದರು. ಮುಂದೆ 2001ರಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಕಾರಿಣಿ ಸದಸ್ಯತ್ವಕ್ಕೆ ಆಯ್ಕೆಯಾದರು. ಕೆಲವೇ ದಿನಗಳಲ್ಲಿ ಅವರ ಕಾರ್ಯತತ್ಪರತೆ ಹಾಗೂ ದಕ್ಷ ಆಡಳಿತದ ಹಿನ್ನೆಲೆಯಲ್ಲಿ ಇದೇ ಸಂಸ್ಥೆಗೆ ಕೋಶಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. 2006ರಲ್ಲಿ ರೆಡ್‌ಕ್ರಾಸ್ ರಾಷ್ಟ್ರೀಯ ಕಾರ್ಯಕಾರಿಣಿಗೆ ಆಯ್ಕೆಯಾಗುವಷ್ಟರ ಮಟ್ಟಿಗೆ ಇವರ ಸೇವೆ ವಿಸ್ತಾರವಾಗುತ್ತದೆ. 2007ರಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಅವಿರೋಧವಾಗಿ

ರಕ್ತದಾನ ಶಿಬಿರದಲ್ಲಿ
ಡಾ. ಸಿ. ಎನ್. ಅಶ್ವತ್ಥನಾರಾಯಣ
ರಾಜು ಚಂದ್ರಶೇಖರ್, ಪ್ರೊ. ಬಿ. ಎಲ್. ಗೀತಾ

ಅಂಧ ವ್ಯಕ್ತಿಗೆ ಉಪಕರಣ
ನೀಡುತ್ತಿರುವ ರಾಜ್ಯಪಾಲ
ರಾಮೇಶ್ವರ ಠಾಕೂರ್

ಆಯ್ಕೆಯಾದರು. ಹೀಗೆ ಹಂತಹಂತವಾಗಿ ಸಂಸ್ಥೆಯಲ್ಲಿ ಉನ್ನತ ಹುದ್ದೆಗಳನ್ನು ಹೊಂದುತ್ತಲೇ ಅನನ್ಯ ಸೇವೆಯನ್ನು ಸಲ್ಲಿಸಿದರು. ಇವರ ಆಡಳಿತಾತ್ಮಕವಾದ ನಿಪುಣತೆ, ಸಾವಿರಾರು ರಕ್ತದಾನ ಶಿಬಿರಗಳು, ಆರೋಗ್ಯ ತಪಾಸಣಾ ಶಿಬಿರಗಳು, ಪಲ್ಸ್ ಪೋಲಿಯೋ ಹಾಗೂ ಏಡ್ಸ್ ಕುರಿತ ಜಾಗೃತಿ ಕಾರ್ಯಕ್ರಮಗಳು ಹೀಗೆ ಸಂಸ್ಥೆಯ ಭಾಗವಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿದ ಹಿನ್ನೆಲೆಯಲ್ಲಿ ಇವರ ಸೇವೆಯನ್ನು ಗುರುತಿಸಿ 2012ರಲ್ಲಿ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ಪ್ರಶಸ್ತಿಯಾದ 'ರಾಷ್ಟ್ರಪತಿಗಳ ಚಿನ್ನದ ಪದಕ' ನೀಡಿ ಗೌರವಿಸಲಾಗಿದೆ.

ಎರಡನೇ ವಿಶ್ವಸಮರದ ಯುದ್ಧದಲ್ಲಿ ಗಾಯಗೊಂಡವರೂ, ನಿರಾಶ್ರಿತರೂ ಆದ ಯೋಧರ ಕ್ಷೇಮಾಭಿವೃದ್ಧಿಗಾಗಿ ಸ್ವಾತಂತ್ರ್ಯಪೂರ್ವ ದಿನಗಳಲ್ಲೇ ಸ್ಥಾಪನೆಗೊಂಡ ರೆಡ್‌ಕ್ರಾಸ್ ಹೋಮ್ ಅಲಸೂರು ಕೆರೆ ಮುಂಭಾಗದ ವಿಶಾಲವಾದ ಮತ್ತು ಪ್ರಶಾಂತವಾದ ತಾಣದಲ್ಲಿದೆ. 1971ರ ಇಂಡೋ-ಪಾಕ್ ಯುದ್ಧ ಹಾಗೂ 1999ರ ಕಾರ್ಗಿಲ್ ಸಂಘರ್ಷಗಳಲ್ಲಿ ಸಂತ್ರಸ್ಥರಾದವರಿಗೂ ಇಲ್ಲಿ ಆಶ್ರಯ ನೀಡಲಾಗಿದೆ. ಇದರ ನಿರ್ವಹಣೆಗೆ ಗಣ್ಯರನ್ನು ಒಳಗೊಂಡ ಸಮಿತಿ ಇದ್ದು, ಡಾ.ಕೃಷ್ಣ ಅವರು ಇದರ ಆಡಳಿತ ಮಂಡಳಿಯಲ್ಲಿದ್ದಾರೆ. ರೆಡ್‌ಕ್ರಾಸ್‌ನ ಉಚಿತ ರಕ್ತನಿಧಿ ಕೇಂದ್ರದ ಸುಧಾರಣೆ, ಉಚಿತ ಆಪ್ಟಿಕಲ್ ಸೆಂಟರ್‌ನ ಆಧುನೀಕರಣ, ಅರ್ಬನ್ ಮೆಟರ್ನಿಟಿ ಚೈಲ್ಡ್ ಅ್ಯಂಡ್ ಫ್ಯಾಮಿಲಿ ವೆಲ್‌ಫೇರ್ ಸೆಂಟರ್, ಹೆಚ್‌ಐವಿ ಅಥವಾ ಏಡ್ಸ್ ಆರೈಕೆ-ನೆರವು ಹಾಗೂ ನಿರ್ವಹಣಾ ಕಾರ್ಯಗಳನ್ನು ಮತ್ತಷ್ಟು ಸಕ್ರಿಯಗೊಳಿಸಿದುದಲ್ಲದೆ; ಪ್ರಥಮ ಚಿಕಿತ್ಸೆ, ಹೋಮ್ ನರ್ಸಿಂಗ್ ತರಬೇತಿ, ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಸಿದ್ಧತೆ, ಅವುಗಳ

ನಿರ್ವಹಣಾ ಕ್ರಮ –ಹೀಗೆ ಇವರು ಸಕ್ರಿಯವಾಗಿ ಪಾಲ್ಗೊಂಡಿರುವ ಯೋಜನೆಗಳು ಒಂದೆರಡಲ್ಲ ಹತ್ತು ಹಲವಾರು. ಇವಿಷ್ಟಲ್ಲದೆ ಆರ್ಟಿಫಿಶಿಯಲ್ ಲಿಂಬ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯ ನೆರವಿನಿಂದ, ಸರ್ಕಾರೇತರ ಸಂಸ್ಥೆಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳ ನೆರವಿನೊಂದಿಗೆ ಕರ್ನಾಟಕದ 14 ಜಿಲ್ಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ವಿವಿಧ ರೀತಿಯಲ್ಲಿ ತೊಂದರೆಗೊಳಗಾದ ವಿಕಲಚೇತನರಿಗೆ ಗಾಲಿ ಕುರ್ಚಿಗಳು, ಉಚಿತ ಕನ್ನಡಕಗಳು ಮೊದಲಾದ ಅವಶ್ಯಕ ವಸ್ತುಗಳನ್ನು ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಕೋಲಾರ ಜಿಲ್ಲೆಯ ಶ್ರೀನಿವಾಸಗೌಡ ಎಂಬ ವಿಕಲಚೇತನನನ್ನು ಅನ್ಯಾಯವಾಗಿ ಗ್ರಂಥಾಲಯದ ಕೆಲಸದಿಂದ ಕಿತ್ತು ಹಾಕಿದನ್ನು ಕಂಡು ನೊಂದುಕೊಂಡರು. ಆ ವ್ಯಕ್ತಿ ಸಹಾಯ ಯಾಚಿಸಿ ಬಂದಾಗ ಸರ್ಕಾರದ ಉನ್ನತ ಅಧಿಕಾರಿಗಳನ್ನು ಸಂಪರ್ಕಿಸಿ ಆ ವ್ಯಕ್ತಿಗೆ ಮರಳಿ ಉದ್ಯೋಗ ದೊರೆಯುವಂತೆ ನೋಡಿಕೊಂಡಿದ್ದು ಕೃಷ್ಣ ಅವರ ಅನನ್ಯ ಸೇವಾಮನೋಭಾವಕ್ಕೆ ಸಾಕ್ಷಿಯಾಗಿದೆ. ಹೀಗೆ ಇವರು ಅಶಕ್ತರ ಏಳಿಗೆಗಾಗಿ ವಹಿಸಿದ ಶ್ರಮವನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರವು 2008ರಲ್ಲಿ 'ವಿಕಲಚೇತನರ ಸಬಲೀಕರಣ ರಾಜ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಸುನಾಮಿ ದುರಂತದ ಸಂತ್ರಸ್ಥರ ನೆರವಿಗಾಗಿ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಯಿತು. ಆಗ ಕರ್ನಾಟಕ ರೆಡ್‌ಕ್ರಾಸ್ ಸಂಸ್ಥೆಯು ಈ ದುರಂತದ ಸಂತ್ರಸ್ಥರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಕೋಟ್ಯಂತರ ರೂಗಳ ಯೋಜನೆಯನ್ನು ತಮಿಳುನಾಡಿನ ಕಡಲೂರು ಮತ್ತು ನಾಗಪಟ್ಟಣಮ್ ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ

ೇಂದ್ರ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ರಾಧಾ ಭಟ್, ಡಾ. ಹೆಚ್. ಎಸ್. ದೊರೆಸ್ವಾಮಿ
ರ್ಥ ಶರ್ಮ, ಡಾ. ಹೊ. ಶ್ರೀನಿವಾಸಯ್ಯ, ಪ್ರೊ. ಹೆಚ್.ಆರ್. ದಾಸೇಗೌಡ, ಡಿ. ಕೆ. ಕೋದಂಡರಾಮ್

ಕರ್ನಾಟಕ ರಾಜ್ಯಪಾಲೆ ವಿ.ಎಸ್. ರಮಾದೇವಿ, ಕೆ. ಎಂ. ನಂಜಪ್ಪ
ಡಾ. ಡಿ. ಎಂ. ನಂಜುಂಡಪ್ಪ, ಕೆ. ಬಿ. ಷಣ್ಮುಖಪ್ಪ, ಡಾ. ಎಸ್.ಎಂ. ಸುರೇಶ್ವರಯ್ಯ

ಕೈಗೊಂಡಿತು. ಈ ಅತ್ಯಂತ ಯಶಸ್ವಿ ಪರಿಹಾರ ಕಾರ್ಯಕ್ರಮ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ, ಇಂಟರ್‌ನ್ಯಾಷನಲ್ ಫೆಡರೇಶನ್ ಆಫ್ ರೆಡ್‌ಕ್ರಾಸ್ ಅಂಡ್ ರೆಡ್ ಕ್ರೆಸೆಂಟ್ ಸೊಸೈಟಿಗಳಿಗೆ 2006ರಲ್ಲಿ ಸ್ಥಾಪಿಸಿದ 'ಹೆನ್ರಿ ಡುನ್ಯಾಂಡ್ ಚಿನ್ನದ ಪದಕ'ವನ್ನು ದೊರಕಿಸಿಕೊಟ್ಟಿತು. ಸುನಾಮಿ ಅಪ್ಪಳಿಸಿದಾಗ ತಮಿಳುನಾಡಿನಲ್ಲಿ ವಸತಿಗೃಹಗಳನ್ನು ಕಟ್ಟಿಸಿಕೊಡುವುದರ ಜೊತೆಗೆ, ಅಲ್ಲಿನ ಜನರಿಗೆ ಜೀವನಾಧಾರವನ್ನು ಕಲ್ಪಿಸಿದರು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಮಾಡಿದ ಸೇವೆಗೆ ಕರ್ನಾಟಕ ರಾಜ್ಯಪಾಲರಿಂದ 2005ರಲ್ಲಿ ಇವರಿಗೆ ದೊರೆತ 'ರೆಡ್‌ಕ್ರಾಸ್ ಸೇವಾ ಪ್ರಶಸ್ತಿ' ಮತ್ತೊಂದು ಗರಿಯಾಗಿ ಕಂಗೊಳಿಸುತ್ತಿದೆ. ಈ ಪರಿಹಾರ ಕಾರ್ಯದಲ್ಲಿ ಮಹತ್ತರ ಪಾತ್ರವಹಿಸಿದ ಡಾ. ಕೃಷ್ಣ ಉತ್ತರ ಕರ್ನಾಟಕದಾದ್ಯಂತ ಆಯ್ಕೆ ಮಾಡಿಕೊಂಡ ಹಾಗೂ ತರಬೇತಿ ಪಡೆದ ಸ್ವಯಂ ಸೇವಕರನ್ನುಳ್ಳ ರೆಡ್‌ಕ್ರಾಸ್ ಡಿಸಾಸ್ಟರ್ ರೆಸ್‌ಪಾನ್ಸ್ ತಂಡಗಳನ್ನು ರೂಪಿಸಿದ್ದರು. 2008ರಲ್ಲಿ ಉತ್ತರ ಕರ್ನಾಟಕದ ಪ್ರವಾಹ ಪೀಡಿತರಿಗಾಗಿ ರೆಡ್‌ಕ್ರಾಸ್ ಸಂಸ್ಥೆ ಕೈಗೊಂಡ ಕೋಟ್ಯಂತರ ರೂಗಳ ನೆರವಿನ ಯೋಜನೆಯ ತಂಡದ ಮುಖ್ಯಸ್ಥರಾಗಿದ್ದರು. ಇವರ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಲ್ಲಿನ ಪರಿಣತಿ ಮತ್ತು ಸೇವಾ ಮನೋಭಾವವನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರವು ಮುಖ್ಯಮಂತ್ರಿಗಳ ನೇತೃತ್ವದ 'ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ'ಕ್ಕೆ ರಾಜ್ಯ ಸಚಿವ ದರ್ಜೆಯ ಸದಸ್ಯರನ್ನಾಗಿ ನೇಮಕಮಾಡಿತು.

ಡಾ.ಕೃಷ್ಣ ಕ್ಷಯರೋಗ ನಿವಾರಣಾ ಕಾರ್ಯದಲ್ಲಿ ತೊಡಗಿಸಿಕೊಂಡುದನ್ನು ಗುರುತಿಸಿ ಭಾರತೀಯ ಕ್ಷಯರೋಗ ಸಂಸ್ಥೆಯ ಕೇಂದ್ರ ಸಮಿತಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರನ್ನಾಗಿ ಸರ್ಕಾರ ನೇಮಿಸಿತು. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗರ್ಭಿಣಿಯರಲ್ಲಿ ಅನಿಮಿಯಾ ನಿವಾರಣೆಗೆ ರೆಡ್‌ಕ್ರಾಸ್ ಕೈಗೊಂಡಿರುವ 12 ಬೈ 12 ಯೋಜನೆಯನ್ನು ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ತಲುಪಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಉಚಿತ

ರೆಡ್‌ಕ್ರಾಸ್ ರಕ್ತನಿಧಿ ಮತ್ತಿತರ ಆರೋಗ್ಯಭಾಗ್ಯ ಕಾರ್ಯಕ್ರಮಗಳ ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ವಿಶೇಷ ಅಭಿವೃದ್ಧಿ ಸಹಾಯಧನವನ್ನು ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ರಾಜ್ಯ ರೆಡ್‌ಕ್ರಾಸ್ ರಕ್ತನಿಧಿಯು ಮಹಿಳೆಯರಿಂದ ಅತಿಹೆಚ್ಚು ರಕ್ತವನ್ನು ದಾನವಾಗಿ ಪಡೆದುದಕ್ಕಾಗಿ 2007ರಲ್ಲಿ 'ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಪ್ರಶಸ್ತಿ'ಯನ್ನು ಪಡೆಯಿತು. 1984ರಿಂದಲೂ ಡಾ. ಕೃಷ್ಣ ಅವರು ರೆಡ್‌ಕ್ರಾಸ್ ಸಂಘಟನೆಯನ್ನು ಜನರಿಂದ ಜನರಿಗಾಗಿ ನೆರವಾಗುವ ಒಂದು ಆಂದೋಲನವನ್ನಾಗಿಸುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

2002ರಿಂದ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಉನ್ನತ ಹುದ್ದೆಯಾದ ಗೌರವ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಈ ಕಾರ್ಯವನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಿದ್ದಾರೆ. ಬಹಳಷ್ಟು ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಜರುಗುವಂತೆ ನಿಗಾವಹಿಸಿದ್ದಾರೆ. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಲ್ಲೂ ದಕ್ಷ ಆಡಳಿತಗಾರರಾಗಿ, ರಚನಾತ್ಮಕ ಯೋಜನೆಗಳನ್ನು ರೂಪಿಸಿ ಯಶಸ್ವಿಯಾಗಿ ಜಾರಿಗೊಳಿಸಿದ್ದಾರೆ. ಇವರು ಯಾವುದೇ ಕೆಲಸಕ್ಕೆ ಕೈ ಹಾಕಿದರೂ ಅದು ಯಶಸ್ಸು ಕಾಣಲೇಬೇಕು ಎಂಬ ಛಲ ಇವರಲ್ಲಿದೆ. ಇವರ ಕಾರ್ಯಕ್ರಮಗಳಲ್ಲಿ ಆರೋಗ್ಯ ಮಂತ್ರಿಗಳು, ರಾಜ್ಯಪಾಲರು ಬಂದು ಭಾಗವಹಿಸಿರುವುದು ಇವರ ಸಂಘಟನಾ ಶಕ್ತಿಯನ್ನು ತೋರಿಸುತ್ತದೆ.

ಯಾವುದೇ ಗೊಂದಲ, ವಿವಾದಗಳಿಗೆ ಸಿಲುಕದೆ ಡಾ. ಡಿ. ಎಂ. ನಂಜುಂಡಪ್ಪ ನವರ ಜೊತೆಗೂಡಿ ರೇಸ್‌ಕೋರ್ಸ್‌ನ ಎದುರು ಭವ್ಯವಾದ ರೆಡ್‌ಕ್ರಾಸ್ ಭವನವನ್ನು ನಿರ್ಮಿಸಿದರು. ಇದಕ್ಕೆ ಬೇಕಾದ ಎಲ್ಲಾ ಮೂಲ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆಗೆ ಸರ್ಕಾರದ ಒಪ್ಪಿಗೆ ಪಡೆದು ಒಂದು ಮಾದರಿ ರಕ್ತನಿಧಿಯನ್ನೂ ಸ್ಥಾಪಿಸಿದರು. ಹಾಗೇ ಬ್ಲಡ್ ಸೆಪರೇಷನ್ ಘಟಕಕ್ಕೂ ಸಹ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿದರು.

'ರಕ್ತದಾನ ಮಾಡಿ ಹೆಚ್ಚು ಜೀವಗಳನ್ನು ಉಳಿಸಿ' ಎನ್ನುವ ಘೋಷಣೆಯನ್ನು ಡಾ. ಕೃಷ್ಣರವರು ಅಕ್ಷರಶಃ ಕಾರ್ಯಗತ ಮಾಡಿದ್ದಾರೆ. ಇವರು ರಕ್ತ ನೀಡುವ ಬಗ್ಗೆ ಸಲಹೆ ಮಾರ್ಗದರ್ಶನ ಮಾಡುವುದರ ಜೊತೆಗೆ ಸ್ವತಃ ಹಲವು ಬಾರಿ ರಕ್ತದಾನ ಮಾಡಿ ಎಲ್ಲರಿಗೂ ಮಾದರಿಯಾಗಿದ್ದಾರೆ. 'ರಕ್ತದಾನ ಮಾಡುವವರಿಗೆ ಸಾಮಾನ್ಯವಾಗಿ ಹೃದಯಾಘಾತವಾಗುವ ಸಾಧ್ಯತೆ ಕಡಿಮೆ' ಎಂಬ ವೈಜ್ಞಾನಿಕ ಸತ್ಯವನ್ನು ರಕ್ತದಾನಿಗಳಿಗೆ ತಿಳಿಸುವಲ್ಲಿ ಕೃಷ್ಣರವರು ಮುಂಚೂಣಿಯಲ್ಲಿದ್ದಾರೆ.

❖

ರಾಷ್ಟ್ರ ಸೇವೆಗೆ ಮುಡಿಪು

ಮಹಾತ್ಮ ಗಾಂಧೀಜಿಯವರು ನನ್ನ ಪಾಲಿನ ಆದರ್ಶ ವ್ಯಕ್ತಿ ಎನ್ನುವ ಕೃಷ್ಣರವರಿಗೆ ಐ.ಎನ್.ಎ. ರಾಮ್‌ರಾವ್, ಪಾಟೀಲ್ ಪುಟ್ಟಪ್ಪ, ಹೆಚ್. ಎಸ್. ದೊರೆಸ್ವಾಮಿ, ಕೆ. ಎಸ್. ನಾರಾಯಣಸ್ವಾಮಿ, ಎಸ್. ವಿ. ಮಂಜುನಾಥ್, ಡಾ. ಹೊ. ಶ್ರೀನಿವಾಸಯ್ಯ, ಡಾ. ಎಂ. ಗುರುದಾಸ್, ದೊಡ್ಡಪ್ಪ ಡಬ್ಲ್ಯೂ. ಹೆಚ್. ಹನುಮಂತಪ್ಪ(ಜೂನಿಯರ್), ತಂದೆ ಡಬ್ಲ್ಯೂ.ಹೆಚ್. ಪುಟ್ಟಯ್ಯ, ಪ್ರೊ. ಹೆಚ್. ಆರ್. ದಾಸೇಗೌಡ, ಡಾ. ಜಿ. ಮಾದೇಗೌಡ ಮೊದಲಾದ ಸ್ವಾತಂತ್ರ್ಯ ಸೇನಾನಿಗಳಲ್ಲಿ, ಶಿಸ್ತುಬದ್ಧ ವ್ಯಕ್ತಿಗಳಲ್ಲಿ ಅತ್ಯಂತ ಅಪಾರ ಗೌರವ.

1923ರಲ್ಲಿ ಪ್ರಾರಂಭಗೊಂಡ ಸೇವಾ ಸಂಸ್ಥೆಯಾದ 'ಹಿಂದೂಸ್ಥಾನಿ ಸೇವಾದಳ'ಕ್ಕೆ ಪಂಡಿತ್ ಜವಹರಲಾಲ್ ನೆಹರು ಅಧ್ಯಕ್ಷರಾಗಿಯೂ, ಡಾ. ಎನ್. ಎಸ್. ಹರ್ಡಿಕರ್ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಇದೇ ಮುಂದೆ ಭಾರತ ಸೇವಾದಳವಾಯಿತು. ಇದೊಂದು ರಾಜಕೀಯೇತರ ರಾಷ್ಟ್ರೀಯ ಯುವಸೇವಾ ಸಂಸ್ಥೆಯಾಗಿದ್ದು ದೇಶದ ಏಕತೆ ಮತ್ತು ಭಾವೈಕ್ಯತೆಗಾಗಿ ಶ್ರಮಿಸುತ್ತಿದೆ. ಡಾ. ಕೃಷ್ಣ ಅವರು ಭಾರತ ಸೇವಾದಳ ಕೇಂದ್ರ ಸಮಿತಿಯ ಗೌರವ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯದಾದ್ಯಂತ 14,000 ಶಾಲೆಗಳಲ್ಲಿ ಸೇವಾದಳದ ಘಟಕಗಳನ್ನು ಪ್ರಾರಂಭಿಸುವ, ಶಾಲಾ ಶಿಕ್ಷಕರಿಗಾಗಿ ಸಾವಿರಾರು ಸೇವಾದಳ ತರಬೇತಿ ಶಿಬಿರಗಳನ್ನು ಏರ್ಪಡಿಸುವ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಶಾಲಾ ಮಕ್ಕಳಿಗಾಗಿ ರಾಷ್ಟ್ರೀಯ ಭಾವೈಕ್ಯತಾ

ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರೊಂದಿಗೆ, ಡಾ. ಎಸ್.ಎಂ. ಸುರೇಶ್ವಯ್ಯ, ಟಿ. ಪ್ರಭಾಕರ್
ರಾಜುಚಂದ್ರಶೇಖರ್, ಡಾ. ಎನ್. ಜಿ. ನಾರಾಯಣ, ಸರೋಜ ಕೆ.ಎಂ. ನಂಜಪ್ಪ

ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರೊಂದಿಗೆ

ಮಾಜಿ ಕೇಂದ್ರ ಸಚಿವ ಗುಲಾಮ್ ನಬಿ ಅಜಾದ್
ಮಾಜಿ ಕೇಂದ್ರ ರಾಜ್ಯ ಸಚಿವೆ ಪುರಂದರೇಶ್ವರಿ

ಭಾರತ ರತ್ನ
ಪ್ರೊ. ಸಿ. ಎನ್. ಆರ್. ರಾವ



ನೋಬಲ್ ಪ್ರಶಸ್ತಿ
ಪುರಸ್ಕೃತ ಅರ್ಥಶಾಸ್ತ್ರಜ್ಞ
ಪ್ರೊ. ಮೊಹಮ್ಮದ್
ಯೂನುಸ್

ಇಸ್ರೋ ಮಾಜಿ ಅಧ್ಯಕ್ಷ
ಮಾಧವನ್ ನಾಯರ್
ಪದ್ಮಶ್ರೀ
ಆರ್. ಎಂ. ವಾಸಗಮ್
ಡಾ. ಎಲ್.ವಿ.
ಮುರಳೀಕೃಷ್ಣ ರೆಡ್ಡಿ
ಸಿ. ಜಗದೀಶ

ಶಿಬಿರಗಳನ್ನು ಸಂಘಟಿಸುವ ಹಾಗೂ ಬೆಂಗಳೂರಿನಲ್ಲಿ 'ಡಾ. ಎಂ. ಸಿ. ಮೋದಿ ಸೇವಾದಳ ತರಬೇತಿ ಕೇಂದ್ರ'ವನ್ನು ಪ್ರಾರಂಭಿಸುವ ಕಾರ್ಯಗಳಲ್ಲಿ ಇವರು ಅತ್ಯಂತ ಮಹತ್ವಪೂರ್ಣ ಪಾತ್ರವಹಿಸಿದ್ದಾರೆ. ಮಹಾತ್ಮಾ ಗಾಂಧೀಜಿಯವರ ಜೀವನ ಮತ್ತು ಆದರ್ಶಗಳಿಂದ ಪ್ರೇರಿತರಾಗಿರುವ ಇವರು ಅವುಗಳನ್ನು ಮುಖ್ಯವಾಗಿ ಇಂದಿನ ಯುವಜನಾಂಗಕ್ಕೆ ತಲುಪಿಸುವ ಸಲುವಾಗಿ ವೈವಿಧ್ಯಮಯ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಗಾಂಧೀಜಿಯವರಿಂದ ಸ್ಥಾಪಿತವಾದ ಸರ್ವಸೇವಾ ಸಂಘದ ಭಾಗವಾದ ಕರ್ನಾಟಕ ಸರ್ವೋದಯ ಮಂಡಲದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ಪ್ರತಿಷ್ಠಿತ ಗಾಂಧಿ ಪ್ರಣೀತ ಸಂಸ್ಥೆಗಳಾದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದದ್ದು ವಿಶೇಷ. ಕೇಂದ್ರ ಗಾಂಧಿ ಶಾಂತಿ ಪ್ರತಿಷ್ಠಾನವನ್ನು ಡಾ. ರಾಜೇಂದ್ರ ಪ್ರಸಾದ್ ಪ್ರಾರಂಭಿಸಿದರು, ಅವರು ಅದರ ಸ್ಥಾಪಕ ಅಧ್ಯಕ್ಷರು. ಇದು ಗಾಂಧಿ ತತ್ವ ಪ್ರಚಾರದ ವಿಂಗ್. ಹಿಂದೆ ಆರ್. ಆರ್. ದಿವಾಕರ್ ಇದರಲ್ಲಿದ್ದರು. ಇಲ್ಲಿನ ಖಾದಿ ಉಡುಪು ಒಂದು ಸಂಜ್ಞೆ, ಸಂಕೇತ. ಈ ಉಡುಪನ್ನು ತಮ್ಮ ಶಾಲಾ ಕಾಲೇಜುಗಳಲ್ಲಿ ವಾರಕ್ಕೆ ಒಂದು ದಿನ ಅಳವಡಿಸುವ ಮೂಲಕ ಖಾದಿಯ ಬಗ್ಗೆ ಯುವಜನತಲ್ಲಿ ಪ್ರೀತಿ ಮೂಡಿಸುವ ಕಾರ್ಯಮಾಡಿದ್ದಾರೆ.

ಜನಸಾಮಾನ್ಯರಲ್ಲಿ ಜಾತಿಭೇದದ ಭಾವನೆಗಳನ್ನು ಹೋಗಲಾಡಿಸಿ ಜಾತ್ಯತೀತ ಸಮಾಜ ನಿರ್ಮಾಣದ ಗುರಿಹೊಂದಿರುವ ಡಾ. ಕೃಷ್ಣ, ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಸ್ಥೆಯ ಬೆಂಗಳೂರು ಘಟಕದ ಅಧ್ಯಕ್ಷರಾಗಿ ಶಾಲಾಮಕ್ಕಳು ಹಾಗೂ ಯುವಜನತೆಯಲ್ಲಿ ಅಂತರ್ಜಾತೀಯ ಸೌಹಾರ್ದತೆ ಮತ್ತು ಏಕತೆಯ ಭಾವವನ್ನು ಮೂಡಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.



ವಿಶ್ರಾಂತ ಕುಲಪತಿಗಳಾದ
ಡಾ. ಎಸ್.ಸಿ. ಶರ್ಮ

ಯುವಜನ ಸೇವೆ

ನಮ್ಮ ಸಮಾಜದ ನಾಳಿನ ಪ್ರಜೆಗಳಾದ ಇಂದಿನ ಯುವಜನಾಂಗದ ಸರ್ವತೋಮುಖ ಬೆಳವಣಿಗೆಯ ಬಗ್ಗೆ ಅಪಾರ ಆಸಕ್ತಿಯಿರುವ ಡಾ. ಕೃಷ್ಣ ಅವರು ಈ ನಿಟ್ಟಿನಲ್ಲಿ ಚಿಂತನೆ ನಡೆಸುತ್ತಾ, ವಿವಿಧ ಯೋಜನೆಗಳನ್ನು ರೂಪಿಸುವಲ್ಲಿ ನಿರತರಾಗಿದ್ದಾರೆ. ಯುವಶಕ್ತಿಯನ್ನು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸುವ ಅಂತಹ ಕಾರ್ಯಕ್ರಮಗಳಲ್ಲಿ ಮತ್ತು ಸಂಘಟನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರಕರಾಗಿದ್ದಾರೆ. ಯುವಜನರ ಶ್ರೇಯೋಭಿವೃದ್ಧಿಗಾಗಿ ಯೂತ್ ಹಾಸ್ಟೆಲ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರಾಗಿರುವ ಇವರು ಹಿಮಾಲಯ ಟ್ರೆಕ್ಕಿಂಗ್ (ಚಾರಣ) ಕಾರ್ಯಕ್ರಮಗಳೂ ಸೇರಿದಂತೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅಡ್ವೆಂಚರ್ ಕ್ಲಬ್‌ಗಳನ್ನು ರೂಪಿಸುವಲ್ಲಿ ಶ್ರಮಿಸಿದ್ದಾರೆ. ಇವರು ನವಜೀವನ ಫಿಸಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟ್‌ನ ಉಪಾಧ್ಯಕ್ಷರೂ ಹೌದು. ಈ ಸಂಸ್ಥೆಯು ಯುವಕರಿಗಾಗಿ ಉಚಿತ ವ್ಯಾಯಾಮ ಶಾಲೆ, ವಿದ್ಯಾರ್ಥಿನಿಲಯ ಹಾಗೂ ಒಂದು ಚಿಕಿತ್ಸಾಲಯವನ್ನು ನಡೆಸುತ್ತಿದೆ. 1863ರಲ್ಲಿ ಪ್ರಾರಂಭಗೊಂಡ ಒಂದು ಸೇವಾಸಂಸ್ಥೆ– ಶ್ರೀನಿವಾಸ ಮಂದಿರಮ್ ಧರ್ಮಸಂಸ್ಥೆ. ಡಾ. ಕೃಷ್ಣ ಅವರು ಇದರ ಆಡಳಿತ ಮಂಡಳಿಯಲ್ಲಿ ಸರ್ಕಾರದಿಂದ ನಾಮನಿರ್ದೇಶನ ಗೊಂಡ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಯುವಜನ ಸೇವಾಕ್ಷೇತ್ರಕ್ಕೆ ಇವರು ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರವು 1992ರಲ್ಲಿ ಇವರಿಗೆ 'ರಾಜ್ಯ ಯುವ ಪ್ರಶಸ್ತಿ'ಯನ್ನಿತ್ತು ಸತ್ಕರಿಸಿದೆ.

ವಿಶ್ವ ತಂಬಾಕುರಹಿತ ದಿನಾಚರಣೆಯ ಕಾರ್ಯಕ್ರಮದಲ್ಲಿ

ಇವರು ರಾಜಕೀಯವಾಗಿ ಬೆಳೆಯಬಹುದಿತ್ತಾದರೂ, 'ನನಗೆ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಇಷ್ಟ. ಹಾಗಾಗಿ ರಾಜಕಾರಣ ನನ್ನ ಆದ್ಯತೆಯಲ್ಲ' ಎಂದು ಪ್ರಾಮಾಣಿಕವಾಗಿ ನುಡಿಯುತ್ತಾರೆ. ಪರಿಸರದ ಬಗ್ಗೆ, ಕಾನೂನಿನ ಅನುಕೂಲತೆ-ಅನಾನುಕೂಲತೆಗಳ ಬಗ್ಗೆ, ಗಾಂಧೀ ವಿಚಾರಧಾರೆಯ ಬಗ್ಗೆ ನಿರರ್ಗಳವಾಗಿ ಮನಮುಟ್ಟುವಂತೆ, ಕೇಳುಗರಿಗಿಷ್ಟವಾಗುವಂತೆ ಮಾತನಾಡಬಲ್ಲರು. ಹಲವು ಹತ್ತು ಪ್ರತಿಷ್ಠಿತ ಸಂಘ-ಸಂಸ್ಥೆಗಳ ಅಧ್ಯಕ್ಷರಾಗಿರುವ ಕೃಷ್ಣ ಅವರದ್ದು ಬಹುಮುಖ ಅನ್ನುವುದಕ್ಕಿಂತ ಶತಮುಖ ಪ್ರತಿಭೆ ಎಂದರೆ ಮಾತ್ರ ಸರಿಹೋದೀತು.

ಸದಾಶಿವನಗರ ವಾಸಿಗಳಿಗೆ ಸಾಮಾನ್ಯ ಜನರ ನೋವು-ನಲಿವು, ಕಷ್ಟ-ಸುಖ ಅರ್ಥವಾಗುವುದು ಕಷ್ಟ ಎಂಬುದು ಸಾಮಾನ್ಯ ಗ್ರಹಿಕೆ. ಆದರೆ ಅಲ್ಲಿನ ಹೃದಯ ಭಾಗದಲ್ಲಿದ್ದುಕೊಂಡೇ ರಚನಾತ್ಮಕ ಕಾರ್ಯಗಳಲ್ಲಿ ವೈಯಕ್ತಿಕವಾಗಿ ಮತ್ತು ವೂಡೇ ಪ್ರತಿಷ್ಠಾನದ ಮುಖಾಂತರ ತೊಡಗಿಸಿಕೊಂಡಿರುವ ಕೃಷ್ಣ, ಸದಾಶಿವನಗರ ಯುವಕ ಸಂಘದ ಸಂಸ್ಥಾಪಕ ಸದಸ್ಯರಾಗಿ ಹಲವು ವರ್ಷಗಳಿಂದ ಅದರ ಅವಿಭಾಜ್ಯ ಅಂಗವಾಗಿ ದುಡಿಯುತ್ತಿರುವ ಅವರ ಪ್ರಾಮಾಣಿಕತೆ ಅನನ್ಯವಾದುದು.

ಹತ್ತು ಹಲವು ಪದವಿಗಳನ್ನು ಪಡೆದು ವೃತ್ತಿಯಲ್ಲಿ ಇಂಜಿನಿಯರ್ ಎಂದು ಕರೆಸಿಕೊಂಡು ಮನೆಯಲ್ಲೇ ಕುಳಿತು ಸುಖಪಡುವ ಎಲ್ಲ ಸೌಲಭ್ಯಗಳಿದ್ದರೂ ಕೃಷ್ಣ ಜನಸಾಮಾನ್ಯರಿಗಾಗಿ ಸ್ಪಂದಿಸುತ್ತಾರಲ್ಲ ಅದೇ ವೂಡೇ ವಂಶದ ವಿಶೇಷ ಎನ್ನಬಹುದು. ಇವರ ಇದೇ ಮನೆತನವೇ ಸಮಾಜ ಸೇವೆಯಲ್ಲಿ



ಮನೋವಿಜ್ಞಾನಿ
ಡಾ. ಸಿ. ಆರ್.
ಚಂದ್ರಶೇಖರ್

ತೊಡಗಿಸಿಕೊಂಡು ಮುಂದಿನ ಪೀಳಿಗೆಗೆ ಜನಾನುರಾಗಿಯಾಗಿ ಸೇವೆ ಮಾಡಲು ರಾಜಮಾರ್ಗವನ್ನು ಹಾಕಿಕೊಟ್ಟಿದೆ ಎಂದರೆ ತಪ್ಪಾಗಲಾರದು. ಅದನ್ನು ನಿರ್ವಂಚನೆಯಿಂದ ಡಾ.ಕೃಷ್ಣರವರು ನೆರವೇರಿಸುತ್ತಿದ್ದಾರೆ.

ಅವರು ವಿದ್ಯಾರ್ಥಿಯಾಗಿದ್ದಾಗಲೇ ಸಾರ್ವಜನಿಕ ಕಾಳಜಿಯ ಪತ್ರಗಳನ್ನು ಪ್ರತಿಷ್ಠಿತ ಇಂಗ್ಲಿಷ್ ಪತ್ರಿಕೆಗಳ 'Letters to the Editor' ಕಾಲಂಗೆ ಸತತವಾಗಿ ಬರೆಯುವ ಹವ್ಯಾಸ ಅವರದಾಗಿತ್ತು. ಇಂಥ ನೂರಾರು ಪತ್ರಗಳು ಅವರ ಸೇವಾಮನೋಭಾವದ ವಿವಿಧ ಮುಖಗಳನ್ನು ಬಿಂಬಿಸುತ್ತವೆ. ಹಾಗೂ ತಮ್ಮಂತೆಯೇ ಸೇವಾಕ್ಷೇತ್ರದಲ್ಲಿರುವ ಧುರೀಣರ ಬಗ್ಗೆ ಅನೇಕ ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ. ಅವು 'ಬೆಳ್ಳಕ್ಕಿ ಸಾಲು' ಎಂಬ ಕೃತಿಯಲ್ಲಿ ಸಂಕಲಿತಗೊಂಡಿವೆ. ಸ್ವಯಂ ಇಂಜಿನಿಯರ್ ಆಗಿರುವ ತಾವು ತಮ್ಮ ಆದರ್ಶದ ಇಂಜಿನಿಯರ್ ಆಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಸಿದ್ಧಿ-ಸಾಧನೆಗಳನ್ನು ಕುರಿತು ಒಂದು ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ.

ಅನೇಕ ಸಭೆ-ಸಮಾರಂಭಗಳಲ್ಲಿ ಇವರು ಮಾಡಿದ ವಿದ್ವತ್ಪೂರ್ಣ ಭಾಷಣಗಳು, ಅವರು ಇಂಗ್ಲಿಷ್ ಪತ್ರಿಕೆಗಳ ವಾಚಕರವಾಣಿಗೆ ಬರೆದ ಪತ್ರಗಳು ಸೇರಿದಂತೆ ಅವು 'Beyond the Boundaries' ಕೃತಿಯಲ್ಲಿ ಸಂಕಲಿತಗೊಂಡಿವೆ. ಅವರ ಈ ಎಲ್ಲಾ ಕೃತಿಗಳೂ ಮನನೀಯವಾಗಿವೆ.

ಇಂಥ ಬಹುಮುಖ ವ್ಯಕ್ತಿತ್ವದ ಕೃಷ್ಣ ಅವರಿಗೆ 50 ವರ್ಷ ತುಂಬಿದ ಸಂದರ್ಭದಲ್ಲಿ ಸಮರ್ಪಿಸಿದ 'ಕೃಷ್ಣಸಿರಿ' ಎಂಬ ಸಂಭಾವನಾ ಗ್ರಂಥ ಅವರ ಬದುಕಿನ ವಿವಿಧ ಮಜಲುಗಳ ವಿರಾಟ್ ದರ್ಶನ ಮಾಡಿಸುತ್ತದೆ.

❖

ಪಾರದರ್ಶಕ ವ್ಯಕ್ತಿತ್ವ

ಆತ್ಮೀಯ ಸ್ನೇಹಿತರನ್ನು ಇವರು ಸುಲಭವಾಗಿ ಕಳೆದುಕೊಳ್ಳುವುದಿಲ್ಲ. ತಾವು ಉನ್ನತ ಸ್ಥಾನದಲ್ಲಿದ್ದರೂ ಗೆಳೆಯರೊಡನೆ ಸಹಜವಾಗಿ ನಡೆದುಕೊಳ್ಳುತ್ತಾರೆ.

ಡಾ. ಕೃಷ್ಣರವರಲ್ಲಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ಸಮರ್ಪಕ ಸಮತೋಲನವಿದೆ. ಕ್ರಿಯಾಶೀಲತೆ, ಆದರ್ಶ, ಚಿಂತನೆ, ಶುದ್ಧ ಆಚಾರ, ಸಾಮಾಜಿಕ ಕಳಕಳಿ, ಪ್ರಾಮಾಣಿಕ ಮಾತು, ನಿಯಮಬದ್ಧ ಶಿಸ್ತು ಸದ್ಗುಣಗಳು ಇವರನ್ನು ಈ ಮಟ್ಟಕ್ಕೆ ಏರಿಸಿವೆ. ಕೃಷ್ಣರಂತಹ ಅನೇಕ ವ್ಯಕ್ತಿಗಳ ಅವಶ್ಯಕತೆ ಇಂದು ನಮ್ಮ ಭಾರತ ದೇಶಕ್ಕಿದೆ.

ಒಮ್ಮೆ 'ಅಕ್ಕ' ಸಂಸ್ಥೆ ಚಿಕಾಗೊದಲ್ಲಿ ಏರ್ಪಡಿಸಿದ್ದ ಕನ್ನಡ ಸಮ್ಮೇಳನಕ್ಕೆ ಡಾ. ಕೃಷ್ಣರವರು ತೆರಳಿದ್ದರು. ಅಲ್ಲಿಂದ ಕತಾರ್ ದೇಶದ ರಾಜಧಾನಿ ದೋಹದಲ್ಲಿ ನಡೆದ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದಾಗ ಅಲ್ಲಿಂದ ದುಬೈಗೆ ಹೋಗುವ ಸಂದರ್ಭ ಒದಗಿ ಬಂದಿತು. ದುಬೈಗೆ ಹತ್ತಿರದ ಶಾರ್ಜಾದಲ್ಲಿ ಹಿರಿಯ ಪತ್ರಕರ್ತ ಇ.ಪಿ. ಸತ್ಯನಾರಾಯಣ ಅವರು ತಮ್ಮ ತಮ್ಮನ ಮನೆಗೆ ಸ್ನೇಹಿತರ ತಂಡದೊಡನೆ ಕೃಷ್ಣರವರನ್ನೂ ಕರೆದೊಯ್ದಿದ್ದರು. ಮಧ್ಯಾಹ್ನದ ಊಟ ಮುಗಿಸಿ ತಮ್ಮನ ಮನೆಯಿಂದ ವಾಪಸು ಹೊರಡುವಾಗ ಲೋಕಾರೂಢಿಯಂತೆ ತಮ್ಮ ಅತಿಥಿಗಳೆಲ್ಲರಿಗೂ ಉಡುಗೊರೆಯಾಗಿ ಚಿಕ್ಕ ವಾಚನ್ನು ನೀಡಿದರು. ಬೆಳಗಿನ ಜಾವ ಬೆಂಗಳೂರಿಗೆ ಬಂದಿಳಿದ ತಂಡವೆಲ್ಲವೂ ಪರಸ್ಪರ ಶುಭಾಶಯ

ಮಹಾತ್ಮ ಗಾಂಧೀಜಿ ಅವರು ಹುಟ್ಟಿದ ಸ್ಥಳ ಪೋರ್‌ಬಂದರ್‌ನಲ್ಲಿ ಕೃಷ್ಣರವರು ಜನರಲ್ ಡಾ. ವಿ. ಜೆ. ಸುಂದರಮ್ ಡಾ. ಎಲ್. ವಿ. ಮುರಳೀಕೃಷ್ಣ ರೆಡ್ಡಿ



ಮಾಸ್ಕೋದ ಭಾರತ ರಾಯಭಾರಿ ಕಚೇರಿಯ ಮುಂದಿರುವ ಗಾಂಧಿ ಪ್ರತಿಮೆಯ ಬಳಿ

ಅಮೆರಿಕಾದಲ್ಲಿ ವಿಜ್ಞಾನಿ ಡಾ. ಬಾನಾದ್ ಜಗನ್ನಾಥ್ ರಾಜಶೇಖರ್ ಡಿ.ಎನ್.

ತಿಳಿಸಿ ನಿರ್ಗಮಿಸುವಾಗ ಕೃಷ್ಣರವರು 'ಸತ್ಯನಾರಾಯಣ ಅವರೇ ತಪ್ಪು ತಿಳಿಯಬೇಡಿ. ನಿಮ್ಮ ತಮ್ಮ ಅಲ್ಲಿ ನೀಡಿದ್ದ ವಾಚನ್ನು ನಿಮಗೆ ವಾಪಸ್ ಮಾಡುತ್ತಿದ್ದೇನೆ. ಅನ್ಯಥಾ ಭಾವಿಸದೆ ಇದನ್ನು ಬೇರೆ ಯಾರಿಗಾದರೂ ಅದರಲ್ಲೂ ವಿಶೇಷವಾಗಿ ಯಾವುದಾದರೂ ವಿದ್ಯಾರ್ಥಿಗೆ ಉಡುಗೊರೆಯಾಗಿ ನೀಡಿ' ಎಂದು ಹೇಳಿ ವಿನಮ್ರವಾಗಿ ವಾಪಸ್ ನೀಡಿ ಸ್ನೇಹದ ನಗೆ ಬೀರಿ ಹೊರಟೇಬಿಟ್ಟರು. ಸ್ನೇಹಿತರ ವಲಯದಲ್ಲಿ ಕೃಷ್ಣರವರು ಅಜಾತ ಶತ್ರು.

ಶಿಕ್ಷಣ ದೇಗುಲದಲ್ಲಿ ಎಲ್ಲೂ ಒಂದು ಪೈಸೆಯೂ ಅಪವ್ಯಯ ಆಗಬಾರದು. ಪ್ರತಿಯೊಂದಕ್ಕೂ ಲೆಕ್ಕಚಾರವಿರಬೇಕು ಎನ್ನುವುದು ಇವರ ನಿಲುವು. ಇವರ ಗೌರವ ಸ್ಥಾನದ ಅರ್ಥಕ್ಕೆ ಸ್ವಲ್ಪವೂ ಲೋಪಬರದಂತೆ, ಕನ್ನಡಿಯಂತೆ ಇವರು ಕೆಲಸ ನಿರ್ವಹಿಸುತ್ತಿದ್ದಾರೆ. ಮಕ್ಕಳ ಹಣವನ್ನು ಮಕ್ಕಳಿಗೇ ಸದ್ವಿನಿಯೋಗ ಮಾಡಬೇಕು, ಪ್ರತಿಭೆಗಳು ಅರಳಬೇಕು ಎಂಬುದು ಇವರ ಅಭಿಲಾಷೆ. ವಿದ್ಯಾರ್ಥಿಗಳು ಎಂದರೆ ಅವರು ಓದಿದವರು ಎಂದು ಮಾತ್ರ ಅರ್ಥವಲ್ಲ, 'ತಯಾರಾದವರು' ಎಂದು ಅರ್ಥವಾಗುತ್ತದೆ ಎಂಬುದು ಇವರ ಉವಾಚ. ಆರ್ಥಿಕವಾಗಿ ಬಡ ಮಕ್ಕಳಿಗೆ ಫೀಜಿನಲ್ಲಿ ಸಾಕಷ್ಟು ರಿಯಾಯಿತಿ ನೀಡಿ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿರುವುದು ಇವರ ಹೃದಯವಂತಿಕೆಗೆ ಸಾಕ್ಷಿ.

ಅಂಧ ಹಾಗೂ ಇತರೆ ವಿಕಲಚೇತನ ಮಕ್ಕಳಿಗೆ ಶೇ. 50ರಷ್ಟು ರಿಯಾಯ್ತಿ ದರದಲ್ಲಿ ಪ್ರವೇಶಾವಕಾಶ ಏರ್ಪಡಿಸಿದ್ದಾರೆ. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ಇಂಥ ಹಲವರು ಉತ್ತಮ ಹುದ್ದೆಯಲ್ಲಿದ್ದಾರೆ. ತಮ್ಮ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಬೇರೆ ಬೇರೆ ರಾಮಕೃಷ್ಣಾಶ್ರಮಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಚಿಂತನ-ಮಂಥನಗಳಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಕೃಷ್ಣ ಅವರು ತಮ್ಮ ವಿದ್ಯಾ ಸಂಸ್ಥೆಗಳ ಶೈಕ್ಷಣಿಕ ಪ್ರಗತಿಗೆ ನೈತಿಕತೆಯನ್ನು ತುಂಬಿದ್ದಾರೆ. ವಿದ್ಯಾದಾನ ಶ್ರೇಷ್ಠದಾನ ಎಂದು ಅರಿತಿರುವವರಲ್ಲಿ ಇವರು ಒಬ್ಬರು.

ನಾಡೋಜ
ಪ್ರೊ. ಬರಗೂರು ರಾಮಚಂದ್ರಪ್ಪ
ಸ್ವಾತಂತ್ರ್ಯ ಹೋರಾಟಗಾರ
ಹೆಚ್.ಎಸ್. ದೊರೆಸ್ವಾಮಿ

ಪೂಡೇ ಪ್ರತಿಷ್ಠಾನ

ಡಾ. ಕೃಷ್ಣರವರ ತಂದೆ ಅಪ್ಪಟ ಗಾಂಧೀವಾದಿಗಳು. ಗಾಂಧೀಜಿಯವರ ತತ್ವ ಆದರ್ಶಗಳ ಪ್ರೇರಣೆ ಪಡೆದ ಪುಟ್ಟಯ್ಯನವರಿಗೆ ಸಮಾಜದ ಕಾರ್ಯಗಳಲ್ಲಿ ತುಂಬು ಆಸಕ್ತಿ. ಒಟ್ಟಾರೆ ಸಮಾಜದ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸಲು ನಿಸ್ವಾರ್ಥ ಮನಸ್ಸಿನಿಂದ 1983ರಲ್ಲಿ 'ಪೂಡೇ ಪ್ರತಿಷ್ಠಾನ'ವನ್ನು ಪುಟ್ಟಯ್ಯನವರು ಸ್ಥಾಪಿಸಿದರು. ಪುಟ್ಟಯ್ಯನವರು ವಿದ್ಯಾರ್ಥಿಯಾಗಿದ್ದಾಗ ತಾವು ಸರ್ಕಾರದಿಂದ ಪಡೆದ ಸ್ಕಾಲರ್‌ಶಿಪ್‌ನ ಉದ್ದೇಶವನ್ನು ಗ್ರಹಿಸಿ ತಾವೂ ಅದೇ ರೀತಿಯಲ್ಲಿ ಹಲವಾರು ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಬೇಕೆಂಬ ಹಂಬಲದಿಂದ 'ಪೂಡೇ ಪ್ರತಿಷ್ಠಾನ' ಸ್ಥಾಪಿಸಿ, ಪ್ರತಿವರ್ಷ ನೂರಾರು ವೃತ್ತಿಶಿಕ್ಷಣ ಪಡೆಯುವ ಪ್ರತಿಭಾವಂತ ಆಕಾಂಕ್ಷಿಗಳಿಗೆ ವಿದ್ಯಾರ್ಥಿವೇತನ ನೀಡಲು ಪ್ರಾರಂಭಿಸಿದರು. ಆಗ ಕೃಷ್ಣರವರು ಇನ್ನೂ ವಿದ್ಯಾರ್ಥಿ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವುದರ ಜೊತೆಜೊತೆಗೆ ಪ್ರತಿಷ್ಠಾನದ ಮೂಲಕ ಆರೋಗ್ಯ ಸೇವೆ ಒದಗಿಸುವ ಕೆಲಸವನ್ನೂ ಮಾಡಿದರು. ಹಳ್ಳಿಹಳ್ಳಿಗಳಲ್ಲಿರುವ ಆರ್ಥಿಕವಾಗಿ ದುರ್ಬಲರಾದ ಮಹಿಳೆಯರನ್ನು ಗುರುತಿಸಿ ಎಂ.ಒ. ಮೂಲಕ ಅವರಿಗೆ ಪ್ರತಿ ತಿಂಗಳು ಹಣ ಕಳಿಸುವ ವ್ಯವಸ್ಥೆಯನ್ನು ಪ್ರತಿಷ್ಠಾನ ಮಾಡುತ್ತಾ ಬಂದಿದೆ.

ಜನ ಸಮುದಾಯದ ಹಿತೈಷಿ ಸಂಸ್ಥೆಗಳಾದ ಆಚಾರ್ಯ ವಿನೋಬಾಭಾವೆ ಸ್ಥಾಪಿತ ವಿಶ್ವನೀಡಂ ಟ್ರಸ್ಟ್, ಸಂತ ಜಾನ್ ಆಂಬುಲೆನ್ಸ್ ಸಂಸ್ಥೆ ಮುಂತಾದವುಗಳ ಒಡನಾಟ ಮತ್ತು ಕಾರ್ಯಭಾರಗಳು ಏನಿದ್ದರೂ, ಎಷ್ಟಿದ್ದರೂ, ಹುಟ್ಟಿದೂರು

ರೆಡ್‌ಕ್ರಾಸ್ ಸೇವೆಗಾಗಿ
ರಾಷ್ಟ್ರಪತಿ
ಪ್ರಣಬ್ ಮುಖರ್ಜಿ ಅವರಿಂದ
ಚಿನ್ನದ ಪದಕ
ಪಡೆಯುತ್ತಿರುವ ಕೃಷ್ಣರವರು,
ಕೇಂದ್ರ ಆರೋಗ್ಯ ಸಚಿವ
ಗುಲಾಮ್ ನಬಿ ಆಜಾದ್
ಉಪಸ್ಥಿತಿಯಲ್ಲಿ



ಮುಖ್ಯಮಂತ್ರಿ ಧರ್ಮಸಿಂಗ್
ಸಚಿವ ಪಿ. ಜಿ. ಆರ್. ಸಿಂಧ್ಯ
ಅವರಿಂದ
ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ

ಕೆಂಪೇಗೌಡ ಪ್ರಶಸ್ತಿ
ಸ್ವೀಕಾರ
ಸಮಾರಂಭದಲ್ಲಿ
ಮೇಯರ್
ಕೆ. ಚಂದ್ರಶೇಖರ್
ಸಚಿವ ಪ್ರೊ. ಬಿ. ಕೆ.
ಚಂದ್ರಶೇಖರ್
ಸಚಿವ ಟಿ. ಜಾನ್

ವಿಶ್ವ ರೆಡ್ ಕ್ರಾಸ್
ದಿನಾಚರಣೆ
ಕಾರ್ಯಕ್ರಮದಲ್ಲಿ
ಸನ್ಮಾನ ಸ್ವೀಕಾರ

ಕೇವಲ ಐವತ್ತು ವರ್ಷಗಳಲ್ಲಿಯೇ ಇಂತಹ ಮಹಾನ್ ಸಾಧಕರಾಗಿ ಹೊರಹೊಮ್ಮಲು ಅವರ ಬಹುಮುಖಿ ಅಧ್ಯಯನ, ನಿಸ್ಪೃಹವಾದ ಪ್ರಾಮಾಣಿಕ ಸೇವೆ, ಸಾಮಾಜಿಕ ಕಳಕಳಿ, ಬದ್ಧತೆಯಿಂದ ಕೂಡಿದ ಬದುಕು ಅವರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ ಎಂದರೆ ತಪ್ಪಾಗಲಾರದು. ಸರ್ಕಾರ ಹಾಗೂ ಸಂಘಸಂಸ್ಥೆಗಳು ನೀಡುವ ವಿವಿಧ ಪ್ರಶಸ್ತಿ, ಪುರಸ್ಕಾರಗಳ ಗೌರವಕ್ಕೆ ಪಾತ್ರರಾಗಿರುವ ಕೃಷ್ಣರವರ ವ್ಯಕ್ತಿತ್ವಕ್ಕೆ ಮತ್ತಷ್ಟು ಹೊಳಪು ಬರುವುದರೊಂದಿಗೆ ಸಮಾಜ ಸೇವೆ ಮಾಡಲು ಪ್ರೇರಣೆ ಒದಗಿಸಿದೆ ಎಂದೇ ಹೇಳಬಹುದು.

ಜಸ್ಟಿಸ್ ರಾಮಾಜೊಯಿಸ್

ಪದ್ಮವಿಭೂಷಣ
ಡಾ. ವೀರೇಂದ್ರಹೆಗ್ಗಡೆ



ಜಾನಪದ ತಜ್ಞ
ಗೊ.ರು. ಚನ್ನಬಸಪ್ಪ

ಪ್ರತಿಷ್ಠಿತ ನಾಡೋಜ ಗೌರವ



ಹಂಪಿಯ ಕನ್ನಡ ವಿಶ್ವವಿದ್ಯಾಲಯ '28ನೇ ನುಡಿ ಹಬ್ಬ'ದಲ್ಲಿ ನೀಡಿದ
ಪ್ರತಿಷ್ಠಿತ 'ನಾಡೋಜ' (2020) ಗೌರವ ಪದವಿಯನ್ನು
ಡಾ. ವೂಡೇ ಪಿ. ಕೃಷ್ಣರವರು ಸ್ವೀಕರಿಸುತ್ತಿರುವುದು.
ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ
ಡಾ. ಸಿ.ಎನ್. ಅಶ್ವತ್ಥನಾರಾಯಣರವರು,
ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಸ.ಚಿ. ರಮೇಶ್‌ರವರು,
ಕುಲಸಚಿವ ಡಾ. ಸುಬ್ಬಣ್ಣ ರೈ ಹಾಗೂ ಉಪಸ್ಥಿತ ಇತರೆ ಗಣ್ಯಮಾನ್ಯರು

ಕನ್ನಡಿಗರ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆಯಾದ ಹಂಪಿಯ ಕನ್ನಡ ವಿಶ್ವವಿದ್ಯಾಲಯ 1991 ರಲ್ಲಿ ಪ್ರಾರಂಭಗೊಂಡ ದಿನದಿಂದ ಇಂದಿನವರೆಗೆ ನಾಡಿನ ಸಂಸ್ಕೃತಿಯ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿಕೊಂಡು ಬರುತ್ತಿದೆ. ಸಂಶೋಧನೆಯ ಭಾಗವಾಗಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯವು ಭಾಷೆ, ಸಾಹಿತ್ಯ, ಸಂಸ್ಕೃತಿಯ ನೆಲೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ನಡೆಸುತ್ತಿರುವುದು ಅತ್ಯುತ್ತಮ ಬೆಳವಣಿಗೆಯಾಗಿದೆ.

'ನಾಡೋಜ ಪ್ರಶಸ್ತಿ'ಯು ಕನ್ನಡ ಸಾಹಿತ್ಯದ ಆದಿಕವಿ ಪಂಪನ ಬಿರುದಾಗಿದ್ದು, ಆ ಮಹಾನುಭಾವನ ಹೆಸರಿನಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು 1995 ರಿಂದ ಬಂಗಾಳಿ ಕವಿ, ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೋರರ ಶಾಂತಿನಿಕೇತನದಲ್ಲಿ ನೀಡಲಾಗುತ್ತಿರುವ 'ದೇಶಿಕೋತ್ತಮ' ಪದವಿಯ ಪ್ರೇರಣೆಯಿಂದ ಈ ಪ್ರಶಸ್ತಿಯನ್ನು ಕನ್ನಡದ ನವೋದಯದ ಋಷಿಕವಿ ವಿಶ್ವಮಾನವಪ್ರಜ್ಞೆ ಮೂಡಿಸಿದ ಕುವೆಂಪು ಅವರಿಗೆ ಮೊತ್ತಮೊದಲಿಗೆ ನೀಡುವುದರ ಮೂಲಕ ಪ್ರಶಸ್ತಿಯ ಗೌರವದ ಮೇರುವನ್ನು ಉಳಿಸುತ್ತಲೇ ಮುಂದೆ ನಾಡಿನ ಬಹುಮುಖಿ ಸಂಸ್ಕೃತಿಯನ್ನು ಬಿತ್ತುವ ಸರ್ವರಿಗೂ ಪ್ರತಿವರ್ಷದ ಘಟಿಕೋತ್ಸವದಲ್ಲಿ ಪ್ರಶಸ್ತಿ ನೀಡುತ್ತಾ ಬಂದಿದೆ. ಶಿವರಾಮಕಾರಂತ, ಪು.ತಿ.ನರಸಿಂಹಚಾರ್, ಜಿ.ಎಸ್.ಶಿವರುದ್ರಪ್ಪ, ಯು.ಆರ್.ಅನಂತಮೂರ್ತಿ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ, ದೇವನೂರು ಮಹಾದೇವರಂತಹ ಮೇರು ಸಾಹಿತಿಗಳಿಗೆ, ಗಂಗೂಬಾಯಿ ಹಾನಗಲ್, ಪಂಡಿತ ಗಾನಯೋಗಿ ಪುಟ್ಟರಾಜ ಗವಾಯಿ, ಪಂಡಿತ ಭೀಮಸೇನ ಜೋಷಿಯಂತಹ ಗಾನಗಾರುಡಿಗರಿಗೆ, ಎಸ್.ನಿಜಲಿಂಗಪ್ಪ, ಸರೋಜಿನಿ ಮಹಿಷಿಯರಂತಹ ಸಜ್ಜನ ರಾಜಕಾರಣಿಗಳಿಗೆ, ಸಾಲುಮರದ ತಿಮ್ಮಕ್ಕ, ಸುಭದ್ರಮ್ಮ ಮನ್ಸೂರು, ದರೋಜಿ ಈರಮ್ಮ, ಸುಕ್ರಿ ಬೊಮ್ಮಗೌಡ, ಸಾರಾ ಅಬೂಬಕರ್, ಸಿ. ಪಾರ್ವತಮ್ಮ, ಗೀತಾ ನಾಗಭೂಷಣ, ಕಮಲಾ ಹಂಪನಾ, ಸಿರಿಯಜ್ಜಿ, ವೆಂಕಟಲಕ್ಷ್ಮಮ್ಮ, ಹರಿಜನ ಪದ್ಮಮ್ಮ, ಬಿ.ಕೆ.ಸುಮಿತ್ರರಂತಹ ಮಹಿಳಾಮಣಿಗಳಿಗೆ, ಡಾ.ಯು.ಆರ್.ರಾವ್, ಡಾ.ಸಿ.ಎನ್.ಆರ್.ರಾವ್‌ರಂತಹ ಜಾಗತಿಕ ವಿಜ್ಞಾನಿಗಳಿಗೆ; ಎಸ್.ಆರ್. ನಾಯಕ್, ವಿ.ಎಸ್.ಮಳೀಮಠ, ಕೋ.ಚೆನ್ನಬಸಪ್ಪ, ಸಂತೋಷ ಹೆಗಡೆಯವರಂತಹ ನ್ಯಾಯಮೂರ್ತಿಗಳಿಗೆ, ಕಲಾರಾಧಕರಾದ ಡಾ.ರಾಜ್‌ಕುಮಾರ್ ಅವರಿಗೆ, ಬಹುಮುಖಿಯಾಗಿ ಜನ ಸೇವೆಗೈದ ಎಲ್.ನಾರಾಯಣರೆಡ್ಡಿ, ಡಾ.ವೀರೇಂದ್ರ ಹೆಗ್ಗಡೆ, ಡಾ.ಜಿ.ಶಂಕರ್, ಡಾ.ಬಿ.ಟಿ.ರುದ್ರೇಶ್– ಹೀಗೆ 85ಕ್ಕಿಂತ ಹೆಚ್ಚು ನಾಡ ಕಣ್ಮಣಿಗಳ ಸೇವೆಯನ್ನು ಗುರುತಿಸಿ 'ನಾಡೋಜ' ಗೌರವ ನೀಡಿ ಪುರಸ್ಕರಿಸಿರುವುದು ಕನ್ನಡ ವಿಶ್ವವಿದ್ಯಾಲಯ ಮತ್ತು ಕನ್ನಡಿಗರ ಹೆಮ್ಮೆಯ ವಿಷಯವಾಗಿದೆ.

2020ರ ಸಾಲಿಗೆ ಮೊತ್ತಮೊದಲ ಬಾರಿಗೆ ಗಾಂಧೀವಾದಿಗಳು, ಶಿಕ್ಷಣ ತಜ್ಞರು, ಸಾಮಾಜಿಕ ಸೇವಾಕರ್ತರು ಆದ ಡಾ.ವೂಡೇ ಪಿ. ಕೃಷ್ಣ ಅವರಿಗೆ

ಡಾ. ವೂಡೇ ಪಿ. ಕೃಷ್ಣ ಅವರೊಂದಿಗೆ 'ನಾಡೋಜ' (2020) ಗೌರವ ಪದವಿಯನ್ನು ಸ್ವೀಕರಿಸಿದ ಡಾ. ಹಣಮಂತಪ್ಪ ಗೋವಿಂದಪ್ಪ ದಡ್ಡಿ

ಸಾಮಾಜಿಕ ಸೇವೆಗಾಗಿ
ಡಾ. ವೂಡೇ ಪಿ. ಕೃಷ್ಣ ಅವರಿಗೆ
ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ
ಡಾಕ್ಟರ್ ಆಫ್ ಲೆಟರ್ಸ್
(D.Lit.)–2023 ಗೌರವ ಪದವಿ
ಡಾ. ಲಿಂಗರಾಜು ಗಾಂಧಿ (ಕುಲಪತಿಗಳು)
ಥಾವರ್ ಚಂದ್ ಗೆಹ್ಲೋಟ್(ಗವರ್ನರ್)
ಡಾ. ಸಿ.ಎನ್. ಮಂಜುನಾಥ್
(ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕರು)

ಹಂಪಿಯ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿದೆ. ಇವರು ವೂಡೇ ಮನೆತನದ ಬೆಂಗಳೂರಿನ ಪುರಸಭೆಗೆ ಮೊದಲ ಅಧ್ಯಕ್ಷರಾಗಿದ್ದ ಡಬ್ಲ್ಯೂ.ಎಚ್.ಹನುಮಂತಪ್ಪನವರ ಕುಡಿಯಾದ ಸ್ವಾತಂತ್ರ್ಯ ಹೋರಾಟಗಾರ ಪುಟ್ಟಯ್ಯನವರ ಮಗನಾಗಿದ್ದು, ಪ್ರಸ್ತುತದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಾದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ಎರಡು ದಶಕಗಳಿಂದಲೂ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಲ್ಲಿ ಅಧ್ಯಕ್ಷರಾಗಿ, ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಮುಖ್ಯಸ್ಥರಾಗಿ, ಹಾಗೂ ನಾಡಿನ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ನಿಸ್ಪೃಹ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ.

ಸಾಧನೆಗೆ ಸಾವಿರ ಮುಖ

ಡಾ. ವೂಡೇ ಪಿ. ಕೃಷ್ಣ ಅವರ ಕಾರ್ಯಕ್ಷೇತ್ರಗಳ ವಿರಾಟ್ ದರ್ಶನ ಇಲ್ಲಿದೆ.

- ಭಾರತ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್‌ನ ಇಂಜಿನಿಯರಿಂಗ್ ಪರಿಷತ್ ಸದಸ್ಯರು.
- ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯಸಚಿವ ದರ್ಜೆಯ ಸದಸ್ಯರು.
- ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು.
- ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು.
- ಭಾರತೀಯ ಸೇವಾದಳ ಕೇಂದ್ರ ಸಮಿತಿಯ ಗೌರವ ಕೋಶಾಧ್ಯಕ್ಷರು.
- ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳು.
- ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರು.
- ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರು.
- ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
- ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯಶಾಖೆ ಕಾರ್ಯನಿರ್ವಾಹಕ ಉಪಾಧ್ಯಕ್ಷರು.

- ಭಾರತೀಯ ಕ್ಷಯರೋಗ ಸಂಸ್ಥೆಯ ಕೇಂದ್ರ ಸಮಿತಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
- ಬೆಂಗಳೂರು ನಗರದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಬೋರ್ಡ್ ಆಫ್ ವಿಸಿಟರ್ಸ್ ಸದಸ್ಯರು.
- ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಪರಿಷತ್ ಸದಸ್ಯರು.
- ರಾಷ್ಟ್ರೀಯ ವಿನ್ಯಾಸ ಮತ್ತು ಸಂಶೋಧನ ಸಂಸ್ಥೆಯ ಬೋರ್ಡ್ ಆಫ್ ಗವರ್ನರ್ಸ್‌ನ ಸದಸ್ಯರು.
- ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ವ್ಯವಸ್ಥಾಪಕ ಮಂಡಳಿ ಸದಸ್ಯರು.
- ಬೆಂಗಳೂರು ಶಾಖೆಯ ವ್ಯಾಲ್ಯುಯರ್ಸ್ ಸಂಸ್ಥೆಯ ಉಪಾಧ್ಯಕ್ಷರು.
- ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರು.
- ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘದ ಬೆಂಗಳೂರು ಘಟಕದ ಅಧ್ಯಕ್ಷರು.
- ಭಾರತೀಯ ವಿಶ್ವಶಾಂತಿ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು.
- ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ದತ್ತಿಯ ವ್ಯವಸ್ಥಾಪಕ ಧರ್ಮದರ್ಶಿಗಳು.
- ಕರ್ನಾಟಕ ಖಾಸಗಿ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಸಂಘದ ಕಾರ್ಯದರ್ಶಿಗಳು.
- ಸದಾಶಿವನಗರ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿನ ಅಧ್ಯಕ್ಷರು.
- ಅಪ್ಪಾವು ಪಿಳ್ಳೈ ಶಿಕ್ಷಣ ಸಂಸ್ಥೆಗಳ ಧರ್ಮದರ್ಶಿ.
- ಬೆಂಗಳೂರಿನ ಏಟ್ರಿಯಾ ಇಂಜಿನಿಯರಿಂಗ್ ಕಾಲೇಜಿನ ಶೈಕ್ಷಣಿಕ ಹಾಗೂ ಅಭಿವೃದ್ಧಿ ಸಮಿತಿ ಸದಸ್ಯರು.
- ಸೈಂಟ್ ಜಾನ್ ಆಂಬುಲನ್ಸ್ ಸಂಘದ ಕರ್ನಾಟಕ ರಾಜ್ಯ ಶಾಖೆಯ ಕಾರ್ಯಕಾರಿಣಿ ಸದಸ್ಯರು.
- ಕರ್ನಾಟಕ ಸರ್ವೋದಯ ಮಂಡಲದ ಕಾರ್ಯಕಾರಿ ಮಂಡಳಿ ಸದಸ್ಯರು.
- ಶ್ರೀನಿವಾಸ ಮಂದಿರಂ ಧರ್ಮಸಂಸ್ಥೆಗೆ ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ ಧರ್ಮದರ್ಶಿಗಳು.
- ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ ರವರು ಸ್ಥಾಪಿಸಿದ ಬ್ರಹ್ಮಮಂದಿರ ದತ್ತಿಯ ಧರ್ಮದರ್ಶಿಗಳು.

- ವೂಡೇ ಪ್ರತಿಷ್ಠಾನದ ಸ್ಥಾಪಕ ಧರ್ಮದರ್ಶಿಗಳು.
- ಕರ್ನಾಟಕ ಸರ್ಕಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯಾದಾದ್ಯಂತ ಏರ್ಪಡಿಸಿದ್ದ 'ಯುವಜಾಗೃತಿ' ಕಾರ್ಯಕ್ರಮಗಳ ಸಂಘಟನಾ ಸಮಿತಿಯ ಸದಸ್ಯರು.
- ಪಟೇಲ್ ಪ್ರತಿಷ್ಠಾನದ ಗೌರವ ಅಧ್ಯಕ್ಷರು.
- ರಾಜಾ ರಾಮ್‌ಮೋಹನ್ ರಾಯ್ ಸ್ಥಾಪಿತ ಬ್ರಹ್ಮೋಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರು.
- ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು.
- ಇಂಡಿಯನ್ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರು.

ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಸಮಾಜದ ದುರ್ಬಲರ ಸೇವೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಘ-ಸಂಸ್ಥೆಗಳಲ್ಲಿ ಉನ್ನತ ಮಟ್ಟದ ನಾಯಕರು ಹಗಲಿರುಳು ಶ್ರಮಿಸಿದ್ದಾರೆ. ಅವರುಗಳ ಹಾದಿಯಲ್ಲಿಯೇ ಸಂಘ-ಸಂಸ್ಥೆಗಳ ಪುರೋಭಿವೃದ್ಧಿಗಾಗಿಯೇ ಕಂಕಣತೊಟ್ಟು ಸಮಾಜದ ಸೇವೆಗಾಗಿ, ದೇಶದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟುಕೊಂಡಿರುವ ಕೃಷ್ಣರವರು ಹಲವು ಮಹನೀಯರ ಪ್ರಭಾವ ಮತ್ತು ಮಾರ್ಗದರ್ಶನದಂತೆ ಸಂಘ-ಸಂಸ್ಥೆಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ, ಯುವಪೀಳಿಗೆಯ ಭವಿಷ್ಯದ ಬಗೆಗಿನ ಉತ್ತಮ ಆಶಯ, ಮಾನವೀಯ ಮೌಲ್ಯಗಳ ತುಡಿತ, ನಾಯಕತ್ವದ ಗುಣವಿರುವ ಕೃಷ್ಣರವರು ಆಡಳಿತಾತ್ಮಕವಾಗಿ ಉನ್ನತ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ಅವರ ಸೇವೆ 'ಆಡು ಮುಟ್ಟದ ಸೊಪ್ಪಿಲ್ಲ, ಕೃಷ್ಣರವರು ಮಾಡದ ಕಾರ್ಯವೇ ಇಲ್ಲ' ಎಂಬಂತೆ ಬಹುಮುಖಿ ಸ್ಥಾನಗಳನ್ನು ಹೊಂದಿ ನಿಸ್ವಾರ್ಥ ಸೇವೆ ರೀತಿಯಲ್ಲಿ ಸಲ್ಲಿಸುತ್ತಿದ್ದಾರೆ. ಹೀಗೆ ಇನ್ನೂ ದಾಖಲಿಸುತ್ತಾ ಹೋದರೆ ಬಹುಶಃ ಅವುಗಳು ಮುಗಿಯುವುದಿಲ್ಲವೇನೋ ......

ಇಲ್ಲಿ ಸೂಚಿಸಿರುವ ಸಂಘ-ಸಂಸ್ಥೆಗಳಲ್ಲಿ ಸೇವೆ ಮಾಡಲು ಹಲವು ಮಹನೀಯರು ಕೃಷ್ಣರವರ ಕಾರ್ಯತತ್ಪರತೆಯನ್ನು ಮೆಚ್ಚಿ ತೊಡಗಿಸಿ ಕೊಳ್ಳುವಂತೆ ಮಾಡಿದ್ದಾರೆ. ಅವರುಗಳು ವಹಿಸಿದ ಜವಾಬ್ದಾರಿಗಳನ್ನು ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ರಾಷ್ಟ್ರನಾಯಕರ ಆದರ್ಶಗಳೊಂದಿಗೆ ಸಂಸ್ಥೆಗಳನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಆಡಳಿತಾತ್ಮಕವಾಗಿ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ಜೀವಮಾನದ ಘಟನಾವಳಿ

1963 : ಫೆಬ್ರವರಿ 1 ರಂದು ಜನನ, ಬೆಂಗಳೂರು.

1970 : ಬೆಂಗಳೂರು ಸದಾಶಿವನಗರ ಪೂರ್ಣಪ್ರಜ್ಞ ಶಾಲೆ ಪ್ರವೇಶ.

1975 : ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಪ್ರವೇಶ.

1981 : ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಕನ್ನಡ ಸಂಘದ ಸ್ಥಾಪನೆ, ಅಧ್ಯಕ್ಷರಾಗಿ ಆಯ್ಕೆ.

1982 : ಗೋಕಾಕ್ ಚಳವಳಿಯಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ನಾಯಕತ್ವ.

1984 : ರೆಡ್‌ಕ್ರಾಸ್ ಸದಸ್ಯರಾಗಿ ದಾಖಲು.

: ಬೆಂಗಳೂರು ಯೂತ್ ಹಾಸ್ಟೆಲ್ ಗೌರವ ಕೋಶಾಧಿಕಾರಿಯಾಗಿ ಆಯ್ಕೆ.

1986 : ಬಿ.ಇ. ಪದವಿ.

: ನೆಹರೂನಗರ ಸಹಕಾರಿ ಬ್ಯಾಂಕ್‌ನ ಗೌರವ ವ್ಯವಸ್ಥಾಪಕ ನಿರ್ದೇಶಕರಾಗಿ ಆಯ್ಕೆ.

1987 : ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರ್ಪಡೆ.

1988 : ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ.

: 'ಬ್ರಹ್ಮವಾಣಿ' ಮಾಸಪತ್ರಿಕೆ ಸಂಪಾದಕರಾಗಿ ಸೇವೆ.

1989 : ಡಬ್ಲ್ಯೂ. ಪಿ. ಕೃಷ್ಣ ಅಸೋಸಿಯೇಟ್ಸ್ ಮೂಲಕ ಸ್ವತಂತ್ರ ವೃತ್ತಿಜೀವನ ಪ್ರಾರಂಭ.

1990 : ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.

1991 : ಎಲ್‌ಎಲ್.ಬಿ. ಕಾನೂನು ಪದವಿ.

: ಶ್ರೀಮತಿ ಸವಿತಾರೊಂದಿಗೆ ವಿವಾಹ.

1992 : ಕರ್ನಾಟಕ ಸರ್ಕಾರದಿಂದ ಸಮುದಾಯ ಸೇವೆಗಾಗಿ ರಾಜ್ಯ ಯುವ ಪ್ರಶಸ್ತಿ.

: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಜೀವ ಧರ್ಮದರ್ಶಿಯಾಗಿ ಸೇರ್ಪಡೆ.

1994 : ಕೈಗಾರಿಕಾ ಇಂಜಿನಿಯರಿಂಗ್ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ.

1995 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಸಹಕಾರ್ಯ ದರ್ಶಿಯಾಗಿ ಅವಿರೋಧ ಆಯ್ಕೆ.

1997 : ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಸದಸ್ಯತ್ವ.

1999 : ಭಾರತ ಸರ್ಕಾರದ ಅನುಮೋದಿತ ಮೌಲ್ಯಮಾಪಕರಾಗಿ ನೋಂದಣಿ.

2000 : ಭಾರತ–ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾರತ ನಿಯೋಗದ ಮುಖಂಡರಾಗಿ ಶ್ರೀಲಂಕಾ ಭೇಟಿ.

2001 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ.

: ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಕಾರಿಣಿ ಸದಸ್ಯತ್ವಕ್ಕೆ ಆಯ್ಕೆ.

2002 : ಭಾರತ ಸೇವಾದಲ ಕೇಂದ್ರ ಸಮಿತಿ ಸದಸ್ಯರಾಗಿ ನೇಮಕ.

: ಬೆಂಗಳೂರು ಮಹಾನಗರ ಪಾಲಿಕೆಯಿಂದ ಶೈಕ್ಷಣಿಕ ಸೇವೆಗಾಗಿ ಕೆಂಪೇಗೌಡ ಪ್ರಶಸ್ತಿ.

2003 : ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಸ್ಥಾಪನೆ, ಕಾರ್ಯದರ್ಶಿಯಾಗಿ ಸೇವೆ.

: ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಗೌರವ ಕೋಶಾಧ್ಯಕ್ಷರಾಗಿ ಅವಿರೋಧ ಆಯ್ಕೆ.

2004 : ಕರ್ನಾಟಕ ಸರ್ಕಾರದಿಂದ ಸಮಾಜ ಸೇವೆಗಾಗಿ ಕನ್ನಡ ರಾಜ್ಯೋತ್ಸವದಂದು ರಾಜ್ಯ ಪ್ರಶಸ್ತಿ.

: ಮೈಸೂರು ಸ್ಟೋನ್‌ವೇರ್ ಪೈಪ್ಸ್ ಅಂಡ್ ಪಾಟರೀಸ್ ಲಿಮಿಟೆಡ್‌ನ ನಿರ್ದೇಶಕರಾಗಿ ನೇಮಕ.

: ಪುಣೆ ನಗರದಲ್ಲಿ ನಡೆದ 114ನೇ ವಾರ್ಷಿಕ ಅಖಿಲ ಭಾರತ ಬ್ರಹ್ಮೋಸಮಾಜ ಸಮ್ಮೇಳನದ ಅಧ್ಯಕ್ಷ ಗೌರವ.

2005 : ರಾಜ್ಯಪಾಲರಿಂದ ರೆಡ್‌ಕ್ರಾಸ್ ಸೇವಾ ಪ್ರಶಸ್ತಿ.

: ಸಮಾಜ ಸೇವೆಗಾಗಿ ಡಿ.ವಿ.ಜಿ. ಪುರಸ್ಕಾರ.

2006 : ನಿರ್ವಹಣಾ ಶಾಸ್ತ್ರದಲ್ಲಿ ಪಿಎಚ್.ಡಿ ಪದವಿ.

: ಭಾರತೀಯ ನಿಯೋಗದ ಸದಸ್ಯರಾಗಿ ಸೌಹಾರ್ದಯುತ ಚೀನಾ ಪ್ರವಾಸ.

: ಹೈದರಾಬಾದಿನಲ್ಲಿ ನಡೆದ 116ನೇ ವಾರ್ಷಿಕ ಅಖಿಲ ಭಾರತ ಬ್ರಹ್ಮಸಮಾಜ ಸಮ್ಮೇಳನದ ಅಧ್ಯಕ್ಷ ಗೌರವ.

: ರೆಡ್‌ಕ್ರಾಸ್ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆ.

2007 : ನ್ಯೂಜಿಲ್ಯಾಂಡಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಎರಡನೇ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ

: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ.

2008 : ಕರ್ನಾಟಕ ಸರ್ಕಾರದಿಂದ 'ವಿಕಲಚೇತನರ ಸಬಲೀಕರಣ ರಾಜ್ಯ ಪ್ರಶಸ್ತಿ'.

: ಭಾರತೀಯ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಪರಿಷತ್ತಿಗೆ ಆಯ್ಕೆ.

: ನ್ಯೂಯಾರ್ಕ್ ನಗರದ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಪುರಸ್ಕಾರ.

: ಕತಾರ್‌ನಲ್ಲಿ ನಡೆದ 5ನೇ ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಸನ್ಮಾನ.

2009 : ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯಸಚಿವ ದರ್ಜೆಯ ಸದಸ್ಯರಾಗಿ ನೇಮಕ.

: ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಆಡಳಿತ ಮಂಡಲಿ ಸದಸ್ಯತ್ವ.

: ಗಾಂಧೀ ಶಾಂತಿ ಪ್ರತಿಷ್ಠಾನ ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆ ಕೇಂದ್ರ ಸಮಿತಿ ಸದಸ್ಯರಾಗಿ ನೇಮಕ.

2010 : ನಾಸಿಕ್‌ನಲ್ಲಿ ನಡೆದ 28ನೇ ಮೆಕಾನಿಕಲ್ ಇಂಜಿನಿಯರುಗಳ ರಾಷ್ಟ್ರೀಯ ಅಧಿವೇಶನದ ಅಧ್ಯಕ್ಷತೆ.

: ಕೇರಳದ ಡಿ. ಸಿ. ನಿರ್ವಹಣಾ ಶಾಲೆಯ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ.

: ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ ಆಹ್ವಾನದ ಮೇರೆಗೆ

ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಭಾಗಿ.

: ಭಾರತೀಯ ಆರ್ಬಿಟ್ರೇಶನ್ ಪರಿಷತ್ತಿನ ಫೆಲೊ ಆಗಿ ಆಯ್ಕೆ.

2011 : ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ.

: ಕಾನೂನು ಸ್ನಾತಕೋತ್ತರ ಪದವಿ.

: ಬೆಂಗಳೂರಿನಲ್ಲಿ ನಡೆದ ಪ್ರತಿಷ್ಠಿತ 26ನೇ ಭಾರತೀಯ ಇಂಜಿನಿಯರಿಂಗ್ ಕಾಂಗ್ರೆಸ್‌ನ ಸಂಚಾಲಕತ್ವ.

: ಮಲೇಷ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಮೂರನೇ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ.

: ಕರ್ನಾಟಕ ಸರ್ಕಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯಾದಾದ್ಯಂತ ಏರ್ಪಡಿಸಿದ್ದ 'ಯುವಜಾಗೃತಿ' ಕಾರ್ಯಕ್ರಮಗಳ ಸಂಘಟನಾ ಸಮಿತಿಗೆ ಸದಸ್ಯರಾಗಿ ನೇಮಕ.

2012 : ಆಚಾರ್ಯವಿನೋಬಾ ಸ್ಥಾಪಿತ ವಿಶ್ವನೀಡಂ ಟ್ರಸ್ಟ್‌ನ ವ್ಯವಸ್ಥಾಪಕ ಧರ್ಮದರ್ಶಿಯಾಗಿ ನೇಮಕ.

: ಇಂಗ್ಲೆಂಡಿನ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಸಂಸ್ಥೆಯ ಪ್ರತಿಷ್ಠಿತ ಫೆಲೊ ಗೌರವ.

: ಭಾರತೀಯ ಇಂಜಿನಿಯರುಗಳ ಸಂಸ್ಥೆ ಕರ್ನಾಟಕ ರಾಜ್ಯ ಕೇಂದ್ರ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ರೆಡ್‌ಕ್ರಾಸ್ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ರಾಷ್ಟ್ರಪ್ರಶಸ್ತಿಯಾದ ರಾಷ್ಟ್ರಪತಿಗಳ ಚಿನ್ನದ ಪದಕ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಸ್ವೀಕಾರ.

: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷರಾಗಿ ನೇಮಕ.

: ರೋಟರಿ ಸಂಸ್ಥೆಯ ಗೌರವ ಸದಸ್ಯತ್ವ ಹಾಗೂ ಪಾಲ್ ಹ್ಯಾರಿಸ್ ಫೆಲೊ ಗೌರವ.

: 'ಸರ್.ಎಂ. ವಿಶ್ವೇಶ್ವರಯ್ಯ: ಜೀವನ ಸಾಧನೆ' ಪುಸ್ತಕ ಪ್ರಕಟಣೆ.

: ಎಸ್.ವ್ಯಾಸ ವಿಶ್ವವಿದ್ಯಾಲಯದ ದಶಮಾನೋತ್ಸವದಲ್ಲಿ ಸನ್ಮಾನ.

2013 : 50ನೇ ವರ್ಷದ ಹುಟ್ಟು ಹಬ್ಬ.

: ಶ್ರೀರಾಮಕೃಷ್ಣ ವಿದ್ಯಾಶಾಲಾ ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ.

: ರಾಯದುರ್ಗದಲ್ಲಿ ನಡೆದ 4ನೇ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

2014 : ಮಡಿಕೇರಿಯಲ್ಲಿ ನಡೆದ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

: ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ ಉಪಾಧ್ಯಕ್ಷರಾಗಿ ಆಯ್ಕೆ.

2015 : ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಭಾರತ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ಸಂಸ್ಥೆಯ ಇಂಜಿನಿಯರಿಂಗ್ ಪರಿಷತ್ತಿನ ಸದಸ್ಯತ್ವ.

: ಭಾರತ–ರಷ್ಯಾ ತಾಂತ್ರಿಕ ವಿನಿಮಯ ನಿಯೋಗದ ಸದಸ್ಯರಾಗಿ ರಷ್ಯಾ ಪ್ರವಾಸ.

: 'ನದಿಯಂತೆ ನೆನಪು', 'ಬೆಳ್ಳಕ್ಕಿ ಸಾಲು' ಹಾಗೂ 'Beyond the Boundaries' ಕೃತಿಗಳ ಪ್ರಕಟಣೆ.

: 'ಕೃಷ್ಣಸಿರಿ' ಐವತ್ತರ ಅಭಿನಂದನಾ ಗ್ರಂಥ ಸಮರ್ಪಣೆ.

: ಸಿಂಗಪುರದಲ್ಲಿ ನಡೆದ ವಿಶ್ವ ಇಂಜಿನಿಯರುಗಳ ಶೃಂಗಸಭೆಯಲ್ಲಿ ಭಾರತದ ಪ್ರತಿನಿಧಿ.

: ಕರ್ನಾಟಕ ರಾಜಭವನದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರೊಂದಿಗೆ ಸೌಹಾರ್ದಯುತ ಭೇಟಿ.

: ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ 2015ರ ಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ.

: ಬ್ರಿಕ್ಸ್ ಇಂಜಿನಿಯರಿಂಗ್ ಸಂಸ್ಥೆಗಳ ಫೆಡರೇಷನ್ನಿನ ಆಡಳಿತ ಮಂಡಳಿ ಸದಸ್ಯತ್ವ.

2016 : ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಪ್ರತಿಷ್ಠಿತ ಫೆಲೊ ಗೌರವ.

: ರಾಜಾ ರಾಮ್‌ಮೋಹನ್ ರಾಯ್ ಸ್ಥಾಪಿತ ಬ್ರಹ್ಮೋಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿ ನೇಮಕ.

: ಕರ್ನಾಟಕ ರಾಜ್ಯದ ಎಲ್ಲ 30 ಜಿಲ್ಲೆಗಳಲ್ಲಿ ಗಾಂಧೀ ಭವನ ನಿರ್ಮಾಣ ಯೋಜನೆಯಡಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತ ಸಮಿತಿ ಸದಸ್ಯರಾಗಿ ಕರ್ನಾಟಕ ಸರ್ಕಾರದಿಂದ ನೇಮಕ.

: ವಿಶ್ವ ಇಂಜಿನಿಯರುಗಳ ಅಕಾಡೆಮಿಯ ಫೆಲೊ ಗೌರವ.

2017 : ಗಾಂಧೀವಾದಿ ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ, ಮಂಡ್ಯ.

: 'ದಿ ಹಿಂದೂ'ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ 'ಡಾಯನ್ಸ್' ಪ್ರಶಸ್ತಿ.

: ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಪಟೇಲ್ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ನೇಮಕ.

: ಭಾರತೀಯ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರಾಗಿ ನೇಮಕ.

: ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ.

: ಬ್ರಿಕ್ಸ್ ಇಂಜಿನಿಯರಿಂಗ ಸಂಸ್ಥೆಗಳ ಫೆಡರೇಷನ್ನಿನ ತಾಂತ್ರಿಕ ನಿಯೋಗದ ಸದಸ್ಯರಾಗಿ ಜರ್ಮನಿ, ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳ ಪ್ರವಾಸ.

: ಬೆಂಗಳೂರು ಗಾಂಧೀನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

2018 : ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿಗೆ ಪುನರಾಯ್ಕೆ.

: ಬೆಂಗಳೂರು ನಗರ ಜಿಲ್ಲಾ ಸಂಸ್ಕೃತ ಸಮ್ಮೇಳನ ಅಧ್ಯಕ್ಷೀಯ ಗೌರವ.

: ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಗೌರವ.

: ಕರ್ನಾಟಕ ಸರ್ಕಾರದಿಂದ ರಾಜ್ಯ ಎನ್.ಎಸ್.ಎಸ್.(ರಾಷ್ಟ್ರೀಯ ಸೇವಾ ಯೋಜನೆ) ಸಲಹಾ ಸಮಿತಿ ಸದಸ್ಯರಾಗಿ ನೇಮಕ.

: ಪತ್ರಕರ್ತರು, ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯನವರು ತಮ್ಮ ಕಾದಂಬರಿ 'ಜೀವಜಲ' ಕೃತಿಯನ್ನು ಡಾ.ವೂಡೇ ಪಿ. ಕೃಷ್ಣ ಅವರಿಗೆ ಅರ್ಪಿಸಿದ್ದಾರೆ.

: ಗಾಂಧಿ ಶಾಂತಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಗೆ ಕರ್ನಾಟಕ ಸರ್ಕಾರದಿಂದ ನೇಮಕ.

: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಪುನರಾಯ್ಕೆ.

: ಬೆಂಗಳೂರಿನ ನ್ಯೂ ಹೊರೈಜನ್ ಇಂಜಿನಿಯರಿಂಗ್ (ಸ್ವಾಯುತ್ತ ಸಂಸ್ಥೆ) ಕಾಲೇಜಿನ 'ಎಮೆರಿಟಸ್ ಪ್ರೊಫೆಸರ್' ಗೌರವ.

2019 : ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ ಕಾರ್ಯಕಾರಿಣಿಗೆ ನೇಮಕ

: ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸಾಮಾಜಿಕ ಸೇವೆಗಾಗಿ ಗೌರವ ಪುರಸ್ಕಾರ.

: ಬೆಂಗಳೂರಿನ ಮಲ್ಲೇಶ್ವರದ ಹೆಸರಾಂತ ಗಾಂಧಿ ಸಾಹಿತ್ಯ ಸಂಘದ ವಜ್ರಮಹೋತ್ಸವ ಗೌರವ.



ರೆಡ್‌ಕ್ರಾಸ್ ಸೇವೆಗಾಗಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಚಿನ್ನದ ಪದಕ ಪಡೆಯುತ್ತಿರುವ ಕೃಷ್ಣರವರು, ಕೇಂದ್ರ ಆರೋಗ್ಯ ಸಚಿವ ಗುಲಾಮ್ ನಬಿ ಆಜಾದ್ ಉಪಸ್ಥಿತಿಯಲ್ಲಿ

ಮುಖ್ಯಮಂತ್ರಿ ಧರ್ಮಸಿಂಗ್ ಸಚಿವ ಪಿ. ಜಿ. ಆರ್. ಸಿಂಧ್ಯ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ

ಕೆಂಪೇಗೌಡ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಮೇಯರ್ ಕೆ. ಚಂದ್ರಶೇಖರ್ ಸಚಿವ ಪ್ರೊ. ಬಿ. ಕೆ. ಚಂದ್ರಶೇಖರ್ ಸಚಿವ ಟಿ. ಜಾನ್

ವಿಶ್ವ ರೆಡ್ ಕ್ರಾಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕಾರ

ಸಚಿವ
ಪಿ. ಎಂ. ನರೇಂದ್ರಸ್ವಾಮಿ
ಅವರಿಂದ
ವಿಕಲಚೇತನರ ಸಬಲೀಕರಣ
ರಾಜ್ಯ ಪ್ರಶಸ್ತಿ ಸ್ವೀಕಾರ

ಕತಾರ್‌ನಲ್ಲಿ ನಡೆದ
5ನೇ ವಿಶ್ವ ಕನ್ನಡ ಸಂಸ್ಕೃತಿ
ಸಮ್ಮೇಳನ–2008
ಸಮಾರಂಭದಲ್ಲಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ
ಅಧ್ಯಕ್ಷ
ಮುಖ್ಯಮಂತ್ರಿ ಚಂದ್ರು
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ
ಡಾ. ಚಂದ್ರಶೇಖರ ಕಂಬಾರ
ಅವರಿಂದ ಪ್ರಶಸ್ತಿ ಸ್ವೀಕಾರ

ಗಾಂಧಿವಾದಿ ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ–2017 ಸ್ವೀಕಾರ
ಪ್ರೊ. ಜಿ. ಬಿ. ಶಿವರಾಜು, ಡಾ. ಜಿ. ಮಾದೇಗೌಡ

13. ನ್ಯೂಯಾರ್ಕ್‌ನ ಬಸವ ಇಂಟರ್‌ನ್ಯಾಷನಲ್ ಸಂಸ್ಥೆಯ ಬಿನ್ನವತ್ತಳೆ.
14. ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಪ್ರತಿಷ್ಠಿತ ಫೆಲೋ ಗೌರವ.
15. ಕತಾರ್ ನಲ್ಲಿ ನಡೆದ 5ನೇ ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಸನ್ಮಾನ.
16. ಗಾಂಧೀ ವಿಚಾರ ಪ್ರಚಾರ ಸೇವೆಗಾಗಿ ಮಂಡ್ಯದ ಗಾಂಧೀ ಭವನದಿಂದ ಗಾಂಧೀವಾದಿ ಎಸ್. ವಿಶ್ವನಾಥ್ ಪ್ರಶಸ್ತಿ–2017.
17. 'ದಿ ಹಿಂದೂ' ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ 'ಡಾಯನ್ಸ್' ಪ್ರಶಸ್ತಿ–2017.
18. ಬೆಂಗಳೂರು ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ–2017.
19. ಸಮಾಜ ಸೇವೆಗಾಗಿ ಮಂಡ್ಯದ ಡಾ.ಜಿ.ಮಾದೇಗೌಡ ಪ್ರತಿಷ್ಠಾನ ಪ್ರಶಸ್ತಿ ಗೌರವ–2020.
20. ಶಿಕ್ಷಣ ಕ್ಷೇತ್ರದ ಅನುಪಮ ಸೇವಾಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ ದಿಂದ ಗೌರವ ಡಿ.ಲಿಟ್.ಗೆ ತತ್ಸಮಾನವಾದ ಪ್ರತಿಷ್ಠಿತ ನಾಡೋಜ ಗೌರವ ಪದವಿ–2020.

ಹೀಗೆ ಪ್ರಶಸ್ತಿ ಗೌರವಗಳ ಸರಮಾಲೆಯೇ ಅವರನ್ನು ಅಲಂಕರಿಸಿದೆ. ಒಬ್ಬ ವ್ಯಕ್ತಿ ಚಿಕ್ಕ ವಯಸ್ಸಿನಲ್ಲಿ ಇಂಥ ಸಾಧನೆ ಮಾಡಲು ಸಾಧ್ಯವೇ ಎಂದು ವಿಸ್ಮಯ ಪಡುವಷ್ಟು ಅಸಮಾನ್ಯ ವ್ಯಕ್ತಿತ್ವ ಕೃಷ್ಣ ಅವರದು. ಜ್ಞಾನಪೀಠ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರು ಹೇಳುವಂತೆ "ಒಬ್ಬ ಒಳ್ಳೆಯ ಕೆಲಸ ಮಾಡುವುದು ಪುಣ್ಯದ ತುರಾಯಿಗಳನ್ನು ರುಮಾಲಿಗೆ ಸಿಕ್ಕಿಸಿಕೊಳ್ಳಲಿಕ್ಕೆ ಅಲ್ಲ. ಅದು ಅವನ ಜೀವನ ರೀತಿ ಅಷ್ಟೆ" ಎನ್ನುವ ಮಾತು ನಿಜಕ್ಕೂ ಕೃಷ್ಣರವರಿಗೆ ಒಪ್ಪುವಂತಹದ್ದು. ಅವರೆಂದೂ ಪ್ರಶಸ್ತಿಗಾಗಿ ಬೆನ್ನುಹತ್ತಿ ಹೋದವರಲ್ಲ. ಪ್ರಶಸ್ತಿಗಳು ಬರಲಿ ಎಂದು ಸೇವೆ ಮಾಡಿದವರಲ್ಲ. ಸೇವೆ ಮಾಡುವುದು ಅವರ ಬದುಕಿನ ಸಹಜತೆಯಾಗಿದೆ. ಆದ್ದರಿಂದಲೇ ಪ್ರಶಸ್ತಿಗಳು ಸಹಜವಾಗಿಯೇ ವೂಡೇ ಪಿ. ಕೃಷ್ಣರವರನ್ನು ಹುಡುಕಿಕೊಂಡು ಬಂದಿವೆ, ಬರುತ್ತಿವೆ. ನಿಷ್ಕಲ್ಮಷಜೀವಿಯಾಗಿ, ನಿಸ್ವಾರ್ಥಿಯಾಗಿ, ಆಶಾಜೀವಿಯಾಗಿ ಸದಾ ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ನೇರ ನಡೆನುಡಿಯ ಕ್ರಿಯಾಶೀಲ ವ್ಯಕ್ತಿತ್ವದ ಸರಳ ಸಜ್ಜನಿಕೆ ಸಾಕಾರಮೂರ್ತಿಯಾಗಿರುವ ವೂಡೇ ಪಿ. ಕೃಷ್ಣರವರಿಗೆ ಎಷ್ಟೇ ಗೌರವಗಳು ಅರಸಿ ಬಂದಿದ್ದರೂ ಅವರೆಂದೂ ಬೀಗದೆ ಸಹಜ ರೀತಿಯಲ್ಲಿ ತಮ್ಮ ಪಾಡಿಗೆ ತಾವು ಪ್ರಾಮಾಣಿಕವಾಗಿ ಸೇವೆಯಲ್ಲೇ ಮುಳುಗಿರುತ್ತಾರೆ.

ಕೇವಲ ಐವತ್ತು ವರ್ಷಗಳಲ್ಲಿಯೇ ಇಂತಹ ಮಹಾನ್ ಸಾಧಕರಾಗಿ ಹೊರಹೊಮ್ಮಲು ಅವರ ಬಹುಮುಖಿ ಅಧ್ಯಯನ, ನಿಸ್ಪೃಹವಾದ ಪ್ರಾಮಾಣಿಕ ಸೇವೆ, ಸಾಮಾಜಿಕ ಕಳಕಳಿ, ಬದ್ಧತೆಯಿಂದ ಕೂಡಿದ ಬದುಕು ಅವರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ ಎಂದರೆ ತಪ್ಪಾಗಲಾರದು. ಸರ್ಕಾರ ಹಾಗೂ ಸಂಘಸಂಸ್ಥೆಗಳು ನೀಡುವ ವಿವಿಧ ಪ್ರಶಸ್ತಿ, ಪುರಸ್ಕಾರಗಳ ಗೌರವಕ್ಕೆ ಪಾತ್ರರಾಗಿರುವ ಕೃಷ್ಣರವರ ವ್ಯಕ್ತಿತ್ವಕ್ಕೆ ಮತ್ತಷ್ಟು ಹೊಳಪು ಬರುವುದರೊಂದಿಗೆ ಸಮಾಜ ಸೇವೆ ಮಾಡಲು ಪ್ರೇರಣೆ ಒದಗಿಸಿದೆ ಎಂದೇ ಹೇಳಬಹುದು.



ಜಸ್ಟಿಸ್ ರಾಮಾಜೊಯಿಸ್

ಪದ್ಮವಿಭೂಷಣ
ಡಾ. ವೀರೇಂದ್ರಹೆಗ್ಗಡೆ



ಜಾನಪದ ತಜ್ಞ
ಗೊ.ರು. ಚನ್ನಬಸಪ್ಪ

ಪ್ರತಿಷ್ಠಿತ ನಾಡೋಜ ಗೌರವ

ಹಂಪಿಯ ಕನ್ನಡ ವಿಶ್ವವಿದ್ಯಾಲಯ '28ನೇ ನುಡಿ ಹಬ್ಬ'ದಲ್ಲಿ ನೀಡಿದ
ಪ್ರತಿಷ್ಠಿತ 'ನಾಡೋಜ' (2020) ಗೌರವ ಪದವಿಯನ್ನು
ಡಾ. ವೂಡೇ ಪಿ. ಕೃಷ್ಣರವರು ಸ್ವೀಕರಿಸುತ್ತಿರುವುದು.
ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ
ಡಾ. ಸಿ.ಎನ್. ಅಶ್ವತ್ಥನಾರಾಯಣರವರು,
ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಸ.ಚಿ. ರಮೇಶ್‌ರವರು,
ಕುಲಸಚಿವ ಡಾ. ಸುಬ್ಬಣ್ಣ ರೈ ಹಾಗೂ ಉಪಸ್ಥಿತ ಇತರೆ ಗಣ್ಯಮಾನ್ಯರು

ಕನ್ನಡಿಗರ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆಯಾದ ಹಂಪಿಯ ಕನ್ನಡ ವಿಶ್ವವಿದ್ಯಾಲಯ 1991 ರಲ್ಲಿ ಪ್ರಾರಂಭಗೊಂಡ ದಿನದಿಂದ ಇಂದಿನವರೆಗೆ ನಾಡಿನ ಸಂಸ್ಕೃತಿಯ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿಕೊಂಡು ಬರುತ್ತಿದೆ. ಸಂಶೋಧನೆಯ ಭಾಗವಾಗಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯವು ಭಾಷೆ, ಸಾಹಿತ್ಯ, ಸಂಸ್ಕೃತಿಯ ನೆಲೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ನಡೆಸುತ್ತಿರುವುದು ಅತ್ಯುತ್ತಮ ಬೆಳವಣಿಗೆಯಾಗಿದೆ.

'ನಾಡೋಜ ಪ್ರಶಸ್ತಿ'ಯು ಕನ್ನಡ ಸಾಹಿತ್ಯದ ಆದಿಕವಿ ಪಂಪನ ಬಿರುದಾಗಿದ್ದು, ಆ ಮಹಾನುಭಾವನ ಹೆಸರಿನಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು 1995 ರಿಂದ ಬಂಗಾಳಿ ಕವಿ, ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೋರರ ಶಾಂತಿನಿಕೇತನದಲ್ಲಿ ನೀಡಲಾಗುತ್ತಿರುವ 'ದೇಶಿಕೋತ್ತಮ' ಪದವಿಯ ಪ್ರೇರಣೆಯಿಂದ ಈ ಪ್ರಶಸ್ತಿಯನ್ನು ಕನ್ನಡದ ನವೋದಯದ ಋಷಿಕವಿ ವಿಶ್ವಮಾನವಪ್ರಜ್ಞೆ ಮೂಡಿಸಿದ ಕುವೆಂಪು ಅವರಿಗೆ ಮೊತ್ತಮೊದಲಿಗೆ ನೀಡುವುದರ ಮೂಲಕ ಪ್ರಶಸ್ತಿಯ ಗೌರವದ ಮೇರುವನ್ನು ಉಳಿಸುತ್ತಲೇ ಮುಂದೆ ನಾಡಿನ ಬಹುಮುಖಿ ಸಂಸ್ಕೃತಿಯನ್ನು ಬಿತ್ತುವ ಸರ್ವರಿಗೂ ಪ್ರತಿವರ್ಷದ ಘಟಿಕೋತ್ಸವದಲ್ಲಿ ಪ್ರಶಸ್ತಿ ನೀಡುತ್ತಾ ಬಂದಿದೆ. ಶಿವರಾಮಕಾರಂತ, ಪು.ತಿ.ನರಸಿಂಹಚಾರ್, ಜಿ.ಎಸ್.ಶಿವರುದ್ರಪ್ಪ, ಯು.ಆರ್.ಅನಂತಮೂರ್ತಿ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ, ದೇವನೂರು ಮಹಾದೇವರಂತಹ ಮೇರು ಸಾಹಿತಿಗಳಿಗೆ, ಗಂಗೂಬಾಯಿ ಹಾನಗಲ್, ಪಂಡಿತ ಗಾನಯೋಗಿ ಪುಟ್ಟರಾಜ ಗವಾಯಿ, ಪಂಡಿತ ಭೀಮಸೇನ ಜೋಷಿಯಂತಹ ಗಾನಗಾರುಡಿಗರಿಗೆ, ಎಸ್.ನಿಜಲಿಂಗಪ್ಪ, ಸರೋಜಿನಿ ಮಹಿಷಿಯರಂತಹ ಸಜ್ಜನ ರಾಜಕಾರಣಿಗಳಿಗೆ, ಸಾಲುಮರದ ತಿಮ್ಮಕ್ಕ, ಸುಭದ್ರಮ್ಮ ಮನ್ಸೂರು, ದರೋಜಿ ಈರಮ್ಮ, ಸುಕ್ರಿ ಬೊಮ್ಮಗೌಡ, ಸಾರಾ ಅಬೂಬಕರ್, ಸಿ. ಪಾರ್ವತಮ್ಮ, ಗೀತಾ ನಾಗಭೂಷಣ, ಕಮಲಾ ಹಂಪನಾ, ಸಿರಿಯಜ್ಜಿ, ವೆಂಕಟಲಕ್ಷ್ಮಮ್ಮ, ಹರಿಜನ ಪದ್ಮಮ್ಮ, ಬಿ.ಕೆ.ಸುಮಿತ್ರರಂತಹ ಮಹಿಳಾಮಣಿಗಳಿಗೆ, ಡಾ.ಯು.ಆರ್.ರಾವ್, ಡಾ.ಸಿ.ಎನ್.ಆರ್.ರಾವ್‌ರಂತಹ ಜಾಗತಿಕ ವಿಜ್ಞಾನಿಗಳಿಗೆ; ಎಸ್.ಆರ್. ನಾಯಕ್, ವಿ.ಎಸ್.ಮಳೀಮಠ, ಕೋ.ಚೆನ್ನಬಸಪ್ಪ, ಸಂತೋಷ ಹೆಗಡೆಯವರಂತಹ ನ್ಯಾಯಮೂರ್ತಿಗಳಿಗೆ, ಕಲಾರಾಧಕರಾದ ಡಾ.ರಾಜ್‌ಕುಮಾರ್ ಅವರಿಗೆ, ಬಹುಮುಖಿಯಾಗಿ ಜನ ಸೇವೆಗೈದ ಎಲ್.ನಾರಾಯಣರೆಡ್ಡಿ, ಡಾ.ವೀರೇಂದ್ರ ಹೆಗ್ಗಡೆ, ಡಾ.ಜಿ.ಶಂಕರ್, ಡಾ.ಬಿ.ಟಿ.ರುದ್ರೇಶ್– ಹೀಗೆ 85ಕ್ಕಿಂತ ಹೆಚ್ಚು ನಾಡ ಕಣ್ಮಣಿಗಳ ಸೇವೆಯನ್ನು ಗುರುತಿಸಿ 'ನಾಡೋಜ' ಗೌರವ ನೀಡಿ ಪುರಸ್ಕರಿಸಿರುವುದು ಕನ್ನಡ ವಿಶ್ವವಿದ್ಯಾಲಯ ಮತ್ತು ಕನ್ನಡಿಗರ ಹೆಮ್ಮೆಯ ವಿಷಯವಾಗಿದೆ.

2020ರ ಸಾಲಿಗೆ ಮೊತ್ತಮೊದಲ ಬಾರಿಗೆ ಗಾಂಧೀವಾದಿಗಳು, ಶಿಕ್ಷಣ ತಜ್ಞರು, ಸಾಮಾಜಿಕ ಸೇವಾಕರ್ತರು ಆದ ಡಾ.ವೂಡೇ ಪಿ. ಕೃಷ್ಣ ಅವರಿಗೆ

ಡಾ. ವೂಡೇ ಪಿ. ಕೃಷ್ಣ ಅವರೊಂದಿಗೆ 'ನಾಡೋಜ' (2020) ಗೌರವ ಪದವಿಯನ್ನು ಸ್ವೀಕರಿಸಿದ ಡಾ. ಹಣಮಂತಪ್ಪ ಗೋವಿಂದಪ್ಪ ದಡ್ಡಿ



ಸಾಮಾಜಿಕ ಸೇವೆಗಾಗಿ
ಡಾ. ವೂಡೇ ಪಿ. ಕೃಷ್ಣ ಅವರಿಗೆ
ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ
ಡಾಕ್ಟರ್ ಆಫ್ ಲೆಟರ್ಸ್
(D. Lit.)–2023 ಗೌರವ ಪದವಿ
ಡಾ. ಲಿಂಗರಾಜು ಗಾಂಧಿ (ಕುಲಪತಿಗಳು)
ಥಾವರ್ ಚಂದ್ ಗೆಹ್ಲೋಟ್(ಗವರ್ನರ್)
ಡಾ. ಸಿ.ಎನ್. ಮಂಜುನಾಥ್
(ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕರು)

ಹಂಪಿಯ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿದೆ. ಇವರು ವೂಡೇ ಮನೆತನದ ಬೆಂಗಳೂರಿನ ಪುರಸಭೆಗೆ ಮೊದಲ ಅಧ್ಯಕ್ಷರಾಗಿದ್ದ ಡಬ್ಲ್ಯೂ.ಎಚ್.ಹನುಮಂತಪ್ಪನವರ ಕುಡಿಯಾದ ಸ್ವಾತಂತ್ರ್ಯ ಹೋರಾಟಗಾರ ಪುಟ್ಟಯ್ಯನವರ ಮಗನಾಗಿದ್ದು, ಪ್ರಸ್ತುತದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಾದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ಎರಡು ದಶಕಗಳಿಂದಲೂ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಲ್ಲಿ ಅಧ್ಯಕ್ಷರಾಗಿ, ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಮುಖ್ಯಸ್ಥರಾಗಿ, ಹಾಗೂ ನಾಡಿನ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ನಿಸ್ಪೃಹ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ❖

ಸಾಧನೆಗೆ ಸಾವಿರ ಮುಖ

ಡಾ. ವೂಡೇ ಪಿ. ಕೃಷ್ಣ ಅವರ ಕಾರ್ಯಕ್ಷೇತ್ರಗಳ ವಿರಾಟ್ ದರ್ಶನ ಇಲ್ಲಿದೆ.

- ಭಾರತ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್‌ನ ಇಂಜಿನಿಯರಿಂಗ್ ಪರಿಷತ್ ಸದಸ್ಯರು.
- ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯಸಚಿವ ದರ್ಜೆಯ ಸದಸ್ಯರು.
- ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು.
- ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು.
- ಭಾರತೀಯ ಸೇವಾದಳ ಕೇಂದ್ರ ಸಮಿತಿಯ ಗೌರವ ಕೋಶಾಧ್ಯಕ್ಷರು.
- ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳು.
- ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರು.
- ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರು.
- ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
- ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯಶಾಖೆ ಕಾರ್ಯನಿರ್ವಾಹಕ ಉಪಾಧ್ಯಕ್ಷರು.

- ಭಾರತೀಯ ಕ್ಷಯರೋಗ ಸಂಸ್ಥೆಯ ಕೇಂದ್ರ ಸಮಿತಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
- ಬೆಂಗಳೂರು ನಗರದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಬೋರ್ಡ್ ಆಫ್ ವಿಸಿಟರ್ಸ್ ಸದಸ್ಯರು.
- ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಪರಿಷತ್ ಸದಸ್ಯರು.
- ರಾಷ್ಟ್ರೀಯ ವಿನ್ಯಾಸ ಮತ್ತು ಸಂಶೋಧನ ಸಂಸ್ಥೆಯ ಬೋರ್ಡ್ ಆಫ್ ಗವರ್ನರ್ಸ್‌ನ ಸದಸ್ಯರು.
- ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ವ್ಯವಸ್ಥಾಪಕ ಮಂಡಳಿ ಸದಸ್ಯರು.
- ಬೆಂಗಳೂರು ಶಾಖೆಯ ವ್ಯಾಲ್ಯುಯರ್ಸ್ ಸಂಸ್ಥೆಯ ಉಪಾಧ್ಯಕ್ಷರು.
- ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರು.
- ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘದ ಬೆಂಗಳೂರು ಘಟಕದ ಅಧ್ಯಕ್ಷರು.
- ಭಾರತೀಯ ವಿಶ್ವಶಾಂತಿ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು.
- ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ದತ್ತಿಯ ವ್ಯವಸ್ಥಾಪಕ ಧರ್ಮದರ್ಶಿಗಳು.
- ಕರ್ನಾಟಕ ಖಾಸಗಿ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಸಂಘದ ಕಾರ್ಯದರ್ಶಿಗಳು.
- ಸದಾಶಿವನಗರ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿನ ಅಧ್ಯಕ್ಷರು.
- ಅಪ್ಪಾವು ಪಿಳ್ಳೈ ಶಿಕ್ಷಣ ಸಂಸ್ಥೆಗಳ ಧರ್ಮದರ್ಶಿ.
- ಬೆಂಗಳೂರಿನ ಏಟ್ರಿಯಾ ಇಂಜಿನಿಯರಿಂಗ್ ಕಾಲೇಜಿನ ಶೈಕ್ಷಣಿಕ ಹಾಗೂ ಅಭಿವೃದ್ಧಿ ಸಮಿತಿ ಸದಸ್ಯರು.
- ಸೈಂಟ್ ಜಾನ್ ಆಂಬುಲನ್ಸ್ ಸಂಘದ ಕರ್ನಾಟಕ ರಾಜ್ಯ ಶಾಖೆಯ ಕಾರ್ಯಕಾರಿಣಿ ಸದಸ್ಯರು.
- ಕರ್ನಾಟಕ ಸರ್ವೋದಯ ಮಂಡಲದ ಕಾರ್ಯಕಾರಿ ಮಂಡಳಿ ಸದಸ್ಯರು.
- ಶ್ರೀನಿವಾಸ ಮಂದಿರಂ ಧರ್ಮಸಂಸ್ಥೆಗೆ ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ ಧರ್ಮದರ್ಶಿಗಳು.
- ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ ರವರು ಸ್ಥಾಪಿಸಿದ ಬ್ರಹ್ಮಮಂದಿರ ದತ್ತಿಯ ಧರ್ಮದರ್ಶಿಗಳು.

- ವೂಡೇ ಪ್ರತಿಷ್ಠಾನದ ಸ್ಥಾಪಕ ಧರ್ಮದರ್ಶಿಗಳು.
- ಕರ್ನಾಟಕ ಸರ್ಕಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯಾದಾದ್ಯಂತ ಏರ್ಪಡಿಸಿದ್ದ 'ಯುವಜಾಗೃತಿ' ಕಾರ್ಯಕ್ರಮಗಳ ಸಂಘಟನಾ ಸಮಿತಿಯ ಸದಸ್ಯರು.
- ಪಟೇಲ್ ಪ್ರತಿಷ್ಠಾನದ ಗೌರವ ಅಧ್ಯಕ್ಷರು.
- ರಾಜಾ ರಾಮ್‌ಮೋಹನ್ ರಾಯ್ ಸ್ಥಾಪಿತ ಬ್ರಹ್ಮೋಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರು.
- ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು.
- ಇಂಡಿಯನ್ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರು.

ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಸಮಾಜದ ದುರ್ಬಲರ ಸೇವೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಘ-ಸಂಸ್ಥೆಗಳಲ್ಲಿ ಉನ್ನತ ಮಟ್ಟದ ನಾಯಕರು ಹಗಲಿರುಳು ಶ್ರಮಿಸಿದ್ದಾರೆ. ಅವರುಗಳ ಹಾದಿಯಲ್ಲಿಯೇ ಸಂಘ-ಸಂಸ್ಥೆಗಳ ಪುರೋಭಿವೃದ್ಧಿಗಾಗಿಯೇ ಕಂಕಣತೊಟ್ಟು ಸಮಾಜದ ಸೇವೆಗಾಗಿ, ದೇಶದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟುಕೊಂಡಿರುವ ಕೃಷ್ಣರವರು ಹಲವು ಮಹನೀಯರ ಪ್ರಭಾವ ಮತ್ತು ಮಾರ್ಗದರ್ಶನದಂತೆ ಸಂಘ-ಸಂಸ್ಥೆಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ, ಯುವಪೀಳಿಗೆಯ ಭವಿಷ್ಯದ ಬಗೆಗಿನ ಉತ್ತಮ ಆಶಯ, ಮಾನವೀಯ ಮೌಲ್ಯಗಳ ತುಡಿತ, ನಾಯಕತ್ವದ ಗುಣವಿರುವ ಕೃಷ್ಣರವರು ಆಡಳಿತಾತ್ಮಕವಾಗಿ ಉನ್ನತ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ಅವರ ಸೇವೆ 'ಆಡು ಮುಟ್ಟದ ಸೊಪ್ಪಿಲ್ಲ, ಕೃಷ್ಣರವರು ಮಾಡದ ಕಾರ್ಯವೇ ಇಲ್ಲ' ಎಂಬಂತೆ ಬಹುಮುಖಿ ಸ್ಥಾನಗಳನ್ನು ಹೊಂದಿ ನಿಸ್ವಾರ್ಥ ಸೇವೆ ರೀತಿಯಲ್ಲಿ ಸಲ್ಲಿಸುತ್ತಿದ್ದಾರೆ. ಹೀಗೆ ಇನ್ನೂ ದಾಖಲಿಸುತ್ತಾ ಹೋದರೆ ಬಹುಶಃ ಅವುಗಳು ಮುಗಿಯುವುದಿಲ್ಲವೇನೋ ......

ಇಲ್ಲಿ ಸೂಚಿಸಿರುವ ಸಂಘ-ಸಂಸ್ಥೆಗಳಲ್ಲಿ ಸೇವೆ ಮಾಡಲು ಹಲವು ಮಹನೀಯರು ಕೃಷ್ಣರವರ ಕಾರ್ಯತತ್ಪರತೆಯನ್ನು ಮೆಚ್ಚಿ ತೊಡಗಿಸಿ ಕೊಳ್ಳುವಂತೆ ಮಾಡಿದ್ದಾರೆ. ಅವರುಗಳು ವಹಿಸಿದ ಜವಾಬ್ದಾರಿಗಳನ್ನು ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ರಾಷ್ಟ್ರನಾಯಕರ ಆದರ್ಶಗಳೊಂದಿಗೆ ಸಂಸ್ಥೆಗಳನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಆಡಳಿತಾತ್ಮಕವಾಗಿ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ಜೀವಮಾನದ ಘಟನಾವಳಿ

1963 : ಫೆಬ್ರವರಿ 1 ರಂದು ಜನನ, ಬೆಂಗಳೂರು.

1970 : ಬೆಂಗಳೂರು ಸದಾಶಿವನಗರ ಪೂರ್ಣಪ್ರಜ್ಞ ಶಾಲೆ ಪ್ರವೇಶ.

1975 : ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಪ್ರವೇಶ.

1981 : ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಕನ್ನಡ ಸಂಘದ ಸ್ಥಾಪನೆ, ಅಧ್ಯಕ್ಷರಾಗಿ ಆಯ್ಕೆ.

1982 : ಗೋಕಾಕ್ ಚಳವಳಿಯಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ನಾಯಕತ್ವ.

1984 : ರೆಡ್‌ಕ್ರಾಸ್ ಸದಸ್ಯರಾಗಿ ದಾಖಲು.

: ಬೆಂಗಳೂರು ಯೂತ್ ಹಾಸ್ಟೆಲ್ ಗೌರವ ಕೋಶಾಧಿಕಾರಿಯಾಗಿ ಆಯ್ಕೆ.

1986 : ಬಿ.ಇ. ಪದವಿ.

: ನೆಹರೂನಗರ ಸಹಕಾರಿ ಬ್ಯಾಂಕ್‌ನ ಗೌರವ ವ್ಯವಸ್ಥಾಪಕ ನಿರ್ದೇಶಕರಾಗಿ ಆಯ್ಕೆ.

1987 : ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರ್ಪಡೆ.

1988 : ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ.

: 'ಬ್ರಹ್ಮವಾಣಿ' ಮಾಸಪತ್ರಿಕೆ ಸಂಪಾದಕರಾಗಿ ಸೇವೆ.

1989 : ಡಬ್ಲ್ಯೂ. ಪಿ. ಕೃಷ್ಣ ಅಸೋಸಿಯೇಟ್ಸ್ ಮೂಲಕ ಸ್ವತಂತ್ರ ವೃತ್ತಿಜೀವನ ಪ್ರಾರಂಭ.

1990 : ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.

1991 : ಎಲ್‌ಎಲ್.ಬಿ. ಕಾನೂನು ಪದವಿ.

: ಶ್ರೀಮತಿ ಸವಿತಾರೊಂದಿಗೆ ವಿವಾಹ.

1992 : ಕರ್ನಾಟಕ ಸರ್ಕಾರದಿಂದ ಸಮುದಾಯ ಸೇವೆಗಾಗಿ ರಾಜ್ಯ ಯುವ ಪ್ರಶಸ್ತಿ.

: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಜೀವ ಧರ್ಮದರ್ಶಿಯಾಗಿ ಸೇರ್ಪಡೆ.

1994 : ಕೈಗಾರಿಕಾ ಇಂಜಿನಿಯರಿಂಗ್ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ.

1995 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಸಹಕಾರ್ಯ ದರ್ಶಿಯಾಗಿ ಅವಿರೋಧ ಆಯ್ಕೆ.

1997 : ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಸದಸ್ಯತ್ವ.

1999 : ಭಾರತ ಸರ್ಕಾರದ ಅನುಮೋದಿತ ಮೌಲ್ಯಮಾಪಕರಾಗಿ ನೋಂದಣಿ.

2000 : ಭಾರತ–ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾರತ ನಿಯೋಗದ ಮುಖಂಡರಾಗಿ ಶ್ರೀಲಂಕಾ ಭೇಟಿ.

2001 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ.

: ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಕಾರಿಣಿ ಸದಸ್ಯತ್ವಕ್ಕೆ ಆಯ್ಕೆ.

2002 : ಭಾರತ ಸೇವಾದಲ ಕೇಂದ್ರ ಸಮಿತಿ ಸದಸ್ಯರಾಗಿ ನೇಮಕ.

: ಬೆಂಗಳೂರು ಮಹಾನಗರ ಪಾಲಿಕೆಯಿಂದ ಶೈಕ್ಷಣಿಕ ಸೇವೆಗಾಗಿ ಕೆಂಪೇಗೌಡ ಪ್ರಶಸ್ತಿ.

2003 : ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಸ್ಥಾಪನೆ, ಕಾರ್ಯದರ್ಶಿಯಾಗಿ ಸೇವೆ.

: ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಗೌರವ ಕೋಶಾಧ್ಯಕ್ಷರಾಗಿ ಅವಿರೋಧ ಆಯ್ಕೆ.

2004 : ಕರ್ನಾಟಕ ಸರ್ಕಾರದಿಂದ ಸಮಾಜ ಸೇವೆಗಾಗಿ ಕನ್ನಡ ರಾಜ್ಯೋತ್ಸವದಂದು ರಾಜ್ಯ ಪ್ರಶಸ್ತಿ.

: ಮೈಸೂರು ಸ್ಟೋನ್‌ವೇರ್ ಪೈಪ್ಸ್ ಅಂಡ್ ಪಾಟರೀಸ್ ಲಿಮಿಟೆಡ್‌ನ ನಿರ್ದೇಶಕರಾಗಿ ನೇಮಕ.

: ಪುಣೆ ನಗರದಲ್ಲಿ ನಡೆದ 114ನೇ ವಾರ್ಷಿಕ ಅಖಿಲ ಭಾರತ ಬ್ರಹ್ಮೋಸಮಾಜ ಸಮ್ಮೇಳನದ ಅಧ್ಯಕ್ಷ ಗೌರವ.

2005 : ರಾಜ್ಯಪಾಲರಿಂದ ರೆಡ್‌ಕ್ರಾಸ್ ಸೇವಾ ಪ್ರಶಸ್ತಿ.

: ಸಮಾಜ ಸೇವೆಗಾಗಿ ಡಿ.ವಿ.ಜಿ. ಪುರಸ್ಕಾರ.

2006 : ನಿರ್ವಹಣಾ ಶಾಸ್ತ್ರದಲ್ಲಿ ಪಿಎಚ್.ಡಿ ಪದವಿ.

: ಭಾರತೀಯ ನಿಯೋಗದ ಸದಸ್ಯರಾಗಿ ಸೌಹಾರ್ದಯುತ ಚೀನಾ ಪ್ರವಾಸ.

: ಹೈದರಾಬಾದಿನಲ್ಲಿ ನಡೆದ 116ನೇ ವಾರ್ಷಿಕ ಅಖಿಲ ಭಾರತ ಬ್ರಹ್ಮಸಮಾಜ ಸಮ್ಮೇಳನದ ಅಧ್ಯಕ್ಷ ಗೌರವ.

: ರೆಡ್‌ಕ್ರಾಸ್ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆ.

2007 : ನ್ಯೂಜಿಲ್ಯಾಂಡಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಎರಡನೇ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ

: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ.

2008 : ಕರ್ನಾಟಕ ಸರ್ಕಾರದಿಂದ 'ವಿಕಲಚೇತನರ ಸಬಲೀಕರಣ ರಾಜ್ಯ ಪ್ರಶಸ್ತಿ'.

: ಭಾರತೀಯ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಪರಿಷತ್ತಿಗೆ ಆಯ್ಕೆ.

: ನ್ಯೂಯಾರ್ಕ್ ನಗರದ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಪುರಸ್ಕಾರ.

: ಕತಾರ್‌ನಲ್ಲಿ ನಡೆದ 5ನೇ ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಸನ್ಮಾನ.

2009 : ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯಸಚಿವ ದರ್ಜೆಯ ಸದಸ್ಯರಾಗಿ ನೇಮಕ.

: ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಆಡಳಿತ ಮಂಡಲಿ ಸದಸ್ಯತ್ವ.

: ಗಾಂಧೀ ಶಾಂತಿ ಪ್ರತಿಷ್ಠಾನ ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆ ಕೇಂದ್ರ ಸಮಿತಿ ಸದಸ್ಯರಾಗಿ ನೇಮಕ.

2010 : ನಾಸಿಕ್‌ನಲ್ಲಿ ನಡೆದ 28ನೇ ಮೆಕಾನಿಕಲ್ ಇಂಜಿನಿಯರುಗಳ ರಾಷ್ಟ್ರೀಯ ಅಧಿವೇಶನದ ಅಧ್ಯಕ್ಷತೆ.

: ಕೇರಳದ ಡಿ. ಸಿ. ನಿರ್ವಹಣಾ ಶಾಲೆಯ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ.

: ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ ಆಹ್ವಾನದ ಮೇರೆಗೆ

ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಭಾಗಿ.

: ಭಾರತೀಯ ಆರ್ಬಿಟ್ರೇಶನ್ ಪರಿಷತ್ತಿನ ಫೆಲೊ ಆಗಿ ಆಯ್ಕೆ.

2011 : ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ.

: ಕಾನೂನು ಸ್ನಾತಕೋತ್ತರ ಪದವಿ.

: ಬೆಂಗಳೂರಿನಲ್ಲಿ ನಡೆದ ಪ್ರತಿಷ್ಠಿತ 26ನೇ ಭಾರತೀಯ ಇಂಜಿನಿಯರಿಂಗ್ ಕಾಂಗ್ರೆಸ್‌ನ ಸಂಚಾಲಕತ್ವ.

: ಮಲೇಷ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಮೂರನೇ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ.

: ಕರ್ನಾಟಕ ಸರ್ಕಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯಾದಾದ್ಯಂತ ಏರ್ಪಡಿಸಿದ್ದ 'ಯುವಜಾಗೃತಿ' ಕಾರ್ಯಕ್ರಮಗಳ ಸಂಘಟನಾ ಸಮಿತಿಗೆ ಸದಸ್ಯರಾಗಿ ನೇಮಕ.

2012 : ಆಚಾರ್ಯವಿನೋಬಾ ಸ್ಥಾಪಿತ ವಿಶ್ವನೀಡಂ ಟ್ರಸ್ಟ್‌ನ ವ್ಯವಸ್ಥಾಪಕ ಧರ್ಮದರ್ಶಿಯಾಗಿ ನೇಮಕ.

: ಇಂಗ್ಲೆಂಡಿನ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಸಂಸ್ಥೆಯ ಪ್ರತಿಷ್ಠಿತ ಫೆಲೊ ಗೌರವ.

: ಭಾರತೀಯ ಇಂಜಿನಿಯರುಗಳ ಸಂಸ್ಥೆ ಕರ್ನಾಟಕ ರಾಜ್ಯ ಕೇಂದ್ರ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ರೆಡ್‌ಕ್ರಾಸ್ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ರಾಷ್ಟ್ರಪ್ರಶಸ್ತಿಯಾದ ರಾಷ್ಟ್ರಪತಿಗಳ ಚಿನ್ನದ ಪದಕ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ಸ್ವೀಕಾರ.

: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷರಾಗಿ ನೇಮಕ.

: ರೋಟರಿ ಸಂಸ್ಥೆಯ ಗೌರವ ಸದಸ್ಯತ್ವ ಹಾಗೂ ಪಾಲ್ ಹ್ಯಾರಿಸ್ ಫೆಲೊ ಗೌರವ.

: 'ಸರ್.ಎಂ. ವಿಶ್ವೇಶ್ವರಯ್ಯ: ಜೀವನ ಸಾಧನೆ' ಪುಸ್ತಕ ಪ್ರಕಟಣೆ.

: ಎಸ್.ವ್ಯಾಸ ವಿಶ್ವವಿದ್ಯಾಲಯದ ದಶಮಾನೋತ್ಸವದಲ್ಲಿ ಸನ್ಮಾನ.

2013 : 50ನೇ ವರ್ಷದ ಹುಟ್ಟು ಹಬ್ಬ.

: ಶ್ರೀರಾಮಕೃಷ್ಣ ವಿದ್ಯಾಶಾಲಾ ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ.

: ರಾಯದುರ್ಗದಲ್ಲಿ ನಡೆದ 4ನೇ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

2014 : ಮಡಿಕೇರಿಯಲ್ಲಿ ನಡೆದ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

: ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ ಉಪಾಧ್ಯಕ್ಷರಾಗಿ ಆಯ್ಕೆ.

2015 : ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಭಾರತ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಸಂಸ್ಥೆಯ ಇಂಜಿನಿಯರಿಂಗ್ ಪರಿಷತ್ತಿನ ಸದಸ್ಯತ್ವ.

: ಭಾರತ–ರಷ್ಯಾ ತಾಂತ್ರಿಕ ವಿನಿಮಯ ನಿಯೋಗದ ಸದಸ್ಯರಾಗಿ ರಷ್ಯಾ ಪ್ರವಾಸ.

: 'ನದಿಯಂತೆ ನೆನಪು', 'ಬೆಳ್ಳಕ್ಕಿ ಸಾಲು' ಹಾಗೂ 'Beyond the Boundaries' ಕೃತಿಗಳ ಪ್ರಕಟಣೆ.

: 'ಕೃಷ್ಣಸಿರಿ' ಐವತ್ತರ ಅಭಿನಂದನಾ ಗ್ರಂಥ ಸಮರ್ಪಣೆ.

: ಸಿಂಗಪುರದಲ್ಲಿ ನಡೆದ ವಿಶ್ವ ಇಂಜಿನಿಯರುಗಳ ಶೃಂಗಸಭೆಯಲ್ಲಿ ಭಾರತದ ಪ್ರತಿನಿಧಿ.

: ಕರ್ನಾಟಕ ರಾಜಭವನದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರೊಂದಿಗೆ ಸೌಹಾರ್ದಯುತ ಭೇಟಿ.

: ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ 2015ರ ಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ.

: ಬ್ರಿಕ್ಸ್ ಇಂಜಿನಿಯರಿಂಗ್ ಸಂಸ್ಥೆಗಳ ಫೆಡರೇಷನ್ನಿನ ಆಡಳಿತ ಮಂಡಳಿ ಸದಸ್ಯತ್ವ

2016 : ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಪ್ರತಿಷ್ಠಿತ ಫೆಲೊ ಗೌರವ.

: ರಾಜಾ ರಾಮ್‌ಮೋಹನ್ ರಾಯ್ ಸ್ಥಾಪಿತ ಬ್ರಹ್ಮೋಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿ ನೇಮಕ.

: ಕರ್ನಾಟಕ ರಾಜ್ಯದ ಎಲ್ಲ 30 ಜಿಲ್ಲೆಗಳಲ್ಲಿ ಗಾಂಧೀ ಭವನ ನಿರ್ಮಾಣ ಯೋಜನೆಯಡಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತ ಸಮಿತಿ ಸದಸ್ಯರಾಗಿ ಕರ್ನಾಟಕ ಸರ್ಕಾರದಿಂದ ನೇಮಕ.

: ವಿಶ್ವ ಇಂಜಿನಿಯರುಗಳ ಅಕಾಡೆಮಿಯ ಫೆಲೊ ಗೌರವ.

2017 : ಗಾಂಧೀವಾದಿ ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ, ಮಂಡ್ಯ.

: 'ದಿ ಹಿಂದೂ'ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ 'ಡಾಯನ್ಸ್' ಪ್ರಶಸ್ತಿ.

: ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

: ಪಟೇಲ್ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ನೇಮಕ.

: ಭಾರತೀಯ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರಾಗಿ ನೇಮಕ.

: ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ.

: ಬ್ರಿಕ್ಸ್ ಇಂಜಿನಿಯರಿಂಗ ಸಂಸ್ಥೆಗಳ ಫೆಡರೇಷನ್ನಿನ ತಾಂತ್ರಿಕ ನಿಯೋಗದ ಸದಸ್ಯರಾಗಿ ಜರ್ಮನಿ, ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳ ಪ್ರವಾಸ.

: ಬೆಂಗಳೂರು ಗಾಂಧೀನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

2018 : ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿಗೆ ಪುನರಾಯ್ಕೆ.

: ಬೆಂಗಳೂರು ನಗರ ಜಿಲ್ಲಾ ಸಂಸ್ಕೃತ ಸಮ್ಮೇಳನ ಅಧ್ಯಕ್ಷೀಯ ಗೌರವ.

: ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಗೌರವ.

: ಕರ್ನಾಟಕ ಸರ್ಕಾರದಿಂದ ರಾಜ್ಯ ಎನ್.ಎಸ್.ಎಸ್.(ರಾಷ್ಟ್ರೀಯ ಸೇವಾ ಯೋಜನೆ) ಸಲಹಾ ಸಮಿತಿ ಸದಸ್ಯರಾಗಿ ನೇಮಕ.

: ಪತ್ರಕರ್ತರು, ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯನವರು ತಮ್ಮ ಕಾದಂಬರಿ 'ಜೀವಜಲ' ಕೃತಿಯನ್ನು ಡಾ.ವೂಡೇ ಪಿ. ಕೃಷ್ಣ ಅವರಿಗೆ ಅರ್ಪಿಸಿದ್ದಾರೆ.

: ಗಾಂಧಿ ಶಾಂತಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಗೆ ಕರ್ನಾಟಕ ಸರ್ಕಾರದಿಂದ ನೇಮಕ.

: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಪುನರಾಯ್ಕೆ.

: ಬೆಂಗಳೂರಿನ ನ್ಯೂ ಹೊರೈಜನ್ ಇಂಜಿನಿಯರಿಂಗ್ (ಸ್ವಾಯುತ್ತ ಸಂಸ್ಥೆ) ಕಾಲೇಜಿನ 'ಎಮೆರಿಟಸ್ ಪ್ರೊಫೆಸರ್' ಗೌರವ.

2019 : ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ ಕಾರ್ಯಕಾರಿಣಿಗೆ ನೇಮಕ

: ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸಾಮಾಜಿಕ ಸೇವೆಗಾಗಿ ಗೌರವ ಪುರಸ್ಕಾರ.

: ಬೆಂಗಳೂರಿನ ಮಲ್ಲೇಶ್ವರದ ಹೆಸರಾಂತ ಗಾಂಧಿ ಸಾಹಿತ್ಯ ಸಂಘದ ವಜ್ರಮಹೋತ್ಸವ ಗೌರವ.

: ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ವತಿಯಿಂದ ಡಾ.ವೂಡೇ ಪಿ. ಕೃಷ್ಣ ಕುರಿತಾದ ವ್ಯಕ್ತಿಚಿತ್ರದ ಸಾಕ್ಷ್ಯಚಿತ್ರ ತಯಾರಿಕೆ.

2020 : ಸಮಾಜ ಸೇವೆಗಾಗಿ ಮಂಡ್ಯದ ಡಾ.ಜಿ.ಮಾದೇಗೌಡ ಪ್ರತಿಷ್ಠಾನ ಪ್ರಶಸ್ತಿ ಗೌರವ.

: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಸುಸ್ಥಿರ ಅಭಿವೃದ್ಧಿ ಕೇಂದ್ರದ ಸಲಹಾ ಸಮಿತಿ ಸದಸ್ಯತ್ವ.

: ಶಿಕ್ಷಣ ಕ್ಷೇತ್ರದ ಅನುಪಮ ಸೇವಾಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. ಗೆ ತತ್ಸಮಾನವಾದ ಪ್ರತಿಷ್ಠಿತ ನಾಡೋಜ ಗೌರವ ಪದವಿ.

: ಬೆಂಗಳೂರಿನ ಪ್ರತಿಷ್ಠಿತ ಸಮಾಜ ಸೇವಾ ಸಂಸ್ಥೆ ಉದಯಭಾನು ಕಲಾ ಸಂಘದ ಅತ್ಯುನ್ನತ ಗೌರವವಾದ ಆಜೀವ ಗೌರವ ಸದಸ್ಯತ್ವ.

: ದಿ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಸಂಸ್ಥೆಯಿಂದ ಶತಮಾನೋತ್ಸವ ಸಂದರ್ಭದಲ್ಲಿ ನೀಡಿದ 'ಸ್ಕ್ರಾಲ್ ಆಫ್ ಹಾನರ್' (Scroll of Honour) ಗೌರವ.

2021 : ಕಸ್ತೂರ್‌ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಕರ್ನಾಟಕ ರಾಜ್ಯ ಮಟ್ಟದ ಸಲಹಾ ಸಮಿತಿ ಸದಸ್ಯರಾಗಿ ನೇಮಕ.

: ಬೆಂಗಳೂರಿನ ನಾಗಾರ್ಜುನ ಇಂಜಿನಿಯರಿಂಗ್ ಕಾಲೇಜು (ಅಟಾನಮಸ್) ಇದರ ರಾಷ್ಟ್ರೀಯ ಸಲಹಾ ಸಮಿತಿ ಸದಸ್ಯರಾಗಿ ನೇಮಕ.

: ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಶುಲ್ಕ ನಿಗದಿ ಸಮಿತಿ ಸದಸ್ಯರಾಗಿ ಕರ್ನಾಟಕ ಸರ್ಕಾದಿಂದ ನೇಮಕ.

: ಕವಿ ಡಾ. ಸತ್ಯಮಂಗಲ ಮಹಾದೇವ ತಮ್ಮ 'ರೆಕ್ಕೆಗಳೊಡೆದಾವೋ ಮುಗಿಲಿಗೆ' ಕೃತಿಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಣೆ.

: ಬೆಂಗಳೂರು ನಗರ ಜಿಲ್ಲಾ ವೇಟ್‌ಲಿಫ್ಟಿಂಗ್ ಸಂಸ್ಥೆ ಅಧ್ಯಕ್ಷರಾಗಿ ಆಯ್ಕೆ.

: ಆದಿಚುಂದನಗಿರಿ ವಿಶ್ವವಿದ್ಯಾಲಯದ ಯೋಜನಾ, ನಿಯಂತ್ರಣ ಮತ್ತು ಮೌಲ್ಯಮಾಪನಾ ಮಂಡಳಿ ಸದಸ್ಯರಾಗಿ ನೇಮಕ.

: ವೈ. ಜಯಚಂದ್ರಶೇಖರ್‌ರವರು ತಮ್ಮ 'ಬೇರು ಬೆಳಕು' ಚೊಚ್ಚಲ ಕೃತಿಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಣೆ.

: ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಹಣಕಾಸು ಸಮಿತಿ ಅಧ್ಯಕ್ಷರಾಗಿ ನೇಮಕ.

: ನಾಡೋಜ ಡಾ. ಗೊ.ರು. ಚ. ಸ್ಥಾಪಿತ ಗ್ರಾಮಭಾರತ ಪ್ರತಿಷ್ಠಾನದ ಸಲಹಾ ಸಮಿತಿ ಸದಸ್ಯರಾಗಿ ನೇಮಕ.

: ಕೋಲ್ಕತ್ತಾದ ಭಾರತೀಯ ಇಂಜಿನಿಯರುಗಳ ಸಂಸ್ಥೆ ಚುನಾವಣಾ ಕುಂದುಕೊರತೆಗಳ ಸಮಿತಿ ಸದಸ್ಯರಾಗಿ ನೇಮಕ.

: ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ವತಿಯಿಂದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಗಾಗಿ 'ಕಾಯಕಯೋಗಿ ಡಾ. ಶಿವಕುಮಾರ ಸ್ವಾಮೀಜಿ ಪ್ರಶಸ್ತಿ.'

2022 : ಕವಿ ಸಿದ್ದೇಶ್ ದುಗ್ಗೇನಹಳ್ಳಿ ತಮ್ಮ 'ದೇಸಿ ಕಥನಗಳು' ಕೃತಿಯ ಅರ್ಪಣೆ.

: ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ವತಿಯಿಂದ ಪ್ರತಿಷ್ಠಿತ 2022 ಸಾಲಿನ 'ವರ್ಷದ ಶಿಕ್ಷಣ ತಜ್ಞ ಪ್ರಶಸ್ತಿ.'

: ಖ್ಯಾತ ಸಾಹಿತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ ಅವರ 'ತತ್ತ್ವ ಕಥನ' ಕೃತಿಯ ಅರ್ಪಣೆ.

: ಕರ್ನಾಟಕ ರಾಜ್ಯ ಸಂಯಮ ಮಂಡಳಿ ವತಿಯಿಂದ ಕೊಡಮಾಡುವ ರಾಜ್ಯ ಸಂಯಮ ಪ್ರಶಸ್ತಿಯ ಆಯ್ಕೆ ಸಮಿತಿ ಅಧ್ಯಕ್ಷರಾಗಿ ನೇಮಕ.

: ಭಾರತೀಯ ಇಂಜಿನಿಯರುಗಳ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ರಚಿಸಿದ ಕೈಗಾರಿಕಾ ಅಭಿವೃದ್ಧಿ ತಜ್ಞರ ಸಮಿತಿಗೆ ನೇಮಕ.

: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಲಕ್ಕೂರು ಆನಂದರವರ ಅನುವಾದಿತ 'ಮುತ್ತು' ಕೃತಿಯ ಅರ್ಪಣೆ.

: ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯಿಂದ 2022ನೇ ಸಾಲಿನ ಪ್ರತಿಷ್ಠಿತ 'ಡಾ. ಎಂ.ಸಿ. ಮೋದಿ ಮಾನವೀಯ ಪ್ರಶಸ್ತಿ'.

: ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ 'ಶ್ರೇಷ್ಠ ಮೆಕಾನಿಕಲ್ ಇಂಜಿನಿಯರ್ ರಾಷ್ಟ್ರ ಪ್ರಶಸ್ತಿ.'

: ಯಶೋಧರಮ್ಮ ದಾಸಪ್ಪ ಸ್ಥಾಪಿತ ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ವತಿಯಿಂದ 'ಸೇವಾ ಪ್ರಶಸ್ತಿ'.

: ಜೀವಮಾನ ಸಾಧನೆಗಾಗಿ ವ್ಯಾಲ್ಯುವರ್ಸ್ ಸಂಸ್ಥೆಯಿಂದ 2022ನೇ ಸಾಲಿನ 'ಶ್ರೇಷ್ಠ ವ್ಯಾಲ್ಯುವರ್ ಪ್ರಶಸ್ತಿ'.

: ಪದ್ಮಶ್ರೀ ಪುರಸ್ಕೃತ ಕವಿ ಡಾ. ದೊಡ್ಡರಂಗೇಗೌಡರ ಕನ್ನಡದಿಂದ ಅನುವಾದಿಸಿದ 'Middleman' ಇಂಗ್ಲಿಷ್ ಕೃತಿಯ ಅರ್ಪಣೆ.

2023 : ಸಾಮಾಜಿಕ ಸೇವೆಗಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಲೆಟರ್ಸ್ (D. Lit.) ಗೌರವ ಪದವಿ.

❖

ಗಣ್ಯರ ಕಣ್ಣಲ್ಲಿ ಕೃಷ್ಣ

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಿಂದ ಬಂದ ಶ್ರೀಯುತರ ರಕ್ತದಲ್ಲಿ ರಾಷ್ಟ್ರಭಕ್ತಿ, ಸಾಮಾಜಿಕ ಬದ್ಧತೆ, ಪರೋಪಕಾರ ಇವೇ ಮೊದಲಾದವು ಮೈದಾಳಿವೆ. ರಾಷ್ಟ್ರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಇವರ ಸೇವೆ, ಸುಧಾರಣೆಗಳು ಅದ್ವಿತೀಯ. ಕೃಷ್ಣರವರು ನಕಾರಾತ್ಮಕ ಅಭಿಪ್ರಾಯಗಳಿಗೆ ಅಂಜದೆ, ಸಕಾರಾತ್ಮಕ ಚಿಂತನೆಗಳಿಂದ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

– ಡಾ. ಸ್ವಾಮಿ ವೀರೇಶಾನಂದ ಸರಸ್ವತಿ

* * *

ಡಬ್ಲ್ಯೂ.ಪಿ.ಕೆ. ಅಪರೂಪದ ವ್ಯಕ್ತಿಯಾಗಿ ಕಂಗೊಳಿಸುತ್ತಾ ಇದ್ದಾರೆ. ಇವರ ಮಾರ್ಗದರ್ಶದಿಂದ ಎಲ್ಲ ಕ್ಷೇತ್ರಗಳಲ್ಲೂ ಒಳ್ಳೆಯ ಕಾರ್ಯ ಸುಗಮವಾಗಿ ಸಾಗುತ್ತಾ ಅಭಿವೃದ್ಧಿ ಹೊಂದುತ್ತಿದೆ.

– ಸ್ವಾಮಿ ಜಗದಾತ್ಮಾನಂದ

* * *

ರಾಷ್ಟ್ರಪತಿಗಳಿಂದ ಚಿನ್ನದ ಪದಕ, ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಯಿಂದ ಹಿಡಿದು ಹತ್ತಾರು ಪ್ರತಿಷ್ಠಿತ ಗೌರವ, ಅಭಿಮಾನ, ಸನ್ಮಾನ. ಈ ಎಲ್ಲಾ ಕೀರ್ತಿ ತೆಗೆದುಕೊಂಡಿದ್ದು ವೂಡೇ ಪಿ. ಕೃಷ್ಣ ವ್ಯಕ್ತಿಯಾದರೆ, ಹಂಚಿದ್ದು ಮಾತ್ರ ಇಡೀ ರಾಜ್ಯಕ್ಕೆ, ರಾಷ್ಟ್ರಕ್ಕೆ.

– ಡಾ. ಪಿ. ಸೋಮಶೇಖರ್

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ಗುಣಾತ್ಮಕತೆ, ಬೃಹತ್ತತೆ ಎರಡನ್ನೂ ಸಾಧಿಸಿವೆ. ಇದಕ್ಕೆ ನೇರವಾದ ಕಾರಣ ಕೃಷ್ಣರವರ ಅದ್ಭುತ ಕಾರ್ಯದಕ್ಷತೆ. ಎಲ್ಲಕ್ಕೂ ಕಳಸವಿಟ್ಟಂತಿರುವುದು ಇವರ ನಮ್ರತೆ, ಸೌಜನ್ಯ, ವಿನಯ.

– ಸ್ವಾಮಿ ನಿರ್ಭಯಾನಂದ

* * *

ಇವರು ಸರಳರು, ಬಟ್ಟೆ, ಮಾತು ಎಲ್ಲವೂ ಸರಳವೇ. ಭಾರತೀಯ ಇಂಜಿನಿಯರಿಂಗ್ ಕಾಂಗ್ರೆಸ್ ನಡೆಯುವಾಗ ಏಕೆ ಸೂಟಿನಲ್ಲಿ ಬರಲಿಲ್ಲ ಎಂದೆ. ಅದಕ್ಕೆ ಇವರು ಬಟ್ಟೆಯಿಂದ ಇಂಜಿನಿಯರ್ ಆಗುವುದಿಲ್ಲ ಎಂದರು. ಇದು ಇವರ ಕಾರ್ಯದಕ್ಷತೆ, ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಕೃಷ್ಣ ಅತ್ಯಂತ ಪ್ರಾಜ್ಞರು, ದಕ್ಷ ಆಡಳಿತಗಾರರು, ಯುವಜನರ ಆಶಾಕಿರಣ ಹಾಗೂ ಸಂಭಾವಿತರಲ್ಲಿ ಅತ್ಯಂತ ಸಂಭಾವಿತರು.

– ಡಾ. ಹೊ. ಶ್ರೀನಿವಾಸಯ್ಯ

* * *

ಕೃಷ್ಣರವರೇ ಬಂದು 'ನನ್ನ ಆತ್ಮಕಥೆ' ಪುಸ್ತಕಗಳನ್ನು ತಾವೇ ಎತ್ತಿಕೊಂಡು ಹೋಗಿ ಗಾಡಿಯಲ್ಲಿ ಇಟ್ಟರು. ಇಷ್ಟು ದೊಡ್ಡ ಸ್ಥಾನದಲ್ಲಿದ್ದರೂ ಇಂತಹ ಕೆಲಸವನ್ನು ಮಾಡುವರೇ ಎಂದು ನನಗೆ ಆಶ್ಚರ್ಯವಾಯಿತು. ಯಾವ ಮನುಷ್ಯ ಸಮತ್ವವನ್ನು ಕಾಯ್ದುಕೊಂಡು ಹೋಗುತ್ತಾನೆಯೋ ಅವರ ಬುದ್ಧಿ ವಿಶಾಲವಾಗಿರುತ್ತದೆ. ಇದನ್ನು ನಾನು ಕೃಷ್ಣರವರಲ್ಲಿ ಕಂಡೆ. ಇವರು ಸ್ವಚ್ಛ, ಸರಳ, ನಮ್ರತೆಯ ಸ್ವಭಾವದವರು, ನಮ್ಮ ಸಮಾಜಕ್ಕೆ ಇವರು ಇನ್ನೂ ದೀರ್ಘ ಕಾಲ ಸೇವೆ ಸಲ್ಲಿಸುತ್ತಿರಲಿ.

– ಚೆನ್ನಮ್ಮ ಹಳ್ಳಿಕೇರಿ

* * *

Dr. Krishna is an embodiment of good culture and a man of perfection.

– ಗೌತಮ್ ಬಜಾಜ್

* * *

ನಾನು ನೋಡಿದಂದಿನಿಂದ ಇಂದಿನವರೆಗೂ ನಾಯಕತ್ವದ ಕಡೆಗೆ ಅವರ ತುಡಿತ–ಮಿಡಿತ, ಯೋಜನೆಗಳನ್ನು ಹಾಕಿಕೊಳ್ಳುವುದು, ಸಂಘಟನೆಯನ್ನು ಮಾಡುವುದು, ಚೊಕ್ಕಟವಾಗಿ ಕಾರ್ಯನಿರ್ವಹಿಸುವುದು, ಹಿಡಿದ ಗುರಿ ಸಾಧಿಸುವ ಸ್ನೇಹ ಜೀವಿ, ಪ್ರೀತಿ ವಿಶ್ವಾಸಗಳಲ್ಲಿ ನಂಬಿಕೆ ಇಟ್ಟವರು. ಎಲ್ಲಕ್ಕಿಂತ ಮಿಗಿಲಾಗಿ ಮಾನವತಾವಾದಿ.

– ಡಾ. ದೊಡ್ಡರಂಗೇಗೌಡ

ಕೃಷ್ಣ ಅವರು ನಡೆದುಕೊಳ್ಳುವ ವೈಖರಿ, ಪ್ರಶಾಂತ ಚಿತ್ತತೆ, ಸಮಯೋಚಿತವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ಸಂಘಟನಾ ಚಾಕಚಕ್ಯತೆ, ಯಾವುದೇ ಸಂದರ್ಭದಲ್ಲೂ ತಾಳ್ಮೆಗೆಡದೇ ಇರುವ ಸ್ಥಿತಿ, ಇವುಗಳು ನನ್ನನ್ನು ವಿಸ್ಮಯಗೊಳಿಸಿವೆ.

– ಪ್ರೊ. ಬಿ. ಆರ್. ಶೇಷಾದ್ರಿ ಅಯ್ಯಂಗಾರ್

* * *

ಡಾ. ಕೃಷ್ಣ ಅವರದು ವೃತ್ತಿಕಾರ್ಯಗಳ ನಡುವೆ ಬಿಡುವು, ಅವು ವೈಯಕ್ತಿಕ ಕಾರ್ಯಗಳಿಗಲ್ಲ–ಸಮಾಜಕ್ಕೆ ಮೀಸಲು.

– ಡಾ. ಎಂ. ಎಚ್. ಕೃಷ್ಣಯ್ಯ

* * *

ಡಾ. ಕೃಷ್ಣ ಅವರ ಕೃತಿಗಳು ಅವರ 'ಆಕೃತಿ'ಯನ್ನು ನಿರ್ಮಾಣಮಾಡಿವೆ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಂಥ 'ಆಕೃತಿ' ಸಬಲಗೊಂಡು ರಾಷ್ಟ್ರ–ಅಂತಾರಾಷ್ಟ್ರೀಯ ವ್ಯಾಪ್ತಿಗೊಳ್ಳುವಂತೆ ಅವರು ರೂಪಿಸಿದ್ದಾರೆ ಇಂಥವರು ಸಮಾಜದ ಶ್ರೇಷ್ಠ 'ಕುಂದಣ'ರೇ ಸರಿ.

– ಡಾ. ಮಲ್ಲೇಪುರಂ ಜಿ. ವೆಂಕಟೇಶ

* * *

ಕೃಷ್ಣ ಅವರು ಅಧ್ಯಯನ ಶೀಲರು ಮಾತ್ರವಲ್ಲದೇ ಒಳ್ಳೆಯ ವಾಗ್ಮಿಗಳು ಸರಳವಾಗಿ ಗಾಂಧೀ ವಿಚಾರಗಳನ್ನು ಯುವಕರಿಗೆ ಮುಟ್ಟಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

– ಡಾ. ಎಚ್.ಎಸ್. ದೊರೆಸ್ವಾಮಿ

* * *

ಕೃಷ್ಣ ಅವರು ಬಹುಶ್ರುತರು. ಕಲೆ ಮತ್ತು ವಿಜ್ಞಾನ ಎರಡೂ ಅವರಲ್ಲಿ ಮೇಳವಿಸಿವೆ. ಸಮಾಜ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಅವರವು ಅನಂತ ಬಾಹುಗಳು. ದೀನ ದಲಿತರ ಬಗೆಗೆ ವಿಶೇಷ ಕಾಳಜಿ. ಅವರ ಸೇವೆಯನ್ನು ಪಡೆಯದ ಸಂಘ–ಸಂಸ್ಥೆಗಳಿಲ್ಲ. ಅವರ ಬೆವರುಣ್ಣದ ಕ್ಷೇತ್ರಗಳಿಲ್ಲ.

– ಡಾ. ಸಾ.ಶಿ. ಮರುಳಯ್ಯ

* * *

ಕಷ್ಟ ಬಂದಿತೆಂದು ಡಾ. ವೂಡೇ ಪಿ. ಕೃಷ್ಣ ಅವರು ಕುಗ್ಗಿದವರಲ್ಲ, ಇಷ್ಟ ಕೈಗೂಡಿತೆಂದು ಹಿಗ್ಗಿದವರಲ್ಲ. ಹೆಸರಿನ ಹುಚ್ಚು ಹಚ್ಚಿಕೊಂಡವರಲ್ಲ. ಆದರೆ ಮೈಮನಗಳಲ್ಲಿ ಸದಾ ಎಚ್ಚರ ಇಟ್ಟುಕೊಂಡಿರುವ ವ್ಯಕ್ತಿ. ಕೈಗಳಲ್ಲಿ ಕಸುವಿರುವ

ವ್ಯಕ್ತಿಗಳು ಹೇಗೆ ಕ್ರಿಯಾಶೀಲರಾಗಿರಬೇಕೆಂದು ಯಾರಾದರೂ ಕೇಳಿದರೆ ನಾವು ಅತ್ತಿತ್ತ ನೋಡದೆ ಡಾ. ವೂಡೇ ಅವರ ಕಡೆ ಕೈತೋರಿಸಬಹುದು.

– **ಡಾ. ಗೊ.ರು. ಚನ್ನಬಸಪ್ಪ**

* * *

ಮನೆತನದ ಹಿನ್ನೆಲೆ, ಸಂಸ್ಕಾರ ಮನುಷ್ಯನ ಜೀವನದ ಮೇಲೆ ಪರಿಣಾಮಕಾರಿ ಪ್ರಭಾವವನ್ನುಂಟು ಮಾಡುತ್ತದೆ ಎಂಬುದರ ಜೀವಂತ ಉದಾಹರಣೆಯಾಗಿ ಡಬ್ಲ್ಯೂ.ಎಚ್. ಹನುಮಂತಪ್ಪನವರ ವಂಶೋದ್ಭವರಾದ ಕೃಷ್ಣರವರು ವಿದ್ಯೆಯ ಜತೆಗೆ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಹತ್ತಾರು ಸಂಸ್ಥೆಗಳಲ್ಲಿ ಅದರಲ್ಲೂ ಬಹುತೇಕ ಸಾರ್ವಜನಿಕ ಸೇವಾ ಸಂಸ್ಥೆಗಳ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಎಲ್ಲ ಸಂಸ್ಥೆಗಳಿಗೆ ಅವರಾಗಿ ಸದಸ್ಯರಾದವರಲ್ಲ. ಸಂಸ್ಥೆಯವರೇ ಆಹ್ವಾನಕೊಟ್ಟು ಸದಸ್ಯರನ್ನಾಗಿ ಪದಾಧಿಕಾರಿಗಳನ್ನಾಗಿ ಆರಿಸಿಕೊಂಡಿದ್ದಾರೆ ಎಂದರೆ ಅದಕ್ಕೆ ಅವರ ಕಾರ್ಯಕ್ಷಮತೆ, ದಕ್ಷತೆ ಹಾಗೂ ಸಂಘಟನಾ ಚತುರತೆಯೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ.

– **ಹೆಚ್. ಹನುಮಂತಪ್ಪ,** ಮಾಜಿ ರಾಜ್ಯಸಭಾ ಸದಸ್ಯರು

* * *

ಡಾ. ವೂಡೇ ಪಿ.ಕೃಷ್ಣ ಅವರ ನಾಯಕತ್ವದಲ್ಲಿ ನಡೆಯುತ್ತಿರುವ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಗಾಂಧೀ ಶಾಂತಿ ಪ್ರತಿಷ್ಠಾನ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮೊದಲಾದ ಸಂಸ್ಥೆಗಳಿಗೆ ಆಧ್ಯಾತ್ಮಿಕ, ವೈಚಾರಿಕ, ವೈಜ್ಞಾನಿಕ ಸಂಸ್ಕೃತಿಯ ರೂಪ ನೀಡಿ ಅಲ್ಲಿ ಶಿಸ್ತು, ಸಹಕಾರ ಮನೋಭಾವ, ಜಾತ್ಯತೀತ ಸ್ವರೂಪ, ಉತ್ತಮ ಸಂಸ್ಕಾರಗಳ ಗುಣಗಳನ್ನು ತುಂಬಿ ಎಲ್ಲರೂ ಮೆಚ್ಚುವಂತಹ ಆದರ್ಶ ಸಂಸ್ಥೆಗಳನ್ನಾಗಿ ಮಾಡಿದ್ದಾರೆ. – **ಪ್ರೊ. ಜಿ. ಬಿ. ಶಿವರಾಜು**

* * *

ಸಮಾಜದಲ್ಲಿ ವ್ಯಕ್ತಿಗತ ಪ್ರತಿಭೆ ಹೊಂದಿದವರು ಹಲವರಿರುತ್ತಾರೆ. ಪ್ರತಿಭೆಯ ಜೊತೆಗೆ ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ, ಮಾನವೀಯ ತುಡಿತಗಳನ್ನು ಒಳಗೊಂಡು ಸಮಗ್ರ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವಂಥ ಆದರ್ಶವ್ಯಕ್ತಿಗಳು ತೀರ ವಿರಳವಾಗಿ ಕಾಣುತ್ತಾರೆ. ಅಂಥ ಅಪರೂಪದ ವ್ಯಕ್ತಿ ಶ್ರೀ ವೂಡೆ.ಪಿ.ಕೃಷ್ಣ. ಅವರ ನಾಯಕತ್ವಗುಣ, ಕರ್ತೃತ್ವಶಕ್ತಿ ಹಾಗೂ ದೂರದರ್ಶಿತ್ವಗಳು ಅವರನ್ನು ಎತ್ತರದ ಸ್ಥಾನದಲ್ಲಿ ನಿಲ್ಲಿಸಿವೆ.

– **ಡಾ. ಎಸ್. ಸಿ. ಶರ್ಮ,** ವಿಶ್ರಾಂತ ಕುಲಪತಿಗಳು

* * *

ನನ್ನ ಬದುಕಿನಲ್ಲಿ ನನಗೆ ಇಬ್ಬರು ಮಾದರಿ ವ್ಯಕ್ತಿಗಳಿದ್ದಾರೆ. ಅವರುಗಳೆ ಗಿರೀಶ್ ಕಾಸರವಳ್ಳಿ ಮತ್ತು ಡಬ್ಲ್ಯೂ. ಪಿ. ಕೃಷ್ಣರವರು. ಪ್ರತಿಭೆಯಿದ್ದೂ ಸರಳತೆಯನ್ನು ಹೇಗೆ ರೂಢಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕಾಸರವಳ್ಳಿಯವರು, ಶ್ರೀಮಂತಿಕೆಯಿದ್ದೂ ಸರಳತೆಯನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬುದಕ್ಕಾಗಿ ಕೃಷ್ಣರವರು ನನಗೆ ವಿಶೇಷರಾಗಿ ಕಾಣಿಸಿಕೊಳ್ಳುತ್ತಾರೆ. ಇಂಥಹವರ ಮೌಲ್ಯಾಧಾರಿತ ಜೀವನ ನನಗೆ ಮಾತ್ರವಲ್ಲ ಅನೇಕರಿಗೆ ಸ್ಫೂರ್ತಿಯೂ ಮಾದರಿಯೂ ಆಗುವಂಥದು.

– **ಬಿ .ಎಸ್. ಲಿಂಗದೇವರು,** ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕ

ವೂಡೇ ಪಿ.ಕೃಷ್ಣರವರು ಅಜಾತ ಶತ್ರು. ಜಾತ್ಯಾತೀತ ಮನೋಭಾವವುಳ್ಳವರು. ಸಮಾಜದ ಎಲ್ಲಾ ಜಾತಿ ಪಂಗಡದವರನ್ನೂ ಪ್ರೀತಿಯಿಂದ ಕಾಣುತ್ತಿರುವವರು. ಅವರಿಗೆ ಎಲ್ಲಾ ಪಕ್ಷದವರೂ, ಪಕ್ಷಾತೀತವಾಗಿ, ಗೌರವ ನೀಡಿ ಅವರನ್ನು ಪ್ರೀತಿಸುತ್ತಿರುವುದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

– **ಪಿ. ಜಿ. ಆರ್. ಸಿಂಧ್ಯ,** ಮಾಜಿ ಸಚಿವರು

* * *

ಎಲ್ಲ ಸ್ನೇಹಿತರ ಬಗೆಗೆ ಅವರು ತೋರುವ ಪ್ರೀತಿ ಅನನ್ಯ. ಇಂತಹ ಅಜಾತಶತ್ರು, ಸಮಾಜಮುಖಿಯಾದ, ಸಕಾರಾತ್ಮಕ ಜೀವನ ಪ್ರೀತಿ ಹೊಂದಿರುವ ಕೃಷ್ಣ ಅವರ ಸಂತತಿ ಬೆಳೆಯಬೇಕೆಂಬುದೆ ನನ್ನಂಥವಥ ಆಸೆ.

– **ಡಾ. ಎಲ್. ಹನುಮಂತಯ್ಯ,** ರಾಜ್ಯಸಭಾ ಸದಸ್ಯರು

* * *

ವಿಸ್ತಾರ ಓದಿನ ಜ್ಞಾನ, ಅದಮ್ಯ ಕ್ರಿಯಾಶಕ್ತಿ, ಅಪಾರ ಜೀವನಾನುಭವ– ಇವೆಲ್ಲ ಅವರ ವ್ಯಕ್ತಿತ್ವವನ್ನು ಈಗ ಹದಗೊಳಿಸಿವೆ. ವಿವೇಕ, ಉತ್ಸಾಹ ಎರಡೂ ಒಂದು ಹದದಲ್ಲಿ ಅವರ ವ್ಯಕ್ತಿತ್ವದಲ್ಲಿ ಸೇರಿವೆ.

– **ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ**
ನಿವೃತ್ತ ಕನ್ನಡ ಪ್ರಾಧ್ಯಾಪಕರು ಹಾಗೂ ವಿಮರ್ಶಕರು

* * *

ವೂಡೇ ಪಿ.ಕೃಷ್ಣರವರ ಸುಸಂಸ್ಕೃತ ವ್ಯಕ್ತಿತ್ವ, ಪ್ರೇರಣಾದಾಯಕ ಕಾರ್ಯಶೈಲಿ, ಅವಿಶ್ರಾಂತ ಕಾರ್ಯಶೀಲತೆ, ಸತತ ಸಮಜಸೇವಾ ದೃಷ್ಟಿ, ಇವೆಲ್ಲಾ ನಮಗೆ ಸದಾಕಾಲ ಲಭ್ಯವಾಗಿರಲಿ.

– **ಕೃ. ನರಹರಿ,** ಮಾಜಿ ವಿಧಾನ ಪರಿಷತ್ ಸದಸ್ಯರು

* * *

ಸೈದ್ಧಾಂತಿಕ ಬುನಾದಿಯಿಲ್ಲದ, ತಾತ್ತ್ವಿಕ ಸೂಕ್ಷ್ಮತೆಗಳಿಲ್ಲದ ಆಡಳಿತಗಾರರಿಂದ ಇಂದು ನಮ್ಮ ಶಿಕ್ಷಣ ಕ್ಷೇತ್ರ ಮಾರುಕಟ್ಟೆಯ ಉದ್ಯಮದ ಸ್ವರೂಪವನ್ನು ಪಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಡಾ. ಕೃಷ್ಣ ಅವರಂಥವರು ಒಂದು ಪರ್ಯಾಯವಾಗಿ ನನಗೆ ತೋರುತ್ತಾರೆ.

– **ಡಾ. ಎಚ್.ಎನ್. ಮುರಳೀಧರ,** ಕನ್ನಡ ಪ್ರಾಧ್ಯಾಪಕರು ಹಾಗೂ ವಿಮರ್ಶಕರು

* * *

ಸದಾ ಮಂದಸ್ಮಿತರಾದ ಕೃಷ್ಣರವರು ಸ್ನೇಹಜೀವನಕ್ಕೆ ಒಂದು ಆದರ್ಶ. ಸಮಾಜದ ಹಲವಾರು ವೈವಿಧ್ಯಮಯ ಸಂಸ್ಥೆಗಳೊಡನೆ ಕೆಲಸಮಾಡುತ್ತಿರುವ ಶ್ರೀಯುತರು ನಿಜವಾಗಿಯೂ ಸಂಘಜೀವಿ. 'ಸಂಘೇ ಶಕ್ತಿಃ ಕಲೌಯುಗೇ' ಎಂಬ ನಾಣ್ಣುಡಿಗೆ ಜ್ವಲಂತ ನಿದರ್ಶನ.

– **ಡಾ. ಗೋಪಾಲನ್ ಜಗದೀಶ**
ಏರೋಸ್ಪೇಸ್ ಇಂಜಿನಿಯರಿಂಗ್ ಪ್ರಾಧ್ಯಾಪಕರು, ಭಾರತೀಯ ವಿಜ್ಞಾನ ಸಂಸ್ಥೆ

* * *

ಕೃಷ್ಣ ಅವರದು ತುಂಬು ಜೀವನ – ಬಿಡುವಿಲ್ಲದ, ವೈವಿಧ್ಯಮಯ ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನ. ಅವರ ಕೆಲಸಗಳಿಗೆ ರಜಾ ದಿನಗಳಿಲ್ಲ. "ತುಂಬಿದ ಕೊಡ ತುಳುಕುವುದಿಲ್ಲ" ಎಂಬ ನಾಣ್ಣುಡಿಗೆ ಅವರು ಒಂದು ಎದ್ದು ಕಾಣುವ ಉದಾಹರಣೆ.

– **ಎಸ್. ವಿ. ಮಂಜುನಾಥ್,** ಹಿರಿಯ ಸ್ವಾತಂತ್ರ್ಯ ಹೋರಾಟಗಾರರು

* * *

ಕೃಷ್ಣ ಅವರ ವಿಶಿಷ್ಟ ವ್ಯಕ್ತಿತ್ವವನ್ನು ನಾನು ಕಂಡಂತೆ, ಇವರಲ್ಲಿ ತ್ರಿಶಕ್ತಿಗಳಾದ – ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಗಳ ಸಮರ್ಪಕ ಸಮತೋಲನವಿದೆ.

– **ಡಾ. ಶ್ಯಾಮಲಾ ಜಿ. ಭಾವೆ,** ಉಭಯಗಾನ ವಿದೂಷಿ ಗುರು

* * *

ಪ್ರಶಸ್ತಿಗಳ ಭಾರದಲ್ಲಿ ಬೀಗದ, ಸಾಧನೆಗಳ ಸಾಫಲ್ಯದಲ್ಲಿ ಹಿಗ್ಗದ ಕೃಷ್ಣ ಅವರ ಚಿಂತನೆಯಲ್ಲಿ ಸ್ವಂತಿಕೆ, ಸಮತೋಲನಗಳ ವಿಸ್ತಾರ ಸನಿಹದಲ್ಲಿರುವವರಿಗೆ ಗೋಚರವಾಗುವ ಅಂಶಗಳು. ಇದರೊಡನೆಯೇ ಇತರರ ಅಭಿಪ್ರಾಯಗಳನ್ನು ಗೌರವಪೂರ್ವಕವಾಗಿ ಸ್ವೀಕರಿಸುವ ಅವರ ಸದ್ಗುಣದಿಂದಾಗಿ ಅವರೊಡನೆ ಬೆರೆತು ಕೆಲಸ ಮಾಡುವುದು ಒಂದು ಮಧುರ ಚೇತೋಹಾರಿ ಅನುಭವವಾಗುತ್ತದೆ.

– **ಡಾ. ಬಿ. ಸುಜಯ್ ಕುಮಾರ್,** ವೈದ್ಯರು, ಶ್ರೀರಂಗಪಟ್ಟಣ

* * *

ಭಾರತ ಸೇವಾದಳದಲ್ಲಿ 'ಪದ್ಮಭೂಷಣ ಡಾ. ಎಂ.ಸಿ. ಮೋದಿಯವರ ಪ್ರಶಸ್ತಿ, ಕೊಡುವ ವಿಚಾರ ಸಭೆಯಲ್ಲಿ ಚರ್ಚೆಗೆ ಬಂತು. ಸಭೆಯಲ್ಲಿದ್ದವರೆಲ್ಲ ಡಾ. ವೂಡೇ ಪಿ. ಕೃಷ್ಣರವರಿಗೆ ಈ ಪ್ರಶಸ್ತಿ ಕೊಡಬೇಕೆಂದು ನುಡಿದರು. ನಾನು ಸಹ ಅವರ ಹೆಸರನ್ನೆ ಸೂಚಿಸಿದೆ. ಆದರೆ ಡಾ. ವೂಡೇ ಪಿ. ಕೃಷ್ಣರವರು ಸಭೆಯಲ್ಲಿ ಎದ್ದು ನಿಂತು 'ಪದ್ಮಭೂಷಣ ಡಾ॥ ಎಂ.ಸಿ.ಮೋದಿಯವರ ಪ್ರಪ್ರಥಮ ಪ್ರಶಸ್ತಿಯನ್ನು ನಮ್ಮೆಲ್ಲರಿಗೆ ಹಿರಿಯರಾದ ಶ್ರೀ ಶಿವಶರಣಪ್ಪ ವಾಲಿಯವರಿಗೆ ಸಲ್ಲಬೇಕು' ಎಂದು ಹೇಳಿ ಆ ಪ್ರಶಸ್ತಿ ನನಗೇ ಕೊಡಿಸಿದರು. ಶರಣರ ವಚನದಂತೆ ಯಾವುದೇ ಪದವಿಗೆ ಹಂಬಲಿಸಿದವರಲ್ಲ, ಅವರಿಗೆ ಸಂದ ಎಲ್ಲಾ ಪ್ರಶಸ್ತಿಗಳು ತಾವಾಗಿಯೇ ಹುಡುಕಿಕೊಂಡು ಬಂದಿವೆ.

– **ಶಿವಶರಣಪ್ಪ ವಾಲಿ,** ಚೀಫ್ ಎಡಿಟರ್, ನಾರ್ಥ್ ಕರ್ನಾಟಕ ಕನ್ನಡ ಡೈಲಿ

* * *

'ಸಾಧಕನಿಗೆ ಕೈಸಾವಿರ, ಕಾಲ್‌ಸಾವಿರ' ಎಂಬ ಮಾತು ಕೃಷ್ಣ ಅವರ ವಿಚಾರದಲ್ಲಿ ಅಕ್ಷರಶಃ ಸತ್ಯವಾಗಿದೆ. ಮುಗಿಲೆತ್ತರಕ್ಕೆ ಬೆಳೆದು ನಿಂತರೂ, ಬೇರುಗಳು ಈ ಭೂಮಿಯ ಮೇಲೇ ಇವೆ ಎಂಬುದು ಅವರು ಅದೆಷ್ಟು Down to earth ಎಂಬದನ್ನು ನಿರೂಪಿಸುತ್ತದೆ. ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಅವರ ಹೃದಯ ವೈಶಾಲ್ಯತೆ ಬೆರಗುಗೊಳಿಸುತ್ತದೆ. ಈ ಕಾಲದ ಎಲ್ಲ ಶ್ರೇಷ್ಠರ, ನಾಯಕಮಣಿಗಳ ಸಾಮೀಪ್ಯ, ಒಡನಾಟವಿದ್ದರೂ ಎಳ್ಳಷ್ಟೂ ಅಹಂಕಾರ ಪಡದ ಅವರ ನಿಗರ್ವಿ ನಡವಳಿಕೆ ಮಾದರಿಯಾದುದು. ಗಾಂಧೀಜಿಯ 'ತಮ್ಮ ಬದುಕೇ ಸಂದೇಶ' ಎಂಬ ಮಾತಿಗೆ ವ್ಯಾಖ್ಯಾನದಂತಿದೆ ಕೃಷ್ಣ ಅವರ ಬದುಕು.

– **ಡಾ. ಮೀರಾಸಾಬಿಹಳ್ಳಿ ಶಿವಣ್ಣ**
ಜಾನಪದ ವಿದ್ವಾಂಸರು

* * *

Dr. Wooday's lifestyle is very unique and a role model for many to emulate. He has many friends, friends, and friends only and can never dream of antagonizing or being an enemy to anyone. His selfless and helpful attitude to everyone from the really needy to the deserving is a marvelous character of his, which would go a long way and leave a trail for all times to come and his services remembered.

- Dr. Ing. B. V. A. Rao
President, Hymamshu Educational Trust

* * *

It is a pleasure to work with Dr. Krishna as a valuable team member to successfully organize National and International Conferences and Seminars with Indian and foreign experts. His pleasant manners and communication skills will endear everyone.

- PadmaShri Prof. R. M. Vasagam

Former Vice-Chancellor, Anna University

* * *

In the numerous discussions I have had with Dr. Krishna, I have always observed that he never speaks ill of others. He is truly an institution builder and a person who always thinks of doing good to others.

- Narendra R. Baliga

Director, ISOCT Baliga Machinery

* * *

An admirer of Swami Vivekananda's teachings and Gandhian principles, Dr Krishna believes in 'simple living and high thinking'. His numerous achievements reflect his untiring zeal, hard and dedicated work. These qualities manifested themselves in his behavior and performance even as a student in Sri Ramakrishna Vidyashala where he had his high school education during the years from 1975 to 1978, according to our very senior teachers. It is during these formative years that he got exposed to the teachings and messages of the Holy Trinity, Bhagavan Sri Ramakrishna, Holy Mother Sri Sarada Devi and Swami Vivekananda. The philosophy of Swami Vivekananda, the values like leadership, self-reliance, team spirit and the message of service and sacrifice moulded his personality.

- Swami Muktidananda

Adhyaksha, Sri Ramakrishna Ashrama, Mysore

* * *

ಕವಿಗಳ ಕಣ್ಣಲ್ಲಿ ಕೃಷ್ಣ

---

1. ಬತ್ತದ ತೊರೆ

–ದುಗ್ಗೇನಹಳ್ಳಿ ಸಿದ್ದೇಶ್

ನದಿಯಂತವರು
ನದಿಯಾಗಿ ಹರಿಯುತಿಹರು
ಬರಡಾದ್ದುದನ್ನು ಹಸಿರಾಗಿಸುತಾ
ಉಸಿರು ನೀಡುತಿಹರು

ಎಲ್ಲ ಹುಳಕನ್ನೂ ಕೊಳಕನ್ನೂ
ಕೆಡವುತ್ತಾ ಕೊಡವುತ್ತಾ
ಕಟ್ಟಕಡೆಯವರಿಗೂ ಜೀವ ಕೊಡುತಿಹರು

ಬುದ್ಧ ಬಸವ ಗಾಂಧಿ
ವಿವೇಕಾನಂದ ಕುವೆಂಪುರವರೊಡಗೂಡಿ
ಕೊರಡನ್ನೂ ಕೊನರಿಸುತಿಹರು

ಆಶ್ರಯ ಹರಸಿ ಬಂದ ಅರಗಿಣಿಗಳಿಗೆ
ಆಕಾಶ ತಬ್ಬುವ ಆಲವಾಗಿ
ಸಾಕಿ ಸಲಹುತ್ತಾ ಮುಂದೆ ಸಾಗುತಿಹರು

ನಡೆದ ದಾರಿಯಲೆಲ್ಲಾ
ಹೊಸಹುಟ್ಟಿನ ಸಂಭ್ರಮ
ಎಲ್ಲವನ್ನೂ ದಾಟಿ ಒಳಗು
ಮಾಡಿಕೊಳ್ಳುತಿಹರು

ಚಿಂತನೆಯ ಪಸೆಯಾಗಿ
ಚೈತನ್ಯದ ಬನಿಯಾಗಿ
ಬತ್ತದ ತೊರೆಯಾಗಿ
ಹರಿಯುತಿಹರು

* * *

2. ಜೀವ ದರ್ಪಣ

– ಡಾ. ಸತ್ಯಮಂಗಲ ಮಹಾದೇವ

ಜೀವಾಕರ್ಷವೇ ಹೂವಾಗುವ ಘಳಿಗೆಯಲಿ
ಭಾವೋತ್ಕರ್ಷದ ಬೆಳಕಾಗಿ ಬಂದೆ
ಸಿರಿಯಾದೆ ಬಿಡುಗಡೆಗೆ ದುಡಿದವರಿಗೆ
ವರದಂತೆ ದುಡಿದೆ ಸರಳತೆಗೆ
ಮೆರೆವ ಭಾರತದ ಬಾಪುವಿನ
ನೊಗ ಹೊತ್ತ ಕಾಯಕ ಯೋಗಿಯೇ

ವಿಪುಲವಾಗಿಹ ದಾಹ ಶರಧಿಯಲಿ
ತಣ್ಣೆಳಲ ತಂಬೆಲರ ಕಣಿವೆಯ ತೆರೆದೆ
ಕಿರಣದುದಯದ ಕಾರಣದ ಬೆಳಕಿಂಗೆ
ತೈಲದಂತುರಿವ ಯೋಜನೆಯ ಕರ್ತೃವಾದೆ

ಅರಿವನ್ನು ಅನವರತ ಪೂಜಿಸಿದ ಮೌನಿಯೇ
ಧ್ಯಾನದ ಎಚ್ಚರವನ್ನು ಅಚ್ಚರಿಯಲಿ ಕಂಡರಿಸಿದೆ
ಅಕ್ಷರವ ಹಂಚುವ ದಯೆಯ ಕಾರಣಿಕವಾಗಿ
ಆಗಸದ ತುಂಬೆಲ್ಲ ಹಕ್ಕಿ ಹಾರುವ ತೆರದಿ
ಹಾರುವ ಹಕ್ಕಿಗಳ ತಾಯಾಗಿ ತಂದೆಯಾಗಿ

ಮನದೊಳಗೆ ಕುಸುಮಿಸಿದೆ
ಎಲ್ಲಾ ಬೇಕೆನುವವರ ಮಧ್ಯೆ
ಬೇಡವೆನ್ನುವ ದಯಾಳುವೆ

ಅನ್ನದ ರಹದಾರಿಯನು ಹಸಿವಿನ ಕೋಣೆಗಳನು
ಕ್ರಮಿಸಿ ಕ್ರಮಗೊಳಿಸುವ ಅಭಿಯಂತರನಾದೆ
ಹೂವಿನ ಹಾಡನು ಕೇಳುವ ಸೂಕ್ಷ್ಮ ಸಿಂಧುವೆ
ಹಾಡಿನೊಳಗಣ ತಾಳಲಯ ಭಾವಕ್ಕೆ
ಹಾಡಿನೊಳಗಣ ತೇಜವನು ಶೃತಿಗೊಳಿಸಿದೆ

ಬರೆಯುವುದನು ಬದುಕಿದೆ
ಬದುಕಿನಂತೆ ಬರೆದೆ
ಎವೆತೆರೆವ ಗುಬ್ಬಿ ಗೊರವಂಕಗಳಿಗೆಲ್ಲಾ
ಕೋಗಿಲೆ ಮರಿದುಂಬಿಗಳನೆಲ್ಲಾ
ತನ್ನದೆಯನೆ ಗೂಡಾಗಿಸಿದೆ
ವಸಂತಕಾಲವನೆ ಕಾಯದೆ ವಸಂತವನೆ ಸೃಷ್ಟಿಸಿದೆ

ಮಾತು ಸೋತಾಗ ಮೌನವನೆ ಮಿಡಿಸಿದೆ
ಅಡಿಗಡಿಗು ಎಚ್ಚರವನೆ ಚಿಗುರಿಸಿದೆ
ಸಂತೋಷವನು ಅನಂದದ ಎತ್ತರಕೆ
ಉಲ್ಲಾಸವನು ಉತ್ಥಾನಕ್ಕೆ ದಾಟಿಸಿದೆ
ಉದಯಿಸಿದೆ ಉದಯಗೊಳಿಸಿದೆ

ಕಾರ್ತೀಕ ದೀಪದಂತೆ ಮುಗಿಲನಾವರಿಸಿದೆ
ಮಿತಿಯ ಉಜ್ವಲಗೊಳಿಸೆ ಬಂಧುವಾದೆ
ಆತ್ಮ ಹುರಿಗೊಳ್ಳುತಿದೆ ನಿನ್ನಾತ್ಮ ದರ್ಶನಕೆ
ಪದ ಸೋಲುತಿವೆ ಜೀಯ ನಿನ್ನ ಗುಣ ಗ್ರಹಣಕ್ಕೆ
ನಿನ್ನ ಪದತಳದಲ್ಲಿ ಬಿರಿಯುತಿಹ
ಮೊಗ್ಗೊಂದು ಗಣಿಸಿ ಕಾಯಕವನಿತ್ತ ಜೀವ ದರ್ಪಣವೆ
ವಂದಿಸುತ ತಲೆಗಾಗಿ ಮಣಿವುದೆನ್ನ
ಕಾಯಕವು ದಿನ ದಿನವು ....

* * *

3. ಶೇಷಾದ್ರಿಪುರ ವಿದ್ಯಸಂಸ್ಥಾಯಾಶ್ಚಿರಂ ಕಾರ್ಯದರ್ಶಿನಂ ಕೃಷ್ಣಾಭಿದಂ ನಮಃ

–ಪ್ರೊ. ಎಸ್. ಮುರುಳೀಧರನ್

ರಾಗ : ಯಮುನಾಕಲ್ಯಾಣಿ ತಾಳ :ಆದಿ

ಪದ್ಯಮ್

ಶೇಷಾದ್ರಿಪುರಸಂಸ್ಥಾಯಾಃ ಕಾರ್ಯದರ್ಶಿಧುರಂಧರಂ।
ಕೃಷ್ಣಾಭಿದಂ ಮುದಾ ವಂದೇ। ಗಾಂಧಿಸನ್ಮಾರ್ಗದರ್ಶಕಮ್ ॥

ಗೀತಮ್

ಶೇಷಾದ್ರಿಪುರವಿದ್ಯಾಸಂಸ್ಥಯಾಶ್ಚಿರಂ
ಕಾರ್ಯದರ್ಶಿನಂ ಕೃಷ್ಣಾಭಿದಂ ನುಮ: ।
ಮಾರ್ಗದರ್ಶಕಮ್ ಆದರ್ಶಪೂರಿತಂ
ತತ್ವಚಿಂತಕಂ ಧ್ಯೇಯಸಾಧಕಮ್॥

ಗಾಂಧಿಮಾರ್ಗಿನಂ ಸರಲಜೀವಿನಮ್ ।
ಸತ್ವಥಪ್ರಿಯಂ ಸಂಸ್ಕಾರಸಂಯುತಮ್॥

ಶೇಷಾದ್ರಿಪುರವಿದ್ಯಾಸಂಸ್ಥಾಯಾಶ್ಚಿರಂ

ರಾಮಕೃಷ್ಣವಿವೇಕಾನಂದಪದಸುಸೇವಕಂ
ಸತ್ವಭರಿತದೇಶಭಕ್ತಪರಂಪರಾಪಾಲಕಂ।
ನೈಕಾದಿಭಿರುಪಾಧಿಭಿಃ ಅಲಂಕೃತಂ ವಾಗ್ಮಿನಂ
ಜ್ಞಾನವಿಜ್ಞಾನಸಹಿತವಿದಯಾವಿವರ್ಧಕಮ್॥

ಶೇಷಾದ್ರಿಪುರವಿದ್ಯಾಸಂಸ್ಥಾಯಾಶ್ಚಿರಂ

ಅಮಾನಿತ್ವ–ಅದಂಭಿತ್ವ–ಅಹಿಂಸಾದಿಗುಣಯುತಂ
ಪ್ರತಿಷ್ಠಿತ ಸೇವಾಸುಸಂಸ್ಥಾಸು ತತ್ಪರಂ।
ರಾಜ್ಯದೇಶವಿದೇಶೇಷು ಸಮ್ಮಾನಿತಮಾದರಾತ್
ನಾಡೋಜಪ್ರಶಸ್ತ್ಯಾ ಪುರಸ್ಕೃತಮ್ ಧಾರ್ಮಿಕಮ್ ॥

* * *

ಕೃಷ್ಣ ಕೃತಿಗಳ ಅಂತರಂಗ



*** ಕೃಷ್ಣಸಿರಿ – ಅಭಿನಂದನಾ ಸಂಪುಟ**

ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಡಾ. ಕೆ.ವಿ. ಮುದ್ದವೀರಪ್ಪ

ಸಂಪಾದಕರು

ಬೆಂಗಳೂರಿನ ಪ್ರತಿಷ್ಠಿತ ವೂಡೇ ಮನೆತನದಲ್ಲಿ 1963ರಲ್ಲಿ ಜನಿಸಿದ ಧ್ರುವತಾರೆ ಡಾ. ವೂಡೇ ಪಿ. ಕೃಷ್ಣ. ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ಬೆಂಗಳೂರಿನ ಪೂರ್ಣಪ್ರಜ್ಞ ಶಾಲೆ, ಮೈಸೂರು ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ದೊರೆತ ಶಿಕ್ಷಣ ಅವರ ಬದುಕಿಗೆ ಒಳ್ಳೆಯ ಅಡಿಪಾಯ ಹಾಕಿದ್ದಲ್ಲದೆ ನಂತರ ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದವು.

ಇಂಜಿನಿಯರಿಂಗ್‌ನಲ್ಲಿ ಬಿ.ಇ., ಎಂ.ಎಸ್. ಪದವಿಗಳು, ಕಾನೂನಿನಲ್ಲಿ ಎಲ್.ಎಲ್.ಎಂ. ಪದವಿ, ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೊಮ, ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್.ಡಿ ಪದವಿ– ಹೀಗೆ ಪದವಿಗಳ ಸರಮಾಲೆಯೇ ಅವರನ್ನು ಅಲಂಕರಿಸಿ 'ಪುರುಷ ಸರಸ್ವತಿ' ಮಾಡಿದವು.

ಹೀಗೆ ಬಹು ಆಸಕ್ತಿಗಳ, ವೈವಿಧ್ಯಮಯ ಅಪಾರ ಓದಿನ, ಬಹುಮುಖ ಪ್ರತಿಭೆಯ ಕೃಷ್ಣ ಅವರು ಮೆಕಾನಿಕಲ್ ಇಂಜಿನಿಯರಿಂಗ್‌ನ ಉಪನ್ಯಾಸಕರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರೂ ಸಮಾಜಮುಖಿಯಾದ ಅವರ ಮನಸ್ಸು ಕ್ರಮೇಣ ಸಮಾಜಸೇವೆಯ ಸೆಳೆತಕ್ಕೆ ಸಿಕ್ಕಿತು. ಈ ಕ್ಷೇತ್ರದಲ್ಲಿ ಪೂರ್ಣಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಭಾರತ ಸೇವಾದಲ, ಭಾರತೀಯ ಕ್ಷಯರೋಗ ಸಂಸ್ಥೆ, ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ವಿಶ್ವನೀಡಂ ಟ್ರಸ್ಟ್, ನವಜೀವನ ವ್ಯಾಯಾಮ ಶಾಲಾ ಟ್ರಸ್ಟ್, ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ, ವೂಡೇ ಪ್ರತಿಷ್ಠಾನ, ಕರ್ನಾಟಕ ಸರ್ವೋದಯ ಮಂಡಲ ಇತ್ಯಾದಿ, ಇತ್ಯಾದಿಗಳ ನಾನಾ ಹುದ್ದೆಗಳ ಮೂಲಕ ಸೇವಾ ಲಾಭ ಪಡೆದ ಸಂಸ್ಥೆಗಳ ಸಂಖ್ಯೆ ಅಸಂಖ್ಯ.

ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಶಿಕ್ಷಣದ ಮಹಾನ್ ಟೈಟಾನಿಕ್ ಹಡಗಿನ ಕಫ್ತಾನನ ಜವಾಬ್ದಾರಿ, ಭಾರತೀಯ ಇಂಜಿನಿಯರ್‌ಗಳ ಸಂಸ್ಥೆಯಲ್ಲಿ ನಿರ್ವಹಿಸಿದ ಹಲವು ಹುದ್ದೆಗಳು ಅವರ ಸಾಧನೆಯ ಮುಡಿಗೇರಿದ ಕೀರ್ತಿ ಪತಾಕೆಗಳೇ ಸರಿ.

ಇವರ ಸೇವೆಗೆ ಮನಸೋತು ಹುಡುಕಿಕೊಂಡು ಬಂದ ಗೌರವ-ಪ್ರಶಸ್ತಿಗಳು ಒಂದೆರಡಲ್ಲ. ಇಂಡಿಯನ್ ರೆಡ್‌ಕ್ರಾಸ್‌ನ ರಾಷ್ಟ್ರಪತಿಗಳ ಚಿನ್ನದ ಪದಕ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ವಿಕಲಚೇತನರ ಕಲ್ಯಾಣಾಭಿವೃದ್ಧಿ ರಾಜ್ಯ ಪ್ರಶಸ್ತಿ, ಕರ್ನಾಟಕ ರಾಜ್ಯ ಯುವ ಪ್ರಶಸ್ತಿ, ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಭಾರತೀಯ ವಿದ್ಯಾವಿಶಾರದ ಗೌರವ, ಇತ್ಯಾದಿ, ಇತ್ಯಾದಿ- ಇವು ಅವರ ಸಾಧನೆಯ ಹಾದಿಯ ಮೈಲಿಗಲ್ಲುಗಳು.

ಕೇವಲ 50 ವರ್ಷಗಳ ಅವಧಿಯಲ್ಲೇ ಸಾಧನೆಯ ಶಿಖರ ಮುಟ್ಟಿರುವ, ವೃತ್ತಿ-ಪ್ರವೃತ್ತಿಗಳೆರಡರ ಅಪೂರ್ವ ಸಂಗಮಕ್ಕೊಂದು ರೂಪಕದಂತಿರುವ ಕೃಷ್ಣ ಅವರ ಬದುಕು-ಬರಹ ನಿರ್ಮಿಸಿರುವ ಮಾದರಿಗಳು ಅಪೂರ್ವ-ಅನನ್ಯ.

(ಬೆನ್ನುಡಿ)

* * *



* Beyond The Boundaries

Dr. Wooday P. Krishna

Dr. Wooday P. Krishna is a technocrat, an accomplished educationist and a committed social worker. His personality has been enriched from the experiences he derived while serving in many institutions. This anthology has diverse articles written by him occasionally while serving multidimensional professions. They include letters written for 'readers' column in newspapers on public interest, research articles on engineering, education, spiritualism and social service and thoughts on Gandhiji too. The speeches delivered on various occasions in his different capacities and interactions which dwell upon his ideals and thoughts, have enriched the worth of the book.

The book is endowed with a dimension of his interactions, meetings, conferences with different individuals in his association with diverse organizations such as the Indian Red Cross Society, Karnataka Gandhi Smarak Nidhi, Gandhi Peace Foundation, Tuberculosis Association of India, Karnataka State Disaster Management Authority, Youth Hostels Association of India, and Seshadripuram Educational Institutions.

The research articles on engineering depict his insight and scientific thinking.

The awards and honours bestowed upon him by the central and state governments are a testimony of his achievements before completion of half a century of age. It is hoped that the contents will enhance the intellect and rational thinking of the reader.

(Blurb)

G.S. Ujjanappa

* * *



* ಸರ್ ಎಂ. ವಿಶ್ವೇಶ್ವರಯ್ಯ

ಬದುಕು– ಸಾಧನೆಗಳ ಅವಲೋಕನ

ಡಾ. ವೂಡೇ ಪಿ. ಕೃಷ್ಣ

ಆಧುನಿಕ ಭಾರತದ ಶಿಲ್ಪಿ ಎನಿಸಿರುವ ಸರ್ ಎಂ. ವಿಶ್ವೇಶ್ವರಯ್ಯನವರ ವ್ಯಕ್ತಿತ್ವ ಆಕರ್ಷಕವಾಗಿ ಕಂಡು, ಅವರ ಬಗೆಗೆ ವ್ಯಾಪಕ ಅಧ್ಯಯನ ನಡೆಸಿ, ಸಂಕ್ಷಿಪ್ತವಾಗಿ, ಅಷ್ಟೇ ಅಚ್ಚುಕಟ್ಟಾಗಿ, ವಿಶ್ವೇಶ್ವರಯ್ಯನವರ ಜೀವನ, ವ್ಯಕ್ತಿತ್ವ, ವಿಚಾರ ಧಾರೆಗಳನ್ನು 'ಸರ್ ಎಂ. ವಿಶ್ವೇಶ್ವರಯ್ಯ–ಜೀವನ–ಸಾಧನೆ' ಎಂಬ ಪುಸ್ತಕ ರೂಪದಲ್ಲಿ ಸರಳ ಭಾಷೆಯಲ್ಲಿ ಓದುಗರಿಗೆ ವಿಶ್ವೇಶ್ವರಯ್ಯನವರನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

ಪುಸ್ತಕದ ಪ್ರಾರಂಭದಲ್ಲಿ ವಿಶ್ವೇಶ್ವರಯ್ಯನವರ ಕೌಟುಂಬಿಕ ಹಿನ್ನೆಲೆಯ ಬಗ್ಗೆ ವಿಷದವಾಗಿ ತಿಳಿಸಿಕೊಟ್ಟಿದ್ದಾರೆ. ಇವರ ಪೂರ್ವಜರಾದ ಲಕ್ಷ್ಮೀಪತಿ ಭಟ್ಟರು ಸಮಾಜಸೇವೆಗೆ ಕೊಡುಗೆಯಾಗಿ ಪಡೆದ ಐದು ಹಳ್ಳಿಗಳಲ್ಲಿ ಮುದ್ದೇನಹಳ್ಳಿಯೂ ಒಂದು. ವಿಶ್ವೇಶ್ವರಯ್ಯನವರ ಪೂರ್ವಿಕರ ಬಗ್ಗೆ ಮಾಹಿತಿ ನೀಡಲು ಕೃಷ್ಣರವರು ವಂಶವೃಕ್ಷದ ನಕ್ಷೆಯನ್ನೇ ಓದುಗರಿಗೆ ನೀಡಿದ್ದಾರೆ. ಸಂಕ್ಷಿಪ್ತವಾಗಿ ವಿಶ್ವೇಶ್ವರಯ್ಯನವರ ವಿದ್ಯಾರ್ಥಿ ಜೀವನವನ್ನು ಹೇಳಿ ಮುಂದೆ, ಹೇಗೆ ಈ ಚುರುಕಿನ ಬಾಲಕ ವಿದ್ಯಾಭ್ಯಾಸ ಮಾಡುತ್ತಾ ಮುಂದುವರಿದರೆಂದು ತಿಳಿಸುತ್ತಾರೆ.

ದಿವಾನರಾಗಿ ಸರ್ ಎಂ.ವಿ.ಯವರ ವ್ಯಕ್ತಿತ್ವವನ್ನು ಹಾಗೂ ಅವರ ಸಿದ್ಧಾಂತ, ಕಾರ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಸರ್ ಎಂ.ವಿ. ಯವರ ಮುಖ್ಯ ಸಿದ್ಧಾಂತವಾದ "ಉತ್ತಮವಾಗಿ ಕೆಲಸ ಮಾಡು ಉತ್ತಮವಾಗಿ ಗಳಿಸು ಮತ್ತು ಉತ್ತಮವಾಗಿ ಜೀವಿಸು" ಎಂಬುದನ್ನು ಲೇಖಕರು ಬಹು ಚನ್ನಾಗಿಯೇ ಗುರುತಿಸಿದ್ದಾರೆ.

ಸರ್.ಎಂ.ವಿ. ಮತ್ತು ಗಾಂಧೀಜಿ ನಡುವೆ ಸೈದ್ಧಾಂತಿಕ ಭಿನ್ನಭಿಪ್ರಾಯವಿರುವುದು ಎಲ್ಲರಿಗೂ ತಿಳಿದ ವಿಚಾರ. "ಕೈಗಾರಿಕೀಕರಣಗೊಳಿಸಿ ಇಲ್ಲವೇ ನಾಶವಾಗಿ" ಎಂಬುದು ಸರ್ ಎಂ.ವಿ. ವಾದವಾದರೆ "ಕೈಗಾರಿಕೀಕರಣಗೊಳಿಸಿ ಮತ್ತು ನಾಶವಾಗಿ" ಎಂಬುದು ಗಾಂಧೀಜಿಯವರ ವಾದವಾಗಿದ್ದಿತು. ಹೀಗೆ ಒಬ್ಬರಿಗೊಬ್ಬರು ವಿಭಿನ್ನ ಅಭಿಪ್ರಾಯದವರಾಗಿದ್ದರೂ ಪರಸ್ಪರರ ಬಗ್ಗೆ ಗೌರವವಿತ್ತು. ತಮ್ಮ ನಡುವಿನ ಈ ಭಿನ್ನಾಭಿಪ್ರಾಯ

ಸಾರ್ವಜನಿಕರಲ್ಲಿ ಗೊಂದಲ ಮೂಡಿಸದಂತೆ ಎಚ್ಚರವಹಿಸಿದ್ದರು. ಇವರ ನಡುವಿನ ಈ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಕೃಷ್ಣರವರು ಪುಸ್ತಕದಲ್ಲಿ ಸಕಾರಣವಾಗಿ ಚರ್ಚಿಸಿದ್ದಾರೆ.

ಅಂತಿಮವಾಗಿ ಪುಸ್ತಕದ ಕೊನೆಯಲ್ಲಿ ಸರ್ ಎಂ.ವಿ.ಯವರು ಜೀವಮಾನದ, ಜೀವನಾನುಭವ ಗಳಿಂದ ಗಳಿಸಿಕೊಂಡ ಬದುಕಿನ ಬಗೆಗಿನ ಅನಿಸಿಕೆಗಳನ್ನು "ನುಡಿಮುತ್ತು" ಗಳೆಂದು ಪಟ್ಟಿಮಾಡಿ ಸರ್ ಎಂ.ವಿ.ಯವರನ್ನು ಓದುಗರಿಗೆ ಸಂಪೂರ್ಣವಾಗಿ ಅರ್ಥಮಾಡಿಸಿದ್ದಾರೆ. ಹಾಗೆಯೇ ಸರ್ ಎಂ.ವಿ.ಯವರು ಪಡೆದ ಪ್ರಶಸ್ತಿಗಳು, ಸನ್ಮಾನಗಳು, ಅವರು ಪ್ರಕಟಿಸಿದ ಪ್ರಕಟಣೆಗಳು, ಪುಸ್ತಕಗಳು ಮುಂತಾದವುಗಳ ಸುದೀರ್ಘ ಪರಿಚಯ ಓದುಗರಿಗೆ ನೀಡಿದ್ದಾರೆ.

(ವಿಮರ್ಶೆ ಆಯ್ದ ಭಾಗ)

* * * **ಡಾ. ಕೆ. ನಾಗಭೂಷಣ**



* ಬೆಳ್ಳಕ್ಕಿ ಸಾಲು

ಡಾ. ವೂಡೇ ಪಿ. ಕೃಷ್ಣ

ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ವೂಡೇ ಪಿ. ಕೃಷ್ಣರವರು ಸದಾ ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮನುಕುಲದ ಉದ್ಧಾರಕ್ಕಾಗಿ ಶ್ರಮಿಸುತ್ತಿದ್ದಾರೆ. ಬಹುಮುಖಿ ವ್ಯಕ್ತಿತ್ವ ಹೊಂದಿರುವ ಇವರು ಸದಾ ಒಂದಲ್ಲ ಒಂದು ಚಟುವಟಿಕೆಯಲ್ಲಿ ಕ್ರಿಯಾಶೀಲವಾಗಿ ಹಲವು ಸಂಘ–ಸಂಸ್ಥೆಗಳಲ್ಲಿ ಹಗಲಿರುಳು ದುಡಿಯುತ್ತಿದ್ದಾರೆ. ತಮ್ಮ ಬಿಡುವಿನ ವೇಳೆಯ ಪ್ರವೃತ್ತಿಯಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.

ಸ್ವಾಮಿ ವಿವೇಕಾನಂದ, ರಾಜಾ ರಾಮ್‌ಮೋಹನ್ ರಾಯ್, ಮಹಾತ್ಮಗಾಂಧಿ, ನಾ.ಸು. ಹರ್ಡೀಕರ್‌ರವರಂತಹ ಸಾಧಕರ ಸಮಾಜಸೇವೆಗೆ ಮಾರುಹೋಗಿ ಕೃಷ್ಣರವರು ಅವರ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ. ಹಾಗೆಯೇ ಯುವಪೀಳಿಗೆ ಇಂತಹ ಸಾಧಕರ ಚಿಂತನೆ, ಮಾನವೀಯ ಮೌಲ್ಯ, ತತ್ತ್ವಬದ್ಧತೆಯ ಬದುಕನ್ನು ಅಳವಡಿಸಿಕೊಳ್ಳಬೇಕೆಂಬುದು ಅವರ ಆಸೆ.

ನಿರ್ಮಲ ಮನಸ್ಸಿನ ಕಣ್ಣು ನಿರ್ಮಲ ವ್ಯಕ್ತಿತ್ವದವರನ್ನೇ ಹುಡುಕುತ್ತಿರುತ್ತದೆ. ಸದಾ ಅವರಂತೆ ಇರಲು ಹಾತೊರೆಯುತ್ತದೆ. ಅವರ ಜೀವನಾದರ್ಶಗಳನ್ನು ತನ್ನ ಸಮಾಜಕ್ಕೆ ನಿಸ್ಪೃಹತೆಯಿಂದ ಹಂಚಬೇಕೆಂಬ ಹಂಬಲದಿಂದ ಭಾಷಣ, ಉಪನ್ಯಾಸಗಳಲ್ಲದೆ ಅಕ್ಷರ ಲೋಕಕ್ಕೂ ಆ ಚಿಂತನೆಗಳನ್ನು ತಂದು ಸರ್ವರಿಗೂ ತಿಳಿಯುವಂತೆ ಮಾಡುವ ಹಂಬಲ ಅವರದು.

ವೂಡೇ ಪಿ. ಕೃಷ್ಣರವರು ಬರೆದಿರುವ ಇಲ್ಲಿನ ಎಲ್ಲಾ ವ್ಯಕ್ತಿಚಿತ್ರಗಳು ಹತ್ತಿಯಂತೆ ಶುಭ್ರವಾದ ಸಂಕ್ಷಿಪ್ತ ಬದುಕಿನ ಇಣುಕುನೋಟದಂತಿವೆ. ಬೇರೆಯವರ ಬದುಕನ್ನು ಸುಂದರವಾಗಿಸಲು ತಮ್ಮ ಬದುಕನ್ನೇ ಮುಡಿಪಾಗಿಟ್ಟ ಅಧ್ವೈರ್ಯುಗಳ ಚಿತ್ರಣ ಇಲ್ಲಿ ಒಡಮೂಡಿರುವುದರಿಂದ 'ಬೆಳ್ಳಕ್ಕಿ ಸಾಲು' ಎಂಬ ಹೆಸರು ಅನ್ವರ್ಥಕವಾಗಿದೆ. ಓದು ಮತ್ತು ಅನುಭವಗಳ ಜೀವದ್ರವ್ಯ ಸರಳ ಭಾಷೆಯಲ್ಲಿ ಉತ್ತಮ ನಿರೂಪಣೆಯೊಂದಿಗೆ ಅಭಿವ್ಯಕ್ತಗೊಂಡಿದೆ.

ಸ್ವಾತಂತ್ರ್ಯ ಹೋರಾಟದ ಧುರೀಣರ, ಸಮಾಜ ಸುಧಾರಕರ, ಮಾನವೀಯ ಚಿಂತಕರ ಬಗೆಗೆ ಈ ಕೃತಿಯಲ್ಲಿ ಅವರು ಬದುಕಿದಂತೆ ಚಿತ್ರಿಸಲಾಗಿದೆ. ಅವರಂತೆ ಪ್ರಸ್ತುತ ಸಮಾಜವೂ ಬದುಕಬೇಕೆಂಬ ಆಸೆಗಣ್ಣಿನಿಂದ ಲೇಖಕರು ನೋಡುತ್ತಿದ್ದಾರೆ. ಆಧುನಿಕತೆಯ ತಂತ್ರಜ್ಞಾನದ ತುತ್ತತುದಿಯಲ್ಲಿರುವ ಮನುಷ್ಯ ನೆಮ್ಮದಿಯ ಬದುಕಿಗಾಗಿ ಸಾಧಕರ ಆದರ್ಶಗಳನ್ನು ರೂಢಿಸಿಕೊಂಡು ಸ್ವಚ್ಛ ಸಮಾಜ ನಿರ್ಮಾಣ ಮಾಡಬೇಕು ಎಂಬುದು ಕೃಷ್ಣ ಅವರ ಮನದಾಳದ ಅಭಿಲಾಷೆಯಾಗಿದೆ.

(ಬೆನ್ನುಡಿ)

ಡಾ. ಕೆ. ವಿ. ಮುದ್ದವೀರಪ್ಪ

ಗಾಂಧೀ ತತ್ವಗಳ ವ್ಯಕ್ತಿಚಿತ್ರಗಳು

ಪ್ರೊ. ಡಿ. ಅಂಜನಪ್ಪ ಚಳ್ಳಕೆರೆ

ಡಾ.ವೂಡೆ ಪಿ. ಕೃಷ್ಣ ಅವರೇ ಹೇಳುವಂತೆ 'ನನ್ನ ಮನದಾಳದ ಪ್ರೀತಿಯ ವಿಚಾರಗಳನ್ನು ಕುರಿತ ಲೇಖನಗಳು ಇವಾಗಿವೆ. ಇಲ್ಲೆಲ್ಲಾ ಒಂದು ಉದಾತ್ತತೆ, ಆದರ್ಶ, ಮೌಲ್ಯಗಳ ಮೂಲಕ ಅವರ ವ್ಯಕ್ತಿತ್ವಗಳು ನನ್ನ ಗಮನ ಸೆಳೆದಿವೆ. ಇವರು ಆಕಾಶದಲ್ಲಿ ಮುಕ್ತವಾಗಿ ಹಾರಾಡುವ ಶ್ವೇತ ನಿರ್ಮಲ ಬೆಳ್ಳಕ್ಕಿಗಳಂತೆ ನನಗೆ ಕಂಡಿದ್ದಾರೆ. ಹೀಗಾಗೆ ಈ ಕೃತಿಗೆ ಬೆಳ್ಳಕ್ಕಿ ಸಾಲು ಎಂದು ಹೆಸರಿಟ್ಟಿದ್ದೇನೆ' ಎಂದು ಹೇಳುತ್ತಾರೆ. ಸಾಮಾಜಿಕ ಸೇವೆಯಲ್ಲಿರುವ ಒಂದು ವ್ಯಕ್ತಿತ್ವಕ್ಕೆ ದಕ್ಕಿದ ಅನುಭವಗಳು ಇಲ್ಲಿವೆ. ಈ ಕೃತಿಯಲ್ಲಿ ಬರುವ ವ್ಯಕ್ತಿಗಳು ಅಪೌರುಷೇಯ ವ್ಯಕ್ತಿಗಳೇನಲ್ಲ, ಅಸಾಮಾನ್ಯ ವ್ಯಕ್ತಿಗಳೂ ಅಲ್ಲ; ಯಾವುದೇ ಕಾಲ್ಪನಿಕ, ಪೌರಾಣಿಕ ಮಿತ್‌ನಿಂದ ಉದಯಿಸಿದ ಪರಿಕಲ್ಪನೆಯ ವ್ಯಕ್ತಿಗಳೂ ಅಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಂತೆಯೇ ಬದುಕಿದ, ಉನ್ನತ ಮೌಲ್ಯಗಳ ಮೂಲಕವೇ ಬದುಕಿ ಸಾಧನೆ ಮಾಡಿದ ವ್ಯಕ್ತಿಗಳಾಗಿದ್ದಾರೆ. ಆರೋಗ್ಯಕರ ಸಮಾಜವನ್ನು ಕಟ್ಟಲು

ಶ್ರಮಿಸಿದವರಾಗಿದ್ದಾರೆ. ಅವರ ಮಾತುಗಳೇ ಅವರ ವ್ಯಕ್ತಿತ್ವಗಳಾಗಿವೆ, ಅವರ ವ್ಯಕ್ತಿತ್ವಗಳೇ ಪ್ರಯೋಗಗಳಾಗಿವೆ, ಅವರ ಪ್ರಯೋಗಗಳೇ ಸಮಾಜಕ್ಕೆ ದಾರಿದೀಪಗಳಾಗಿವೆ.

'ಬೆಳ್ಳಕ್ಕಿ ಸಾಲು' ಕೃತಿ ಕೇವಲ ವ್ಯಕ್ತಿಗಳನ್ನು ಮಾತ್ರ ಪರಿಚಯಿಸುವುದಿಲ್ಲ, ಅವರ ಸಾಧನೆಗಳನ್ನು ಮಾತ್ರ ವಿವರಿಸುವುದಿಲ್ಲ. ಆ ಎಲ್ಲ ವಿವರಗಳ ಮೂಲಕ ಮಾನವ ಬದುಕಿಗೆ ಮತ್ತು ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು, ಸಮಾಜವನ್ನು ಕಟ್ಟಬೇಕಾದ ಸಾಮಾಜಿಕ ಬದ್ಧತೆಗಳನ್ನು ಕುರಿತು ಈ ಕೃತಿ ಮಾತನಾಡುತ್ತದೆ. ಇಡೀ ಕೃತಿಯಲ್ಲಿನ ವ್ಯಕ್ತಿಗಳು, ವ್ಯಕ್ತಿತ್ವಗಳು ಮತ್ತು ವಿಚಾರಗಳ ಮೂಲಕ ಮಹಾತ್ಮಾ ಗಾಂಧೀಜಿಯವರ ವಿಚಾರ ಮತ್ತು ತಾತ್ವಿಕತೆಯನ್ನು ಸಂವಾದಿಸುತ್ತಾ ಸರಳವಾಗಿ ದಾಟಿಸುವ ಕೆಲಸವನ್ನು ಡಾ. ವೂಡೇ ಪಿ. ಕೃಷ್ಣ ಅವರು ಮಾಡಿದ್ದಾರೆ. ಇಲ್ಲಿಯ ವ್ಯಕ್ತಿಚಿತ್ರಗಳಲ್ಲಿ ಪ್ರಮುಖವಾದವುಗಳೆಂದರೆ- ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಂಗನಾಥಾನಂದ, ಎಚ್.ಆರ್. ದಾಸೇಗೌಡ, ಯಶೋದಮ್ಮ ದಾಸಪ್ಪ, ಸರ್ ಎಂ. ವಿಶ್ವೇಶ್ವರಯ್ಯ, ಎಸ್.ವಿ. ಮಂಜುನಾಥ್.

ಸೇವಾದಲವನ್ನು ಕುರಿತು ಡಾ. ವೂಡೆ ಕೃಷ್ಣ ಅವರ ನುಡಿಯುವ ಮಾತುಗಳು ಗಮನಾರ್ಹವಾದವುಗಳಾಗಿವೆ. 'ಜೀವನ ಶೈಲಿಯಲ್ಲಿ ಮನುಷ್ಯ ಯಾವುದಾದರೂ ಸಂಸ್ಥೆಯ ಜೊತೆ ಸಂಪರ್ಕ ಇಟ್ಟುಕೊಂಡು ಅದರ ಕಾರ್ಯಗಳಲ್ಲಿ ಕಿಂಚಿತ್ತು ನೆರವಿನ ಸಹಕಾರ ನೀಡುವುದು ವಿಶಾಲ ಮನೋಭಾವನೆಯ ವ್ಯಕ್ತಿತ್ವ. ತನ್ನನ್ನು ಸುಧಾರಿಸಿಕೊಳ್ಳುತ್ತ ತನ್ನಲ್ಲಿನ ಹೊಸತನವನ್ನು ಇನ್ನೊಬ್ಬರ ಜೀವನದಲ್ಲಿ ಸುಖವನ್ನು ತರುವವ ನಿಜವಾದ ಮಾನವ. ಅಂತಹ ಯೋಗ್ಯ ಸಂಸ್ಥೆಗಳಲ್ಲಿ ಭಾರತ ಸೇವಾದಲ ಸಹ ಒಂದು. ಇದರ ಸೇವೆಯಲ್ಲಿ ಐಕ್ಯತೆಯಿಂದ ಕೈ ಜೋಡಿಸಿ ಒಗ್ಗಟ್ಟಿನ ಶಕ್ತಿ ಬಿಂಬಿಸುವುದು ನಮ್ಮೆಲ್ಲರ ಕಾಯಕಲ್ಪ' (ಪು 59). ಇದು ಕೃಷ್ಣ ಅವರ ಸಾಮಾಜಿಕ ಧ್ಯೇಯ ಮತ್ತು ಬದ್ಧತೆಯನ್ನು ಕುರಿತ ಮಾತುಗಳಾಗಿವೆ. ಮಾನವನಾದವನು ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯವಾಗುವ ಮೂಲಕ ಸಾಮಾಜಿಕ ಸೇವೆಯಲ್ಲಿ ನಿರತವಾಗಲು ಅವಕಾಶವಿದೆ ಎಂಬುದನ್ನು ವಿವರಿಸುತ್ತಾರೆ.

ಶಿಕ್ಷಣದ ಬಗ್ಗೆ ಇರುವ ನಿಲುವು ಮತ್ತು ಆಸಕ್ತಿಗಳನ್ನು ಅವರು ಭಾಷಣಗಳಲ್ಲಿ ವ್ಯಕ್ತಪಡಿಸುತ್ತಾರೆ. ಶಿಕ್ಷಣದ ತುರ್ತು ಯಾವ ಬಗೆಯಲ್ಲಿರ ಬೇಕೆಂದು ಹಲವಾರು ಮಾತುಗಳನ್ನು ಅವರು ಉಲ್ಲೇಖಿಸುತ್ತಾರೆ. "ಜಗತ್ತಿನಾದ್ಯಾಂತ ಮಕ್ಕಳು ಶಾಲೆಗೆ ನಡೆದು ಹೋಗುತ್ತಾರೆ ಮತ್ತು ಮನೆಗೆ ಓಡುತ್ತಾ ಬರುತ್ತಾರೆ. ಈ ಮನೋಭಾವವನ್ನು ಬದಲಾಯಿಸುವ ಹೊಣೆ ಎಲ್ಲಾ ಶಿಕ್ಷಕರದ್ದು ಎಂಬುದು ನನ್ನ ಭಾವನೆ.' ನ್ಯಾಯವಾದಿ ಫಾಲ್ಕೀವಾಲಾ ಅವರು ಹೇಳುವಂತೆ ಪ್ರಖರ ನಾಗರೀಕರನ್ನು ಕಾರ್ಖಾನೆಗಳಲ್ಲಿ ತಯಾರಿಸಲಾಗುವುದಿಲ್ಲ. ಶಿಕ್ಷಣದ ಮೂಲಕವೇ ಬರಬೇಕು." ಈ ಮಾತುಗಳು ಇಂದಿನ ಶಿಕ್ಷಣದ ನೀತಿ, ಸ್ಥಿತಿ ಮತ್ತು

ಶಿಕ್ಷಣಕ್ರಮ ಬದಲಾಗಬೇಕಾದ ಅಗತ್ಯವನ್ನು ಅವರು ವಿವರಿಸುತ್ತಾರೆ. ಶಿಕ್ಷಣ ಅಕ್ಷರ ಕಲಿಸಿದರೆ, ಕೊರತೆಯಾದ ವ್ಯಕ್ತಿತ್ವವನ್ನು ಕಟ್ಟುವ, ಅತ್ಯುತ್ತಮವಾದ ನೈತಿಕ ಪಾತಳಿಯಲ್ಲಿ ಸಮಾಜವನ್ನು ಕಟ್ಟುವ ಸಾಧನವಾಗಬೇಕು ಎಂಬ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ.

ಇಡೀ ಕೃತಿಯು ಗಾಂಧೀಜಿ ಅವರ ತತ್ವಗಳನ್ನು, ಆ ತತ್ವಗಳ ಪ್ರಯೋಗಗಳನ್ನು ನಿರೂಪಿಸುತ್ತದೆ. ಗಾಂಧೀಜಿಯವರ ವಿಚಾರಗಳು ಈ ಕೃತಿಯಲ್ಲಿನ ಬಹುಪಾಲು ವ್ಯಕ್ತಿಗಳಲ್ಲಿ ಅಂತರ್ಗತವಾಗಿವೆ. ಅಂತಹ ವ್ಯಕ್ತಿಗಳ ಸಾಧನೆಗಳನ್ನು ಈ ಕೃತಿ ವಿವರಿಸುತ್ತದೆ. ಬೆಳ್ಳಕ್ಕಿಗಳ ಸ್ವಾತಂತ್ರ್ಯ, ಆಕಾಶದೆತ್ತರಕ್ಕೆ ಹಾರುವ ಅವುಗಳ ಶಕ್ತಿಯಂತೆಯೇ ಮಿನುಗುವ ಕೆಲವು ವ್ಯಕ್ತಿತ್ವಗಳು ಈ ಕೃತಿಯಲ್ಲಿ ಅನಾವರಣಗೊಂಡಿವೆ. ಸುಲಲಿತವಾದ ಕನ್ನಡದಲ್ಲಿ ಸ್ಫುಟವಾಗಿ ಕಟ್ಟಿಕೊಟ್ಟಿರುವ ಇಲ್ಲಿನ ವಿಚಾರಗಳು ವರ್ತಮಾನದ ಸವಾಲುಗಳಿಗೆ ಪರ್ಯಾಯಗಳನ್ನು ಸೂಚಿಸುವಲ್ಲಿಯೂ ನಮ್ಮನ್ನು ಕಾಡುತ್ತವೆ.

(ವಿಮರ್ಶೆಯ ಆಯ್ದ ಭಾಗ)

* * *



* ನದಿಯಂತೆ ನೆನಪು

ಡಾ. ವೂಡೇ ಪಿ. ಕೃಷ್ಣ ಅವರ ನೆನಪುಗಳು

ನಿರೂಪಣೆ : ವಿನಯ ಭಟ್

ಡಾ. ವೂಡೇ ಪಿ. ಕೃಷ್ಣ ಅವರ 'ನದಿಯಂತೆ ನೆನಪು' ಒಂದು ಆತ್ಮಕಥನದ ಗುಣವುಳ್ಳ ಅನುಭವ ಕಥನ. ಮೂಲತಃ ವೃತ್ತಿಯಲ್ಲಿ ಇಂಜಿನಿಯರ್ ಆದ ಅವರು ತಮ್ಮ ಕ್ಷೇತ್ರದ ಸಾಧನೆಗಳ ಜೊತೆ ಜೊತೆಗೇ ಬಹುಮುಖಿ ಅಧ್ಯಯನವನ್ನು ಮೈಗೂಡಿಸಿಕೊಂಡು ಕಾನೂನು, ಸಮಾಜಶಾಸ್ತ್ರ, ಮ್ಯಾನೇಜ್‌ಮೆಂಟ್‌ನಲ್ಲಿ ಉನ್ನತ ಪದವಿಗಳನ್ನು ಗಳಿಸಿ ವಿದ್ಯೆಯ ಪರ್ವತವೇ ಆಗಿ ಶಿಕ್ಷಣ ತಜ್ಞರೆನಿಸಿ ಕೊಂಡವರು. ಇದೀಗ ಶೇಷಾದ್ರಿಪುರಂ ಶಿಕ್ಷಣ ದತ್ತಿಯಂತಹ ಮಹಾನ್ ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುವ ಗುರುತರ ಜವಾಬ್ದಾರಿಯನ್ನು ಹೊತ್ತ ಸೂತ್ರಧಾರಿಯೂ ಆಗಿದ್ದಾರೆ.

ಶಿಕ್ಷಣ– ಕೃಷ್ಣ ಅವರ ವೃತ್ತಿ ಜೀವನದ ಮುಖವನ್ನು ಅನಾವರಣ ಮಾಡಿದರೆ, ಸೇವೆ– ಅವರಲ್ಲಿ ಹುದುಗಿರುವ ಪ್ರವೃತ್ತಿಯ ಇನ್ನೊಂದು ಮುಖವನ್ನು ದರ್ಶನ ಮಾಡಿಸುತ್ತದೆ. ಅವರು ಸೇವೆಯಲ್ಲಿ ತೊಡಗಿಕೊಂಡ ರೆಡ್‌ಕ್ರಾಸ್, ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಭಾರತ ಸೇವಾದಲ, ಭಾರತೀಯ ಕ್ಷಯರೋಗ ಸಂಸ್ಥೆ, ಇಂಜಿನಿಯರ್ಸ್ ಸಂಸ್ಥೆ, ಧಾರ್ಮಿಕ ಸಂಸ್ಥೆಗಳ ಗೌರವ ಸ್ಥಾನಗಳು ಅವರ ನಿಸ್ವಾರ್ಥ, ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ.

ಐವತ್ತರ ಕಿರಿ ವಯಸ್ಸಿಗೆ ಹಿರಿದನ್ನು ಸಾಧಿಸಿರುವ ಅವರ ಅನುಭವದ ಗಣಿ ಬಹಳ ದೊಡ್ಡದು. ಅಲ್ಲಿಯ ಕೆಲವು ಮುತ್ತು ರತ್ನಗಳನ್ನಷ್ಟೇ ಇಲ್ಲಿ ಬಿಚ್ಚಿಟ್ಟಿದ್ದಾರೆ. ತಮ್ಮನ್ನು ರೂಪಿಸಿದ, ಪ್ರಭಾವಿಸಿದ ನೆನಪುಗಳ ಮೆರವಣಿಗೆ ಇಲ್ಲಿ ನಡೆದಿದೆ. ಆದರೆ ಅವರ ಬದುಕಿನ ಉತ್ತರಾರ್ಧದಲ್ಲಿ ಅವರ ಸಾಧನೆಗೆ ಒಲಿದು ಬಂದ ಪ್ರಶಸ್ತಿಗಳ ಬಗ್ಗೆ, ದೊರೆತ ಗೌರವಗಳ ಬಗ್ಗೆ ಮೌನವಾಗಿರುವುದನ್ನು ಗಮನಿಸಿದರೆ ಅವರಿಂದ ಬರಲಿರುವ ಮತ್ತೊಂದು ಆತ್ಮವೃತ್ತಾಂತಕ್ಕೆ ಇದು ಮುನ್ನುಡಿಯಂತಿದೆ.

(ಬೆನ್ನುಡಿ)

ಡಾ. ಮೀರಾಸಾಬಿಹಳ್ಳಿ ಶಿವಣ್ಣ

* * *

ನದಿಯಂತೆ ನೆನಪು : ಅನುಭವದ ಗುಣಪಾಠ ಮತ್ತು ಸಾಧನೆ

ಪ್ರೊ. ಡಿ. ಅಂಜನಪ್ಪ ಚಳ್ಳಕೆರೆ

ವಿನಯ್ ಭಟ್ ನಿರೂಪಣೆಯ ಸಮಾಜ ಸೇವಕ, ಗಾಂಧೀವಾದಿ, ಶಿಕ್ಷಣ ಶಿಲ್ಪಿ ಡಾ. ವೂಡೇ ಪಿ.ಕೃಷ್ಣ ಅವರ ಐವತ್ತರ ನೆನಪುಗಳ ಪುಟ್ಟ ಕೃತಿಯೇ 'ನದಿಯಂತೆ ನೆನಪು'. ನದಿ ಹರಿದಷ್ಟು ಗುರುತುಗಳನ್ನು ಉಳಿಸುತ್ತಾ ಹೋದ ಹಾಗೆ ವ್ಯಕ್ತಿಯ ಬದುಕು ಮುಂದುವರಿದಂತೆಲ್ಲಾ ನೆನಪುಗಳ ಜಾಡು ಹಿಂದೆಯೇ ಬರುತ್ತಿರುತ್ತದೆ. ನದಿ ಮತ್ತು ನೆನಪುಗಳಿಗೆ ಇರುವ ಸಾಮ್ಯತೆಯೆಂದರೆ ಅವೆರಡೂ ಬಿಟ್ಟುಹೋಗುವ ಗುರುತುಗಳು. ನದಿಗೆ ಒಂದೇ ಬಗೆಯ ನೇರ ನಡೆ ಇರುವುದಿಲ್ಲ. ನದಿಗೆ ಹಲವು ತಿರುವುಗಳಿರುತ್ತವೆ, ಉಗ್ಗು ಬಂದ ಕಡೆಗೆಲ್ಲಾ ಹರಿಸುತ್ತದೆ. ಪ್ರಕೃತಿಗನುಗುಣವಾಗಿ ಹರಿಯುತ್ತಿರುತ್ತದೆ. ಋತುಮಾನಕ್ಕನುಗುಣವಾಗಿ ಚಲಿಸುತ್ತದೆ. ನದಿಗೆ ಏಕತಾನತೆ ಇರುವುದಿಲ್ಲ, ಅದಕ್ಕೆ ಮೈಯೆಲ್ಲಾ ಕಾಲು. ಅದರದೇ ಆದ ನಡಿಗೆಯಿದೆ, ಲಾಲಿತ್ಯವಿದೆ, ತನ್ನದೇ ಆದ ಸ್ವಂತಿಕೆಯ ಗುರುತಿದೆ. ಅದು ಹಲವು ನೀರಿನ ಝರಿಗಳನ್ನು ಸೇರಿಸಿಕೊಳ್ಳುತ್ತದೆ, ತುಂಬಿ ಸಮೃದ್ಧವಾಗಿ ಹರಿಯುತ್ತದೆ. ಕೊನೆಗೊಮ್ಮೆ ಸಮುದ್ರದಲ್ಲಿ ತನ್ನ ಎಲ್ಲ ಗುರುತುಗಳನ್ನೂ ವಿಸರ್ಜನೆ ಮಾಡಿಬಿಡುತ್ತದೆ. ಹರಿವ ನದಿ ವಿಶಾಲವಾದ ಸಾಗರದಲ್ಲಿ ಲೀನವಾಗುತ್ತದೆ, ಸಾರ್ಥಕತೆಯನ್ನು ಪಡೆಯುತ್ತದೆ. ಬದುಕು ಹಾಗಾಗಬೇಕಾಗಿದೆ. ಬದುಕು ನದಿಯಂತೆಯೇ ಒಂದು ರೂಪಕವಾಗಿದೆ. ಹರಿದ ನದಿ ಗುರುತುಗಳನ್ನು ಬಿಟ್ಟು ಹೋದಂತೆ ಮನುಷ್ಯನ ಬದುಕಿನ ನೆನಪುಗಳು ಉಳಿಯುತ್ತವೆ. ಅಂತಹ ನೆನಪುಗಳನ್ನು ಅಕ್ಷರದಲ್ಲಿ ಮೂಡಿಸಿದೆ 'ನದಿಯಂತೆ ನೆನಪು' ಕೃತಿ.

ನದಿ ತನ್ನ ಹೆಜ್ಜೆ ಗುರುತು ಮೂಡಿಸುವಂತೆ ವೂಡೇ ಪಿ. ಕೃಷ್ಣ ಅವರು ಕೂಡ ಬದುಕಿನಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಅವರು ಸಾಧನೆಯ ಹೆಜ್ಜೆಗುರುತುಗಳನ್ನು ಮೂಡಿಸುವುದಕ್ಕೆ ಅವರ ಬದುಕಿನ ಅನುಭವಗಳು ಮತ್ತು ಅದರ ನೆನಪುಗಳೇ ಕಾರಣವಾಗಿವೆ. ಬದುಕನ್ನು ಸುಂದರವಾಗಿ, ಆರೋಗ್ಯಪೂರ್ಣವಾಗಿ ಕಟ್ಟಿಕೊಳ್ಳಲು ಬೇಕಾದ ಒಳ್ಳೆಯ ನೆನಪುಗಳನ್ನು ಸದಾ ಜೊತೆಗಿಟ್ಟುಕೊಂಡಿದ್ದಾರೆ. ವೂಡೇ ಪಿ. ಕೃಷ್ಣ ಅವರು ಮಾತ್ರವಲ್ಲ, ಈ ನೆನಪುಗಳು ಇತರರಿಗೂ ಅಗತ್ಯವಾದ, ಅವರ ಬದುಕಿನ ಹಾದಿಯಲ್ಲಿ ಮೆಟ್ಟಿಲುಗಳಾಗುವಂತಹ ನೆನಪುಗಳನ್ನು ಈ ಕೃತಿಯಲ್ಲಿ ಮೆಲುಕುಹಾಕಿದ್ದಾರೆ.

ನೆನಪುಗಳಿಗೆ ಇರುವ ಗುಣ ಮತ್ತು ಮಿತಿಗಳೆರಡೂ ಇವೆ. ನೆನಪು ವರ ಮತ್ತು ಶಾಪ, ಈ ಎರಡೂ ಆಗುವ ಸಾಧ್ಯತೆಗಳಿರುತ್ತವೆ. ಒಳ್ಳೆಯ ನೆನಪುಗಳಿಗೆ ಬದುಕನ್ನು ಅರಳಿಸುವ ಗುಣ ಯಾವಾಗಲೂ ಇರುತ್ತದೆ. ಸಾಮಾಜಿಕ ಕಳಕಳಿಯ ಡಾ. ವೂಡೇ ಪಿ. ಕೃಷ್ಣ ಅವರು ಅನುಭವದ ಮೂಲಕವೇ ಬದುಕಿನ ಗುಣಪಾಠಗಳನ್ನು ಕಲಿತವರು, ಅದನ್ನು ವರವನ್ನಾಗಿ ರೂಪಾಂತರಿಸಿ ಕೊಂಡವರು. ಅನುಭವಗಳ ನೆನಪುಗಳಿಗೆ ಬೆಲೆಕೊಟ್ಟು ನಡೆದವರು. ಹಾಗಾಗಿ ಅವರನ್ನು ಅವರ ಹಿರಿಯರು ಹಾಕಿಕೊಟ್ಟ ನೆನಪುಗಳು ಮುನ್ನಡೆಸಿವೆ. ಅವರು ಏರಿದ ಎತ್ತರಗಳ ಬುನಾದಿಯಲ್ಲಿ ಅವರ ನೆನಪುಗಳ ಅನುಭವಗಳಿವೆ. ಅವರಿಗೆ ಅವು ಯಶಸ್ಸಿನ ಏಣಿಯಾಗಿವೆ, ಅವನ್ನು ಅವರು ನಂಬಿದ್ದಾರೆ. ಅವುಗಳು ಅವರನ್ನು ಕೈಬಿಟ್ಟಿಲ್ಲ ಎಂಬುದಕ್ಕೆ ಅವರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಏರಿದ ಎತ್ತರಗಳೇ ಸಾಕ್ಷಿ.

ನದಿಯಂತೆ ನೆನಪು ಕೃತಿಯ ಬಹುಮುಖ್ಯ ಭಾಗ 'ಆಶ್ರಮದ ನೆನಪುಗಳು'. ವೂಡೇ ಪಿ. ಕೃಷ್ಣ ಅವರು ರಾಮಕೃಷ್ಣ ಆಶ್ರಮದಲ್ಲಿನ ಶಿಕ್ಷಣ ಮತ್ತು ಅಲ್ಲಿನ ಶಿಕ್ಷಣ ಕ್ರಮಗಳು ಬದುಕಿಗೆ ಏನನ್ನು ಕಲಿಸಿಕೊಟ್ಟವು ಎಂಬದನ್ನು ನೆನಪಿಸಿಕೊಳ್ಳುತ್ತಾರೆ. ಆಶ್ರಮ ಎಂದರೆ ತುಂಬಾ ಕಟ್ಟುನಿಟ್ಟು, ಧಾರ್ಮಿಕವಾಗಿ ಮಾತ್ರ ಬೆಳೆಸಲಾಗುತ್ತದೆ ಮತ್ತು ಆ ಬಗೆಯ ಶಿಕ್ಷಣವನ್ನು ಮಾತ್ರ ಕೊಡಲಾಗುತ್ತದೆ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಆದರೆ ರಾಮಕೃಷ್ಣಾಶ್ರಮವು ಅದಕ್ಕಿಂತ ಭಿನ್ನವಾಗಿದೆ. ವಿದ್ಯಾರ್ಥಿಗಳಿಗೆ ಆಶ್ರಮದ ಒಳಗಿನ ಕ್ರಮಗಳು ಮಾತ್ರವಲ್ಲ ಹೊರಗಿನ ಪ್ರಪಂಚ ಹೇಗಿದೆ ಎಂಬ ವಾಸ್ತವಗಳನ್ನೂ ಕಲಿಸುತ್ತಿತ್ತು ಎಂಬುದನ್ನು ಕೃಷ್ಣ ಅವರು ವಿವರಿಸುತ್ತಾರೆ.

ಕುವೆಂಪು ಅವರನ್ನು ಕುರಿತ ನೆನಪುಗಳು ಕೃಷ್ಣ ಅವರಿಗೆ ಅತ್ಯಂತ ಅವಿಸ್ಮರಣೀಯವಾದವುಗಳು. ಆ ನೆನಪುಗಳು ಕುವೆಂಪು ಅವರನ್ನೂ ವಿಶಿಷ್ಟವಾಗಿ ಕಾಣಿಸಲು ಸಹಕಾರಿಯಾಗಿವೆ.

'ಡಾ. ಎಚ್. ನರಸಿಂಹಯ್ಯ ಅವರು ಹಲವು ವಿಚಾರಗಳಿಗೆ, ಸೇವೆಗೆ ಮತ್ತು ಬದುಕಿನ ಬದ್ಧತೆಗೆ ಮಾದರಿಯಾದವರು. ಅವರು ಡಾ. ವೂಡೇ ಅವರ ಜವಾಬ್ದಾರಿಯನ್ನು, ಅದನ್ನು ನಿರ್ವಹಿಸಬೇಕಾದುದನ್ನು ಕುರಿತು ಹೇಳುವ

ಮಾತುಗಳಿವು– 'ನೋಡಪ್ಪ, ಅಂತ ದೊಡ್ಡ ಸಂಸ್ಥೆ ನಡೆಸಬೇಕಾದರೆ ನೀನು ಮೊದಲು ಕಲಿತುಕೊಳ್ಳಬೇಕಾದ್ದು ಬೈಸಿಕೊಳ್ಳುವುದನ್ನು! ಇದನ್ನು ನೀನು ಕಲಿತುಕೊಂಡರೆ, ನೀನು ಸಂಸ್ಥೆಯನ್ನು ಚೆನ್ನಾಗಿ ನಿಭಾಯಿಸಬಲ್ಲೆ. ಬೈಯುವವರು ವೈಯಕ್ತಿಕವಾಗಿ ನಿನ್ನನ್ನು ಬೈಯುವುದಿಲ್ಲ. ಆ ಕುರ್ಚಿಯಲ್ಲಿ ಯಾರು ಕುಳಿತಿದ್ದರೂ ಅವರನ್ನು ಬೈಯುತ್ತಾರೆ. ಏಕೆಂದರೆ ಎಲ್ಲರನ್ನೂ ನೀನು ತೃಪ್ತಿಪಡಿಸಲು ಸಾಧ್ಯವಿಲ್ಲ.'

ಡಾ. ವೂಡೇ ಪಿ.ಕೃಷ್ಣ ಅವರಿಗೆ ಅವರ ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನಗಳು ಅತ್ಯಂತ ಮಹತ್ವದವುಗಳಾಗಿವೆ. ಅವುಗಳನ್ನು ಅವರು ಈ ಕೃತಿಯುದ್ದಕ್ಕೂ ನೆನಪಿಸಿಕೊಳ್ಳುತ್ತಾರೆ. ಕುಟುಂಬ, ಸಂಬಂಧಗಳು ಮತ್ತು ಸಾಮಾಜಿಕ ಜೀವನದಲ್ಲಿ ನಿರ್ವಹಿಸಬೇಕಾದ ಮೌಲ್ಯಗಳನ್ನು ಕುರಿತು ಕಲಿಸಿದ್ದಾರೆ. ಅವರ ತಾತ ಡಬ್ಲ್ಯು.ಎಚ್. ಹನುಮಂತಪ್ಪ ನವರು ಹೇಳುತ್ತಿದ್ದ ಅಮೂಲ್ಯ ಮಾತುಗಳನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ. 'ನಮ್ಮ ಮನೆಗೆ ಯಾರೇ ಏನೇ ಕೇಳಿಕೊಂಡು ಬಂದರೂ ಅವರನ್ನು ಬರಿಗೈಲಿ ಕಳಿಸಬಾರದು. ಅವರು ಹತ್ತು ಕೇಳಿದರೆ ಒಂದಾದರೂ ಕೊಟ್ಟು ಕಳಿಸಬೇಕು. ಎರಡನೆಯದಾಗಿ, ನಮಗೆ ಹೆಣ್ಣು ಕೊಟ್ಟ ಮನೆಯವರನ್ನು ಅಯ್ಯೋ ಎನ್ನಿಸಬಾರದು. ನಮ್ಮ ಮನೆಗೆ ಬಂದ ಹೆಣ್ಣುಮಗಳನ್ನೂ ನಾವು ಚೆನ್ನಾಗಿ ನೋಡಿಕೊಳ್ಳಬೇಕು.'

ವೂಡೇ ಪಿ. ಕೃಷ್ಣ ಅವರ ಬದುಕಿಗೆ ಅವರ ಸಾಧನೆಗಳ ಜೀವನಕ್ಕೆ ಹಲವರು ಪ್ರಭಾವ ಬೀರಿದ್ದಾರೆ. ಅವರಲ್ಲಿ ಮಹಾತ್ಮ ಗಾಂಧೀಜಿ ಪ್ರಮುಖರಾಗಿದ್ದಾರೆ. ಗಾಂಧೀಜಿ ಅವರ ವಿಚಾರವನ್ನು ಪ್ರತಿಪಾದಿಸುವ, ಯಾವುದೇ ವಿಚಾರಗಳನ್ನು ಅವರು ಸ್ವೀಕರಿಸಲು ಮುಂದಾಗುತ್ತಾರೆಂಬುದನ್ನು ಅನೇಕ ಘಟನೆಗಳಲ್ಲಿ ಕಾಣಬಹುದು.

ಬದುಕಿಗೆ ಬೇಕಾದುದನ್ನು, ಬೇಕಾಗುವಷ್ಟು ಅನುಭವಗಳನ್ನು ಸದಾ ಮನಸ್ಸಿನ ಮುನ್ನಲೆಯಲ್ಲಿಟ್ಟುಕೊಂಡಿರುವುದರಿಂದ ಅವರ ನೆನಪುಗಳು ಹಸಿರಾಗಿವೆ. ಆ ನೆನಪುಗಳಿಗೆ ಮೌಲ್ಯಗಳಿವೆ. ಅತ್ಯುತ್ತಮ ಸಾಂಸ್ಕೃತಿಕ ಬದುಕಿಗೆ ಬೇಕಾದ ನೆನಪುಗಳನ್ನು ತಮ್ಮ ಮನಸ್ಸಿನ ಪ್ರಜ್ಞೆಯಲ್ಲಿಟ್ಟುಕೊಂಡಿರುವ ಡಾ. ವೂಡೇ ಪಿ. ಕೃಷ್ಣ ಅವರ ಮಾತುಗಳು ನೈತಿಕ ಅಚ್ಚುಕಟ್ಟುತನದ ಮಾತುಗಳು. ಆ ಮಾತುಗಳು ಬದುಕಿಗೆ ಬೆಳಕು ನೀಡುವ ನೈತಿಕ ಶಕ್ತಿಯನ್ನು ಪಡೆದಿವೆ.

ಡಾ. ವೂಡೆ ಪಿ. ಕೃಷ್ಣ ಅವರು ಹೇಳಿರುವ ಅವರದೇ ಆದ ಶೈಲಿಯ ನೆನಪಿನ ಮಾತುಗಳನ್ನು ವಿನಯ್ ಭಟ್ ಅವರು ಸೃಜನಶೀಲ ಸಹೃದಯತೆಯಲ್ಲಿ ನಿರೂಪಿಸಿದ್ದಾರೆ, ಸರಳವಾಗಿ, ಚೊಕ್ಕವಾಗಿ ವಿವರಿಸಿದ್ದಾರೆ. ನೆನಪಿನ ಬುತ್ತಿಯ ಮಾತುಗಳನ್ನು, ಅನುಭವಗಳನ್ನು ವಿನಯ್ ಭಟ್ ಅವರು ಕೇವಲ ಕೇಳಿಸಿಕೊಳ್ಳದೆ, ಅವುಗಳನ್ನು ಅನುಭವಿಸಿದ ಅನುಭವಾತ್ಮಕ ನೆಲೆಯಲ್ಲಿ ನಿರೂಪಿಸಿರುವುದರಿಂದ ಇದರ ಒಟ್ಟು ಬರವಣಿಗೆಗೆ ನೈತಿಕ ನೆಲೆಗಟ್ಟು ಪ್ರಾಪ್ತವಾಗಿದೆ.

(ವಿಮರ್ಶೆಯ ಆಯ್ದ ಭಾಗ)

‘ನದಿಯಂತೆ ನೆನಪು’ ಕೃತಿಯ ಆಯ್ದ ಭಾಗ

ಟರ್ನಿಂಗ್ ಪಾಯಿಂಟ್

1975ರಲ್ಲಿ ನಾನು ಮೈಸೂರಿನ ರಾಮಕೃಷ್ಣ ಆಶ್ರಮವು ನಡೆಸುವ ಹೆಸರಾಂತ ಶ್ರೀರಾಮಕೃಷ್ಣ ವಿದ್ಯಾಶಾಲೆಗೆ ಪ್ರೌಢಶಾಲಾ ವಿದ್ಯಾಭ್ಯಾಸಕ್ಕಾಗಿ ಸೇರಿದೆ. 1978ರವರೆಗೆ ಅಲ್ಲಿ ನಾನು ವಿದ್ಯಾಭ್ಯಾಸ ಮಾಡಿದೆ. ನನ್ನ ಜೀವನದ ಒಂದು ಬಹುದೊಡ್ಡ ತಿರುವು ಎಂದರೆ ನಾನು ಆಶ್ರಮವನ್ನು ಸೇರಿದ್ದು ಎಂದು ಇಂದಿಗೂ ನಾನು ಅಂದುಕೊಳ್ಳುತ್ತೇನೆ. ನಾನು ಆಶ್ರಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಮಯದ ಕೆಲವು ಮರೆಯಲಾಗದ ಘಟನೆಗಳನ್ನು ನಾನಿಲ್ಲಿ ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ನಾನು ರಾಮಕೃಷ್ಣ ಆಶ್ರಮಕ್ಕೆ ಸೇರಿದ್ದೂ ಸಹ ಒಂದು ಆಕಸ್ಮಿಕ ಘಟನೆಯಿಂದ. ಬೆಂಗಳೂರಿನ ಹಳೆಪೇಟೆಯ ಕಿಲಾರಿ ರಸ್ತೆಯಲ್ಲಿ ಆಂಜನೇಯಸ್ವಾಮಿ ದೇವಸ್ಥಾನವಿದೆ. ಆ ದೇವಸ್ಥಾನದ ಸೇವಾ ಸಮಿತಿಯ ಕಾರ್ಯದರ್ಶಿ ನಮ್ಮ ತಂದೆಯವರಾಗಿದ್ದರು. ಅದರ ಅಧ್ಯಕ್ಷರು ಆರ್. ಮಾಸ್ತಿ ವೀರಣ್ಣನವರು. ಅವರು ರಾಮಕೃಷ್ಣ ಆಶ್ರಮದ ಪರಮ ಭಕ್ತರು. ನಾನು ಏಳನೇ ತರಗತಿ ಪರೀಕ್ಷೆ ಆಗತಾನೆ ಮುಗಿಸಿದ್ದೆ. ಒಂದು ಭಾನುವಾರ ಸಮಿತಿ ಸಭೆಗೆ ನನ್ನ ತಂದೆಯವರ ಜೊತೆ ಹೋಗಿದ್ದೆ. ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳಾದ ನಂತರ ಎಲ್ಲರೂ ಸೇವಾ ಸಮಿತಿ ಸಭೆಗೆ ಸೇರಿದ್ದರು. ಈ ಸಂದರ್ಭದಲ್ಲಿ ಮಾಸ್ತಿ ವೀರಣ್ಣನವರು ‘ಈ ಪುಟ್ಟ ಬಾಲಕ ಯಾರು?’ ಎಂದು ಕೇಳಿದರು. ನನ್ನ ತಂದೆಯವರು ‘ನನ್ನ ಮಗ’ ಎಂದು ಪರಿಚಯ ಮಾಡಿಕೊಟ್ಟರು. ಆಗ ಅವರು ‘ಏನು ಮಾಡುತ್ತಿದ್ದೀಯ?’ ಎಂದು ಕೇಳಿದರು. ‘ಏಳನೇ ತರಗತಿ ಪಾಸ್ ಆಗಿದ್ದೇನೆ. ಹೈಸ್ಕೂಲಿಗೆ ಹೋಗಬೇಕು’ ಎಂದು ನಾನು ಹೇಳಿದೆ. ಆಗ ಅವರು ನನ್ನ ತಂದೆಯನ್ನು ಉದ್ದೇಶಿಸಿ ಹೇಳಿದರು: ‘ಒಂದು ಕೆಲಸ ಮಾಡು, ನಿಮ್ಮ ಹುಡುಗನನ್ನು ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಸೇರಿಸಿಬಿಡು. ನನ್ನ ಮಗ ಶಶಿಭೂಷಣ್ ಈಗ ತಾನೆ ಎಸ್.ಎಸ್.ಎಲ್.ಸಿ. ಪಾಸಾಗಿ ಹೊರಗೆ ಬಂದಿದ್ದಾನೆ. ನಿನ್ನ ಮಗನನ್ನೂ ಅಲ್ಲಿಗೆ ಸೇರಿಸು. ಅವನಿಗೆ ಅಲ್ಲಿ ಉಜ್ವಲ ಭವಿಷ್ಯವಿರುತ್ತದೆ, ಚೆನ್ನಾಗಿ ಶಿಸ್ತು ಕಲಿತು ಅವನು ಮಾರ್ಪಾಟಾಗುತ್ತಾನೆ’.

ಅವರ ಮಾತಿನಂತೆ ತಕ್ಷಣವೇ ತಂದೆಯವರು ರಾಮಕೃಷ್ಣ ಆಶ್ರಮಕ್ಕೆ ಪತ್ರ ಬರೆದು, ಅರ್ಜಿ ತರಿಸಿಕೊಂಡು, ನನಗೆ ಅಲ್ಲಿ ಸೇರಲು ಅನುವು ಮಾಡಿಕೊಟ್ಟರು. ನಾನು ಮಾಸ್ತಿ ವೀರಣ್ಣರವರನ್ನು ನನ್ನ ಜೀವನದಲ್ಲಿ ಮರೆಯುವಂತೆಯೇ ಇಲ್ಲ. ನಾನು ನಮ್ಮ ತಂದೆಯವರ ಜೊತೆ ಅಂದು ದೇವಸ್ಥಾನದ ಸಭೆಗೆ ಹೋಗಿ ಕುಳಿತಿದ್ದು, ನನ್ನ ಬದುಕಿಗೇ ಒಂದು ಟರ್ನಿಂಗ್ ಪಾಯಿಂಟ್ ಆಯಿತು. ಹಿರಿಯರು ಹೇಗೆ ನಮ್ಮ ಬದುಕನ್ನು ಬದಲಾಯಿಸಬಲ್ಲರು ಹಾಗೂ ಒಂದು

ಘಟನೆ ಒಬ್ಬ ವ್ಯಕ್ತಿಯ ಬದುಕಿನಲ್ಲಿ ಯಾವ ರೀತಿ ತಿರುವು ತರಬಲ್ಲದು ಎನ್ನುವುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

* * *

ಕಾಯಕದ ಮಹತ್ವ

ರಾಮಕೃಷ್ಣ ಆಶ್ರಮದ ವಿದ್ಯಾರ್ಥಿಯಾಗಿದ್ದಾಗಿನ ಇನ್ನೊಂದು ಪ್ರಸಂಗ ಬಹಳ ಕುತೂಹಲಕಾರಿಯಾದದ್ದು. ನಾನು ಆಗ ಒಂಭತ್ತನೆಯ ತರಗತಿಯ ವಿದ್ಯಾರ್ಥಿಯಾಗಿದ್ದೆ. ನಮ್ಮ ಶಾಲಾ ಸಮವಸ್ತ್ರ ಖಾಕಿ ಪ್ಯಾಂಟ್ ಮತ್ತು ನೀಲಿ ಅಂಗಿ. ಒಮ್ಮೆ ನಾವು ರೈಲಿನ ಮೂಲಕ ಬೆಂಗಳೂರಿಗೆ ಬರುವುದೆಂದು ಏರ್ಪಾಟಾಗಿತ್ತು. ಅದಕ್ಕಾಗಿ ಮೈಸೂರು ರೈಲ್ವೇ ಸ್ಟೇಶನ್‌ಗೆ ಬಂದೆವು. ಅಲ್ಲಿ ಪ್ರಯಾಣಿಕರಾಗಿದ್ದ ಗಂಡ ಹೆಂಡತಿ, ನಾನು ಖಾಕಿ ಪ್ಯಾಂಟ್ ಹಾಕಿದ್ದು ನೋಡಿ ಪ್ರಾಯಶಃ ಒಬ್ಬ ಪೋರ್ಟರ್ ಇರಬೇಕೆಂದು ತಿಳಿದುಕೊಂಡರು. 'ಬಾ, ಬ್ಯಾಗ್ ತೆಗೆದುಕೋ' ಎಂದು ಕರೆದರು. ನಾನು ಅವರ ಬ್ಯಾಗ್‌ನ್ನು ತೆಗೆದುಕೊಂಡು ಅವರ ಬೋಗಿಯ ಸೀಟಿನಲ್ಲಿ ಇಟ್ಟೆ. ನಂತರ ಅವರು ಕೂಲಿ ರೂಪದಲ್ಲಿ ನನಗೆ ಹಣ ಕೊಡಲು ಬಂದರು. ಆಗ ನಾನಂದೆ 'ಇಲ್ಲ ನಾನು ರಾಮಕೃಷ್ಣ ಆಶ್ರಮದ ವಿದ್ಯಾರ್ಥಿ. ನಮ್ಮ ಯೂನಿಫಾರಂ ಇದು'. ಆಗ ಅವರು ಬಹಳ ಪಶ್ಚಾತ್ತಾಪ ಪಟ್ಟು 'ಗೊತ್ತಾಗಲಿಲ್ಲ, ಎಂಥಾ ತಪ್ಪು ಮಾಡಿಬಿಟ್ಟೆ, ವಿದ್ಯಾರ್ಥಿನಾ ನೀವು? ನಾನು ಪೋರ್ಟರ್ ಎಂದು ತೀಳಿದು ಕರೆದು ಬಿಟ್ಟೆ', ಎಂದರು! ನಾನು ನಗುತ್ತಾ ಹಿಂತಿರುಗಿದೆ.

* * *

ಪ್ರಾಮಾಣಿಕತೆ

ನಾನು ಶೇಷಾದ್ರಿಪುರಮ್ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ನನ್ನ ತಂದೆಯವರು ನನ್ನನ್ನು ಕರೆದು ಒಂದು ಕಿವಿಮಾತು ಹೇಳಿದರು. "ನಾವೆಲ್ಲ ವ್ಯಾಪಾರ ಮಾಡುತ್ತಿರುತ್ತೇವೆ. ನಿಮ್ಮ ಕಾಲೇಜಿಗೆ ಬೇಕಾಗುವಂಥ ಯಾವುದೇ ವಸ್ತುಗಳನ್ನು ನಮ್ಮ ವ್ಯಾಪಾರ ಸಂಸ್ಥೆಯಿಂದ ಖರೀದಿ ಮಾಡಕೂಡದು ಎಂದು ನೀನು ಆದೇಶ ಮಾಡಬೇಕು. ಯಾಕೆಂದರೆ ನೀನು ಅಲ್ಲಿಗೆ ಹೋಗುತ್ತಿರುವುದು ಸೇವೆ ಮಾಡಲಿಕ್ಕೆ. ನಮ್ಮ ವ್ಯಾಪಾರ ಸಂಸ್ಥೆಯೊಂದಿಗೆ ವ್ಯಾಪಾರ ವಹಿವಾಟನ್ನು ಇಟ್ಟುಕೊಳ್ಳಕೂಡದು ಎಂದು ಕಟ್ಟಾದೇಶವನ್ನು ಕೊಟ್ಟು ಬಿಡು" ಎಂದು ಆದೇಶಿಸಿದರು.

ನಮ್ಮದು ಕಟ್ಟಡ ನಿರ್ಮಾಣದ ವಸ್ತುಗಳ ವ್ಯಾಪಾರವಿತ್ತು. ಸಿಮೆಂಟಿನಿಂದ ಹಿಡಿದು ಸ್ಯಾನಿಟರಿ ಸಾಮಾಗ್ರಿಗಳವರೆಗೆ ಎಲ್ಲವೂ ಅಲ್ಲಿ ಸಿಗುತ್ತಿತ್ತು. ತಂದೆಯ ಸೂಚನೆಯನ್ನು ಚಾಚೂ ತಪ್ಪದೆ ಪಾಲಿಸಿದ್ದರಿಂದಲೇ ಇಂದು ಯಾರೂ ಬೆರಳೆತ್ತಿ ನಮ್ಮ ಕಡೆಗೆ ತೋರಿಸಲು ಸಾಧ್ಯವಾಗುತ್ತಿಲ್ಲ. ಅವರು ಅಪಾರ ಅನುಭವದಿಂದ

ಹೇಳಿದಂಥ ಮಾತುಗಳಿವು: "ಎಲ್ಲಿ ನೀನು ಸೇವೆ ಮಾಡುತ್ತೀಯೋ ಅಲ್ಲಿ ನಮ್ಮ ವ್ಯಾಪಾರದ ಸೋಂಕು ಇರಬಾರದು." ಇದನ್ನು ನಾನು ಎಂದಿಗೂ ನೆನಪಿನಲ್ಲಿ ಇಟ್ಟುಕೊಂಡಿರುತ್ತೇನೆ.

* * *

ಕುವೆಂಪು ದರ್ಶನ

ಒಂದು ಸಲ ಶ್ರೀರಾಮಕೃಷ್ಣ ಜಯಂತಿ ಕಾರ್ಯಕ್ರಮ ನಮ್ಮ ಆಶ್ರಮದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವಿದ್ಯಾಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಸ್ವಯಂಸೇವಕರಾಗಿ ನೇಮಕ ಮಾಡಿದ್ದರು. ಆ ಸಂದರ್ಭದಲ್ಲಿ ಕುವೆಂಪುರವರನ್ನು ಮತ್ತು ಸ್ವಾಮಿ ಸೋಮನಾಥರವರನ್ನು ನೋಡಲು ಅಮೇರಿಕಾದ ಅತಿಥಿಯೊಬ್ಬರು ಬಂದಿದ್ದರು. ಅವರಿಗೆ ಕಾಫಿ ಕೊಟ್ಟು ಉಪಚರಿಸಲು ನಮಗೆ ಹೇಳಿದರು. ಆ ಸಮಯದಲ್ಲಿ ನಾವೊಂದು ವಿಶೇಷ ಸಂಗತಿಯನ್ನು ಗಮನಿಸಿದೆವು. ಕುವೆಂಪುರವರು ಆ ಅಮೇರಿಕನ್ ಭಕ್ತರೊಂದಿಗೆ ಅದ್ಭುತವಾದ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದರು. ಚಿಕ್ಕ ಮಕ್ಕಳಾದ ನಮ್ಮ ಆಲೋಚನೆಯ ಪ್ರಕಾರ ಕುವೆಂಪು ಒಬ್ಬ ಉತ್ತಮ ಕನ್ನಡ ಲೇಖಕ, ಆದ್ದರಿಂದ ಅವರಿಗೆ ಇಂಗ್ಲಿಷ್ ಬರುವುದಿಲ್ಲ ಎಂದು ನಾವು ಭಾವಿಸಿದ್ದೆವು ! ಆದರೆ ಅವರು ಅಷ್ಟು ಅದ್ಭುತವಾದ ಇಂಗ್ಲಿಷ್ ಮಾತನಾಡಿದ್ದನ್ನು ನೋಡಿ ನಾನು ಆಶ್ಚರ್ಯಚಕಿತನಾದೆ.

* * *

ವಿನೋಬಾ–ಕುವೆಂಪು

ಭೂದಾನ ಚಳುವಳಿಯ ಸಮಯದಲ್ಲಿ 1950ರ ದಶಕದಲ್ಲಿ ಮೈಸೂರಿನಲ್ಲಿ ಅವರು ಕುವೆಂಪು ಮತ್ತು ಆಚಾರ್ಯ ವಿನೋಬಾರವರನ್ನು ಎಸ್.ವಿ. ಮಂಜುನಾಥ್ ಭೇಟಿ ಮಾಡಿಸುತ್ತಾರೆ. ಆಗ ವಿನೋಬಾರವರು ಕುವೆಂಪುರವರಿಗೆ ಒಂದು ಪ್ರಶ್ನೆ ಹಾಕುತ್ತಾರೆ. 'ನಾವು ಎಪಿಕ್ಸ್ ಎಂದು ಕರೆಯುವ ರಾಮಾಯಣ ಮಹಾಭಾರತಗಳೆಲ್ಲ ಬಂದ ಮೇಲೆ ಇತ್ತೀಚಿಗೆ ಯಾವ ಎಪಿಕ್ಸ್‌ಗಳೂ ಬಂದಿಲ್ಲವಲ್ಲ ಯಾಕೆ?' ಎಂದು ಕೇಳುತ್ತಾರೆ. ಕುವೆಂಪುರವರು ಹೇಳುತ್ತಾರಂತೆ 'This is the age of epic men. Epics on them will come hundred years later' ಎಂದು. ಹಾಗೆ ಹೇಳುವಾಗ ಅವರ ಮನಸ್ಸಿನಲ್ಲಿ ಇದ್ದಿದ್ದು ಗಾಂಧೀಯಂತಹ ವ್ಯಕ್ತಿಗಳು. ಅವರ ಅಭಿಪ್ರಾಯದ ಪ್ರಕಾರ ಇಂಥವರ ಬಗ್ಗೆ Epicsಗಳು ನೂರಾರು ವರ್ಷಗಳ ನಂತರ ಬರುತ್ತವೆ. ಬುದ್ಧ ಸತ್ತ 300 ವರ್ಷದ ನಂತರ ಜನಗಳಿಗೆ ಅವನ ಬಗ್ಗೆ ಅರಿವು ಬಂತು. 300 ವರ್ಷದ ನಂತರ ಬುದ್ಧ ಮತ್ತೆ ಹುಟ್ಟಿ ಬಂದ. ಇಂಥಹ ವಿಶನ್ ಕುವೆಂಪುರವರದಾಗಿತ್ತು.

* * *

ಪುಸ್ತಕದ ಪ್ರಭಾವ

2008ರಲ್ಲಿ ನನ್ನನ್ನು ಅಮೆರಿಕಾದ ಅಕ್ಕ ಸಮ್ಮೇಳನಕ್ಕೆ ಆಹ್ವಾನಿಸಿದ್ದರು. ನಾನು ಹೋಗಿದ್ದೆ. ಅಕ್ಕ ಸಮ್ಮೇಳನದಲ್ಲಿ ಊಟ ಬಡಿಸುವಾಗ ಸ್ವಯಂ ಸೇವಕನಾಗಿದ್ದ ಯುವಕನೊಬ್ಬ ನನ್ನನ್ನು ಗುರುತಿಸಿದ. 'ಸರ್, ನೀವು ಶೇಷಾದ್ರಿಪುರಂ ಕಾಲೇಜಿನ ಸೆಕ್ರೆಟರಿ ಅಲ್ಲವೇ' ಎಂದು ಕೇಳಿದ. 'ಹೌದು' ಎಂದೆ. 'ಸರ್, ನಾನು ನಿಮ್ಮ ಪ್ರೌಢಶಾಲೆಯಲ್ಲಿ ಓದಿದ್ದು. ನೀವು ಸ್ವಾಮಿ ವಿವೇಕಾನಂದರ ಜಯಂತಿಯ ದಿವಸ ಸ್ವಾಮಿ ವಿವೇಕಾನಂದರ ಕುರಿತು ಒಂದು ಪುಸ್ತಕ ನನಗೆ ಕೊಟ್ಟಿದ್ದಿರಿ. ಬಹಳ ಒಳ್ಳೆಯ ಪುಸ್ತಕ. ನಾನು ಬರೋವಾಗ ನನ್ನ ಲಗೇಜ್‌ನ ಜೊತೆ ಆ ವಿವೇಕಾನಂದರ ಪುಸ್ತಕವನ್ನಿಟ್ಟುಕೊಂಡು ಬಂದಿದ್ದೇನೆ. ಯಾವಾಗಲಾದರೂ ಮನಸ್ಸಿಗೆ ಖಿನ್ನತೆ ಉಂಟಾದರೆ ಆ ಪುಸ್ತಕವನ್ನು ಓದುತ್ತೇನೆ. ಅವರ ವಾಣಿಗಳನ್ನು ಓದಿದಾಗ ನನಗೆ ಎನರ್ಜಿ ಬಂದ ಹಾಗಾಗುತ್ತದೆ' ಎಂದು ಆತ ನೆನೆಸಿಕೊಂಡ. ಆಗ ಆತ ಯುನಿವರ್ಸಿಟಿ ಆಫ್ ಸದರ್ನ್ ಕ್ಯಾಲಿಫೋರ್ನಿಯಾದಲ್ಲಿ ಎಂ. ಎಸ್. ಓದುತ್ತಿದ್ದನಂತೆ.

ನಾವು ಯಾವುದನ್ನು ಸಾಧಾರಣ ಕೆಲಸ ಎಂದು ಅಂದುಕೊಳ್ಳುತ್ತೇವೆ, ಅದು ಕೆಲವು ವೇಳೆ ಎಷ್ಟು ಅಸಾಧಾರಣವಾದ ಪರಿಣಾಮವನ್ನು ಯುವಕರ ಮೇಲೆ ಬೀರುತ್ತದೆ ಎಂದು ಆವಾಗ ನನಗನ್ನಿಸಿತು. ನಾವು ಒಳ್ಳೆಯ ಕೆಲಸವನ್ನು ಮಾಡುವುದನ್ನು ನಿಲ್ಲಿಸಬಾರದು, ಮಾಡುತ್ತಿರಬೇಕು. ಯುವಕರ ಮೇಲೆ ನಾವು ಭರವಸೆಯನ್ನಿಡಬೇಕು, ವಿಶ್ವಾಸವನ್ನಿಡಬೇಕು. ಎಲ್ಲೋ ಯಾರೋ ಅದರ ಎಡೆ ಹಿಡಿದುಕೊಳ್ಳುತ್ತಾರೆ, ಅದನ್ನು ಬೆಳೆಸಿಕೊಳ್ಳುತ್ತಾರೆ. ದೂರದ ಅಮೇರಿಕದಲ್ಲಿ ಆತನು ವಿವೇಕಾನಂದರ ಪುಸ್ತಕದಿಂದ ಸ್ಫೂರ್ತಿ ಪಡೆಯುತ್ತೇನೆ ಎಂದ ಮಾತು ನನಗೆ ಬಹಳ ಸಂತೋಷ ನೀಡಿತು.

* * *

ಡಾ. ರಾಜ್ ಭೇಟಿ

ಒಂದು ಸಲ ಡಾ. ರಾಜಕುಮಾರ್‌ರವರನ್ನು ಅವರ ಮನೆಯಲ್ಲಿ ಭೇಟಿಯಾಗುವ ಅವಕಾಶ ನನಗೆ ಸಿಕ್ಕಿತು. ಸುಮಾರು ಒಂದು ಗಂಟೆಗೂ ಹೆಚ್ಚಿನ ಕಾಲವನ್ನು ನಾನು ರಾಜ್‌ಕುಮಾರ್‌ರವರ ಜೊತೆ ಕಳೆದೆ. ಡಾ. ರಾಜ್‌ಕುಮಾರ್ ರವರು ಹಲವಾರು ವಿಷಯಗಳನ್ನು ಮಾತನಾಡಿದರು. ಹೀಗೇ ಮಾತು ಅವರ ಸಿನೇಮಾದತ್ತ ಹೊರಳಿದಾಗ, 'ನನ್ನ ಸಿನೆಮಾಗಳನ್ನೇ ನಾನು ಮತ್ತೆ ಮತ್ತೆ ನೋಡಿದರೆ ನನಗೇ ಅಸಹ್ಯ ಅನ್ನಿಸುತ್ತದೆ. ನೋಡಿದಾಗಲೆಲ್ಲಾ ಇನ್ನೂ ಚೆನ್ನಾಗಿ ಮಾಡಬಹುದಾಗಿತ್ತೇನೋ- ಎಂದು ಅನ್ನಿಸುತ್ತದೆ. ಆದ್ದರಿಂದ ನನ್ನ ಸಿನೆಮಾಗಳನ್ನೇ ನಾನು ಕುಳಿತುಕೊಂಡು ನೋಡುವುದಿಲ್ಲ. ಮನೆಯಲ್ಲಿ ಹಾಕಿದ್ದರೆ ನಾನು ಎದ್ದು ರೂಮಿಗೆ ಹೊರಟು ಹೋಗುತ್ತೇನೆ' ಎಂದರು. ಅಂತಹ ಮಹಾನ್ ಕಲಾವಿದರೊಬ್ಬರು ಹೇಗೆ ನಿರಂತರವಾಗಿ ತನ್ನನ್ನು ತಾನೇ ವಿಮರ್ಶೆಗೆ ಒಳಪಡಿಸಿಕೊಳ್ಳುತ್ತಾರೆ ಎಂದು ನೋಡಿ ಆಶ್ಚರ್ಯವಾಯಿತು.

* * *

ತಿರುವು ನೀಡಿದ ಅಧ್ಯಯನ

ಅಧ್ಯಯನ, ನನ್ನ ಜೀವನಕ್ಕೆ ತಿರುವು ಕೊಟ್ಟಂತಹ ಪ್ರಮುಖ ಸಂಗತಿ. ನಾನು ಎರಡನೇ ವರ್ಷದ ಬಿ.ಇ. ಓದುತ್ತಿದ್ದ ಸಂದರ್ಭದಲ್ಲಿ, ರಜೆ ಬಂದಾಗ ಮಲ್ಲೇಶ್ವರಂ ಪಬ್ಲಿಕ್ ಲೈಬ್ರೆರಿಯಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ಬೆಳಗ್ಗೆಯಿಂದ ಸಂಜೆಯವರೆಗೆ ಕೆಲವು ಗ್ರಂಥಗಳನ್ನು ಓದುವ ಅವಕಾಶ ಸಿಕ್ಕಿತು. ಅದರಲ್ಲಿ ಪ್ರಮುಖವಾದದ್ದು 'The Hundred Complete Works of Swami Vivekananda' ಮತ್ತು 'The Collected Works of Mahatma Gandhi'. ಮಹಾತ್ಮಾ ಗಾಂಧೀಯವರ ಸಮಗ್ರ ಜೀವನ ಚರಿತ್ರೆಯನ್ನು ಭಾರತ ಸರ್ಕಾರದವರು 500 ಪುಟಗಳ 60 ವಾಲ್ಯುಮ್‌ನಲ್ಲಿ ಹೊರತಂದಿದ್ದರು. ಅಷ್ಟೂ ಪುಸ್ತಕಗಳನ್ನು ಓದುವ ಅವಕಾಶ ನನ್ನದಾಯಿತು. ಅದೇ ಅವಧಿಯಲ್ಲಿ ಭಾರತ ಸರ್ಕಾರವೇ ಪ್ರಕಟ ಮಾಡಿದ 18 ಮಾಲಿಕೆಗಳ ಗ್ರಂಥ 'The History of Indian Freedom Struggle' ಸಹ ನಾನು ಓದಿದೆ. ಜೊತೆಗೆ ಮೀಸಲಾತಿಯ ಬಗೆಗಿನ 'ಹಾವನೂರು ಕಮಿಶನ್ ರಿಪೋರ್ಟ್' ಸಹ ಓದಿದೆ. ನಮ್ಮ ಭಾರತದ ಸಂವಿಧಾನದ ರಚನಾ ಸಂದರ್ಭದಲ್ಲಿ ನಡೆದ ಸಭೆಯ ಎಲ್ಲಾ ಚರ್ಚೆಗಳನ್ನು ದಾಖಲು ಮಾಡಿದ ಪುಸ್ತಕ, 'The Constitutional Debates' ಸಹ ನಾನು ಓದಿದೆ.

ಇವಷ್ಟನ್ನೂ ಓದುವ ಅವಕಾಶ ನನಗೆ ಆ ಎರಡೂವರೆ ಮೂರು ತಿಂಗಳಲ್ಲಿ ಸಿಕ್ಕಿತು. ಈ ಓದು ನನ್ನನ್ನು ಸಮಾಜಮುಖಿಯಾಗಿ ಆಲೋಚಿಸುವಂತೆ ಮಾಡಿತು. ಒಂದು ಕಡೆ ವಿವೇಕಾನಂದರ ದೇಶಪ್ರೇಮ, ಇನ್ನೊಂದು ಕಡೆ ಗಾಂಧೀಜಿಯವರ ರಾಜನೀತಿಯ ಹೋರಾಟಗಳು, ಅದ್ಭುತ ದೇಶ ಕಟ್ಟಬೇಕೆನ್ನುವ ಪರಿಕಲ್ಪನೆ, ಜೊತೆ ಜೊತೆಗೆ ನಮ್ಮ ಸಂವಿಧಾನದ ರಚನೆಕಾರರು, ಅವರು ಈ ದೇಶದ ಬಗ್ಗೆ ಕಂಡಂತಹ ಕನಸು, ಎಂಥ ಸಮಾಜ ನಿರ್ಮಾಣ ಮಾಡಬೇಕೆನ್ನುವ ದೂರದೃಷ್ಟಿ, ಇವೆಲ್ಲ ನನ್ನನ್ನು ಬಹಳ ಚಿಂತೆಗೀಡುಮಾಡಿತು. ಇನ್ನೊಂದು ಕಡೆ ಹಾವನೂರು ಕಮೀಶನ್‌ನ ವರದಿ, ಸಾಮಾಜಿಕ ನ್ಯಾಯದ ಬಗ್ಗೆ ಒಂದು ಹೊಸ ಪ್ರಜ್ಞೆ, ಒಂದು ಹೊಸ ದೃಷ್ಟಿಕೋನ. ಇವೆಲ್ಲವುದರ ನೇರ ಪರಿಚಯವಾಗುವಂಥಹ ಒಂದು ಅವಕಾಶ ನನಗೆ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಸಿಕ್ಕಿತು. ಆ ಎರಡೂವರೆ ತಿಂಗಳ ಅಧ್ಯಯನದ ಕಾಲ ನನ್ನ ಜೀವನದ ಒಂದು ಮುಖ್ಯವಾದ ಘಟ್ಟ ಎಂದು ನಾನು ಭಾವಿಸುತ್ತೇನೆ. ಅದು ನನ್ನ ಬದುಕು ಮತ್ತು ಆಲೋಚನೆಗಳನ್ನೂ ಸಹ ಸಂಪೂರ್ಣವಾಗಿ ಬದಲಾಯಿಸಿತ್ತು. ಮುಂದೆ ಬರುವಂಥಹ ಯುವ ಪೀಳಿಗೆ ಗಾಂಧಿಯನ್ನ, ವಿವೇಕಾನಂದರನ್ನು ಮರೆತರೆ ಈ ದೇಶಕ್ಕೆ ಭವಿಷ್ಯವೇ ಇಲ್ಲ ಎಂದರಿತ ನಾನು ಯುವಕರಲ್ಲಿ ಗಾಂಧಿ ವಿಚಾರ, ಸ್ವಾಮೀ ವಿವೇಕಾನಂದರ ವಿಚಾರಗಳನ್ನು ಬೆಳೆಸಬೇಕು ಎಂದು ನಿರಂತರವಾದ ಪ್ರಯತ್ನ ಮಾಡುವುದಕ್ಕೆ ಸಹಾಯವಾಯಿತು.

ಎಷ್ಟು ಉನ್ನತವಾಗಿದೆ ನಮ್ಮ ಉನ್ನತ ಶಿಕ್ಷಣ?

ನಾಡೋಜ ಡಾ. ವೂಡೇ ಪಿ. ಕೃಷ್ಣ

ಜ್ಞಾನ– ಭಾರತದ ಶಕ್ತಿ, ಜ್ಞಾನ– ಭಾರತದ ಹೆಗ್ಗುರುತು. ಪುರಾತನ ಕಾಲದಿಂದಲೇ ಭಾರತ ಜ್ಞಾನಕ್ಕೆ ಹೆಸರುವಾಸಿಯಾಗಿತ್ತು. ಐಶ್ವರ್ಯ, ಸಂಪತ್ತು, ವೈಭವದ ಜೀವನ ಶೈಲಿ ಇವು ಯಾವುವೂ ಸಹ ಎಂದಿಗೂ ನಮ್ಮ ಹೆಗ್ಗುರುತುಗಳಾಗಿರಲಿಲ್ಲ. ಇಡೀ ವಿಶ್ವವೇ ನಮ್ಮನ್ನು ಗುರುತಿಸುತ್ತಿದ್ದುದು ನಮ್ಮಲ್ಲಿಯ ಜ್ಞಾನ ಸಂಪತ್ತಿಗಾಗಿ.

ಯಾವುದೇ ರಾಷ್ಟ್ರವಿರಲಿ, ಅದರ ಬಹಳ ದೊಡ್ಡ ಶಕ್ತಿ ಎಂದರೆ ಶಿಕ್ಷಣ. ಆದ್ದರಿಂದ ನೈಜ ಅರ್ಥದಲ್ಲಿ ಹೇಳುವುದಾದರೆ ಯಾವ ರಾಷ್ಟ್ರ ಶೈಕ್ಷಣಿಕವಾಗಿ ಮುಂದುವರೆದಿದೆಯೋ ಆ ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರ ಎಂದು ನಾವು ಕರೆಯಬೇಕು. ಯಾವುದೇ ರಾಷ್ಟ್ರ ಕೇವಲ ಆರ್ಥಿಕವಾಗಿ ಮುಂದುವರೆದಿದೆಯೋ ಅದನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರ ಎಂದು ಕರೆಯಲು ಸಾಧ್ಯವಿಲ್ಲ. ಆರ್ಥಿಕ ಅಭಿವೃದ್ಧಿಗಿಂತ ಶೈಕ್ಷಣಿಕ ಅಭಿವೃದ್ಧಿ ಅತ್ಯಂತ ಅವಶ್ಯ. ಸ್ವಾಮಿ ವಿವೇಕಾನಂದರು ಹೇಳಿದ ಮಾತೊಂದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು. 'ಒಂದು ದೇಶದ ಬಹುತೇಕ ಸಮಸ್ಯೆಗಳಿಗೆ ಕೇವಲ ಶಿಕ್ಷಣವೊಂದೇ ಪರಿಹಾರ' ಎಂದು ಅವರು ಬಹಳ ಹಿಂದೆಯೇ ಹೇಳಿದ್ದರು.

ಶಿಕ್ಷಣ ಮತ್ತು ಜ್ಞಾನ ನಮ್ಮ ಜೀವನಕ್ಕೆ ಎಷ್ಟು ಅತ್ಯವಶ್ಯ ಎನ್ನುವುದನ್ನು ಒತ್ತಿ ಹೇಳಲು ಈ ಎಲ್ಲ ಹೇಳಿಕೆಗಳು ಬಹಳ ಮುಖ್ಯ. ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಶಿಕ್ಷಣವು ಪ್ರಾಥಮಿಕ ವಿದ್ಯಾಭ್ಯಾಸದಿಂದ ಪ್ರಾರಂಭವಾಗುತ್ತದೆ. ನಂತರ ಪ್ರೌಢ ಶಿಕ್ಷಣ, ಪದವಿಪೂರ್ವ ಶಿಕ್ಷಣ, ಪದವಿ, ಸ್ನಾತಕೋತ್ತರ, ಕೊನೆಯದಾಗಿ ಸಂಶೋಧನೆ– ಇವು ಶಿಕ್ಷಣದ ವಿವಿಧ ಹಂತಗಳು.

ಇಂದಿನ ಉನ್ನತ ಶಿಕ್ಷಣ ವ್ಯವಸ್ಥೆಯ ಬಗ್ಗೆ ಚರ್ಚಿಸುವುದಕ್ಕೆ ಮೊದಲು, ಒಮ್ಮೆ ನಮ್ಮ ಪುರಾತನ ಉನ್ನತ ಶಿಕ್ಷಣ ವ್ಯವಸ್ಥೆಯ ಬಗ್ಗೆ ಒಂದಿಷ್ಟು ವಿವರಗಳನ್ನು ತಮ್ಮ ಜೊತೆ ಹಂಚಿಕೊಳ್ಳಲು ಬಯಸುತ್ತೇನೆ. ನಾನು ಹೇಳಲು ಹೊರಟಿರುವುದು ಬಹಳ ಪುರಾತನ ಕಾಲದ ವಿಷಯ. ಅಂದರೆ ಪುಸ್ತಕಗಳು ಲಭ್ಯವಿರದ ಕಾಲ. ತಕ್ಷಶಿಲಾ, ನಳಂದ, ವಿಕ್ರಮಶಿಲಾದಂತಹ ವಿಶ್ವವಿದ್ಯಾಲಯುಗಳು ಕಾರ್ಯನಿರ್ವಹಿಸುತ್ತಿದ್ದ ಕಾಲ. ಆ ಕಾಲದಲ್ಲಿ ಯಾವ ಪ್ರಕಾರದ ಉನ್ನತ ಶಿಕ್ಷಣ ಚಾಲ್ತಿಯಲ್ಲಿತ್ತು ಎನ್ನುವುದನ್ನು ಗಮನಿಸೋಣ.

ಆ ಕಾಲದ ಉನ್ನತ ಶಿಕ್ಷಣದ ಪ್ರಕ್ರಿಯೆ ಅತ್ಯಂತ ಸರಳವಾಗಿತ್ತು. ವಿದೇಶ ಪ್ರಯಾಣ ಮಾಡುವುದು, ವಿದ್ವಾಂಸರ ಜೊತೆ ಸ್ನೇಹ ಸಂಪಾದನೆ ಮಾಡುವುದು ಹಾಗೂ ಜ್ಞಾನದ ಗೋಷ್ಠಿಗಳಲ್ಲಿ ಭಾಗವಹಿಸುವುದು– ಈ ಮೂರು ಅಂಶಗಳು ಉನ್ನತ ಶಿಕ್ಷಣದ ಪ್ರಕ್ರಿಯೆಗಳಾಗಿದ್ದವು. 'ಕೇಳಿ ತಿಳಿದುಕೊಳ್ಳುವ' ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಇತ್ತು. ಯಾರು ಹೆಚ್ಚು ವಿಷಯಗಳನ್ನು ಕೇಳಿ ತಿಳಿದುಕೊಂಡಿದ್ದಾರೋ ಅವರನ್ನು 'ಬಹುಶೃತ' ಎಂದು ಕರೆಯುತ್ತಿದ್ದರು. ಸಮಾಜದಲ್ಲಿ ಅತ್ಯಂತ ಹೆಚ್ಚಿನ ಗೌರವವನ್ನು ಅವರು ಪಡೆಯುತ್ತಿದ್ದರು. ಹಲವು ಉತ್ತಮ ವಿಷಯಗಳನ್ನು ಅವರು ಕೇಳಿದ ಕಾರಣ, ಸಹಜವಾಗಿಯೇ ಅವರಲ್ಲಿ ಉತ್ತಮ ಜ್ಞಾನ ಪ್ರಾಪ್ತಿಯಾಗುತ್ತಿತ್ತು. ನಾನು ಮೊದಲೇ ಹೇಳಿದ ಹಾಗೆ ಆ ಕಾಲದಿಂದಲೂ ಭಾರತ ವಿದ್ವಾಂಸರ ಹಾಗೂ ಜ್ಞಾನಾರ್ಥಿಗಳ ದೇಶವಾಗಿತ್ತು.

ಈಗ ಆಧುನಿಕ ಉನ್ನತ ಶಿಕ್ಷಣದ ಬಗ್ಗೆ ಚರ್ಚಿಸೋಣ. ಆಧುನಿಕ ಉನ್ನತ ಶಿಕ್ಷಣವನ್ನು ನಾವು ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಸವಲತ್ತಾಗಿ ಉನ್ನತ ಶಿಕ್ಷಣ.
2. ವ್ಯವಹಾರವಾಗಿ ಉನ್ನತ ಶಿಕ್ಷಣ.
3. ಉದ್ಯಮವಾಗಿ ಉನ್ನತ ಶಿಕ್ಷಣ.

ಸವಲತ್ತಾಗಿ ಉನ್ನತ ಶಿಕ್ಷಣ

'ಸವಲತ್ತಾಗಿ ಉನ್ನತ ಶಿಕ್ಷಣ' ಎಂದರೆ ಏನು ಎನ್ನುವುದನ್ನು ಮೊದಲಿಗೆ ಚರ್ಚೆ ಮಾಡೋಣ. ಪುರಾತನ ಭಾರತದಲ್ಲಿ ಉನ್ನತ ಶಿಕ್ಷಣ ಕೇವಲ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿತ್ತು. ಬೋಧನೆಯನ್ನು ಒಂದು 'ಸೇವೆ' ಎಂದು ಪರಿಗಣಿಸಿದ್ದ ಕಾಲ ಅದು. ನಮ್ಮ ಪರಂಪರೆಯಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಅಡಕವಾಗಿದ್ದ ಒಂದು ದೊಡ್ಡ ತತ್ವ ಅದು. ಆ ಕಾಲದಲ್ಲಿ ಬಹುತೇಕ ಶಿಕ್ಷಣ ಆಧ್ಯಾತ್ಮ ಹಾಗೂ ತತ್ವಶಾಸ್ತ್ರದ ಅಧ್ಯಯನಕ್ಕೆ ಸೀಮಿತವಾಗಿತ್ತು. ಗ್ರಂಥಗಳ ಅಧ್ಯಯನ ಮತ್ತು ಕಲಿಕೆ ಉನ್ನತ ಶಿಕ್ಷಣದ ಮುಖ್ಯ ಚಟುವಟಿಕೆಗಳಾಗಿದ್ದವು. ಅತಿ ಮುಖ್ಯ ಅಂಶವೆಂದರೆ, ಪ್ರತಿಯೊಬ್ಬರೂ ಮನಸ್ಸಿನಾಳದಿಂದ ಅಧ್ಯಯನ ಮಾಡುತ್ತಿದ್ದರು. ಆಗಿನ ಕಾಲದ ಸನ್ನಿವೇಶ ಹೇಗಿತ್ತು ಎಂದರೆ, ಯಾರು ಹೆಚ್ಚು

ಹಳೆಯ ಗ್ರಂಥಗಳನ್ನು ಮಾತಿನ ಮಧ್ಯೆ ಉಲ್ಲೇಖ ಮಾಡುತ್ತಿದ್ದರೋ ಅವರನ್ನು ಮಹಾ ವಿದ್ವಾಂಸರು ಎಂದು ಭಾವಿಸುತ್ತಿದ್ದರು. ಎಲ್ಲವನ್ನೂ ಕೂಡ ಬಾಯಿಯಿಪಾಠ ಮಾಡಿ, ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದ ಕಾಲ ಅದು. ವೇದಗಳು ಕೂಡಾ ಬಾಯಿಪಾಠದ ಮೂಲಕ ಶತಶತಮಾನಗಳು ದಾಟಿಕೊಂಡು ಬಂದು ಅಕ್ಷರವಾದವು. ವೇದಗಳನ್ನು ಕಂಠಪಾಟ ಮಾಡಿಕೊಂಡವರನ್ನು ಏಕವೇದಿ, ದ್ವಿವೇದಿ, ತ್ರಿವೇದಿ, ಚತುರ್ವೇದಿ ಎಂದು ಗುರುತಿಸುತ್ತಿದ್ದರು.

ಆ ಶಿಕ್ಷಣ ನಮ್ಮ ಜನಸಂಖ್ಯೆಯ ಶೇಕಡಾ 1.5 ಜನರನ್ನು ಮಾತ್ರ ತಲುಪಿತ್ತು ಎನ್ನುವುದು ಆಶ್ಚರ್ಯವಾದರೂ ಸತ್ಯ. ಉಳಿದ ಬಹುಸಂಖ್ಯೆಯ ಜನರನ್ನು ಅದು ತಲುಪಿರಲೇ ಇಲ್ಲ. ಇನ್ನೂ ಸೋಜಿಗದ ವಿಷಯ ಎಂದರೆ, ಮಹಿಳೆಯರು ಆ ಕಾಲದಲ್ಲಿ ಉನ್ನತ ಶಿಕ್ಷಣ ಅಭ್ಯಾಸ ಮಾಡುವಂತಿರಲಿಲ್ಲ. ಏಕೆಂದರೆ ವಿದೇಶಗಳಿಗೆ ಪ್ರಯಾಣ ಮಾಡುವುದು, ವಿದ್ವಾಂಸರ ಜೊತೆ ಸ್ನೇಹ ಸಂಪಾದನೆ ಮಾಡುವುದು ಹಾಗೂ ಜ್ಞಾನದ ಗೋಷ್ಠಿಗಳಲ್ಲಿ ಭಾಗವಹಿಸುವುದು– ಇವು ಮಹಿಳೆಯರಿಗೆ ನಿಷಿದ್ಧವಾಗಿದ್ದವು. ಹಾಗೆಯೇ ಶೂದ್ರರಿಗೂ ಶಿಕ್ಷಣದ ಅವಕಾಶಗಳಿರಲಿಲ್ಲ. ನಮ್ಮ ಪುರಾತನ ಉನ್ನತ ಶಿಕ್ಷಣದ ಮುಖ್ಯ ಉದ್ದೇಶವೇ ಗೌರವ ಸಂಪಾದನೆ ಆಗಿತ್ತು. ಗೌರವಕ್ಕಾಗಿಯೇ ತಮ್ಮ ಜೀವನವನ್ನು ಆಗಿನ ಕಾಲದ ವಿದ್ವಾಂಸರು ಮುಡಿಪಾಗಿ ಇಟ್ಟಿರುತ್ತಿದ್ದರು.

ಗಮನಿಸಬೇಕಾದ ಇನ್ನೊಂದು ವಿಷಯ ಎಂದರೆ, ಆಗಿನ ಕಾಲದ ಉನ್ನತ ಶಿಕ್ಷಣ ಉಚಿತವಾಗಿತ್ತು. ಹೆಚ್ಚೆಂದರೆ ಗುರುದಕ್ಷಿಣೆ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಇನ್ನಾವುದೇ ಶುಲ್ಕಗಳು ಇರುತ್ತಿರಲಿಲ್ಲ.

ವ್ಯವಹಾರವಾಗಿ ಉನ್ನತ ಶಿಕ್ಷಣ

ಕೈಗಾರಿಕಾ ಕ್ರಾಂತಿ ಶುರುವಾದ ಮೇಲೆ ತಾಂತ್ರಿಕ ಅಧ್ಯಯನ ಹೆಚ್ಚಿನ ಮಹತ್ವವನ್ನು ಪಡೆಯಿತು. ಅಭಿವೃದ್ಧಿಯ ದೃಷ್ಟಿಯಿಂದ ಅದು ಅತ್ಯಗತ್ಯವಾಗಿತ್ತು. ಆದರೂ ಮೊದಮೊದಲಿಗೆ ನಮ್ಮ ದೇಶದಲ್ಲಿ ತಾಂತ್ರಿಕತೆ ಅಷ್ಟು ಮುಂದುವರೆದಿರಲಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಮಾತ್ರ ತಾಂತ್ರಿಕತೆ ಮುಂದುವರೆದಿತ್ತು. ನಮ್ಮ ದೇಶದಲ್ಲಿ ಮೂಲ ವಿಜ್ಞಾನ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಈ ಅಭಿವೃದ್ಧಿಗೆ ತಕ್ಕಂತೆ ಕೌಶಲ್ಯಯುತ ವ್ಯಕ್ತಿಗಳ ಅಗತ್ಯತೆ ಹೆಚ್ಚಾಗುತ್ತಾ ಹೋಯಿತು. ಯಾರು ಹೆಚ್ಚು ತಾಂತ್ರಿಕ ಕೌಶಲ್ಯವನ್ನು ಹೊಂದಿರುತ್ತಾರೋ ಅವರಿಗೆ ಹೆಚ್ಚಿನ ಆದಾಯ ದೊರೆಯತೊಡಗಿತು. ಇದರ ಪರಿಣಾಮವಾಗಿ ಉನ್ನತ ಶಿಕ್ಷಣದ ಉದ್ದೇಶವೂ ನಿಧಾನವಾಗಿ ಬದಲಾಯಿತು. ಜೊತೆಗೆ ಮೂಲ ಆಶಯವೂ ಬದಲಾಯಿತು. ಹಿಂದಿನ ಕಾಲದಲ್ಲಿ ಕೇವಲ ಗೌರವ ಸಂಪಾದನೆಗೆ ಸೀಮಿತವಾಗಿದ್ದ ಉನ್ನತ ಶಿಕ್ಷಣವು ಹಣ ಗಳಿಸುವ ದಾರಿಯಾಗಿ ಬದಲಾಯಿತು.

ಇದೇ ಸಮಯಕ್ಕೆ ಸರಿಯಾಗಿ ಸರ್ಕಾರ ಸಹ ಉನ್ನತ ಶಿಕ್ಷಣದ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸತೊಡಗಿತು. ಹಾಗೆಯೇ ಖಾಸಗಿಯವರಿಗೂ ಸಹ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಪರವಾನಗಿ ನೀಡತೊಡಗಿದರು. ಇದೆಲ್ಲದರ ಪರಿಣಾಮವಾಗಿ ಉನ್ನತ ಶಿಕ್ಷಣದ ಶುಲ್ಕ ದುಬಾರಿಯಾಯಿತು, ಕ್ಯಾಪಿಟೇಶನ್ ಶುಲ್ಕ ಚಾಲ್ತಿಗೆ ಬಂತು ಹಾಗೂ 'ಮ್ಯಾನೇಜ್‌ಮೆಂಟ್ ಕೋಟಾ' ಎನ್ನುವ ಹೊಸದೊಂದು ಶಬ್ದ ಅಸ್ತಿತ್ವಕ್ಕೆ ಬಂತು. ಇಲ್ಲಿಂದಲೇ ಶಿಕ್ಷಣದ ವಾಣಿಜ್ಯೀಕರಣ ಪ್ರಾರಂಭವಾದದ್ದು. ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ಉನ್ನತ ಶಿಕ್ಷಣ ನಡೆಯತೊಡಗಿತು. ಈ ಬೆಳವಣಿಗೆಗಳು ಪ್ರಾರಂಭವಾದದ್ದು ಸ್ವಾತಂತ್ರ್ಯ ನಂತರ. ಸುಮಾರು 20–30 ವರ್ಷಗಳವರೆಗೆ ಇದೇ ಸನ್ನಿವೇಶ ಮುಂದುವರೆದಿತ್ತು.

ಉದ್ಯಮವಾಗಿ ಉನ್ನತ ಶಿಕ್ಷಣ

ಇಂದಿನ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಇಂದು ಉನ್ನತ ಶಿಕ್ಷಣ ಒಂದು ಉದ್ಯಮವಾಗಿದೆ. ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನವನ್ನು ಗಮನದಲ್ಲಿ ಇಟ್ಟುಕೊಂಡೇ ಉನ್ನತ ಶಿಕ್ಷಣಕ್ಕೆ ಸೇರುತ್ತಿದ್ದಾರೆ. ಪಾಲಕರು ತಮ್ಮ ಮಕ್ಕಳ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಬಂಡವಾಳದ ರೂಪದಲ್ಲಿ ಹೂಡಿಕೆ ಮಾಡುತ್ತಾರೆ. ಈ ಬದಲಾವಣೆಯನ್ನು ನಾವಿಲ್ಲಿ ಸೂಕ್ಷ್ಮವಾಗಿ ಗಮನಿಸಬೇಕು. ಒಂದು ಕಾಲದಲ್ಲಿ ಗೌರವಕ್ಕಾಗಿ ಉನ್ನತ ಶಿಕ್ಷಣ ಪಡೆಯಲಾಗುತ್ತಿತ್ತು. ನಂತರ ಹೆಚ್ಚಿನ ಆದಾಯ ಪಡೆಯಲು ಉನ್ನತ ಶಿಕ್ಷಣ ಪಡೆಯುತ್ತಿದ್ದರು. ಇಂದು ಉನ್ನತ ಶಿಕ್ಷಣ ಪಡೆಯುವ ಮೂಲ ಉದ್ದೇಶವೇ ಅತ್ಯುನ್ನತ ಕೆಲಸ ಗಿಟ್ಟಿಸಿಕೊಳ್ಳುವುದಾಗಿದೆ. ಯಾವ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಗೆ ಶೇಕಡಾ 100 ರಷ್ಟು Placement (ನೇಮಕಾತಿ) ದೊರೆಯುತ್ತದೆಯೋ, ಆ ಶಿಕ್ಷಣ ಸಂಸ್ಥೆಯನ್ನು ಅತ್ಯುತ್ತಮ ಸಂಸ್ಥೆ ಎಂದು ಪರಿಗಣಿಸಲಾಗುತ್ತಿದೆ.

ಇತ್ತೀಚಿನ ಇನ್ನೊಂದು ಹೊಸ ಬೆಳವಣಿಗೆ ಎಂದರೆ 'ಬ್ರಾಂಡ್ ಬಿಲ್ಡಿಂಗ್'. ಸಾಮಾನ್ಯವಾಗಿ ಬ್ರಾಂಡ್ ಎನ್ನುವ ಶಬ್ದವನ್ನು ಸೋಪು, ಪೇಸ್ಟ್, ಸೌಂದರ್ಯ ಸಾಧನಗಳು ಮುಂತಾದ ಗ್ರಾಹಕ ಉತ್ಪನ್ನಗಳಿಗೆ ಮಾತ್ರ ಬಳಸಲಾಗುತ್ತಿತ್ತು. ಆದರೆ ಈಗ ಶಿಕ್ಷಣ ಸಂಸ್ಥೆಗಳೂ ಸಹ ಮಾರ್ಕೆಟಿಂಗ್ ಹಾಗೂ ಆಕರ್ಷಕ ಜಾಹೀರಾತಿನ ಮೂಲಕ ತಮ್ಮ ಬ್ರಾಂಡ್ ಬಿಲ್ಡ್ ಮಾಡುವುದನ್ನು ಕಾಣಬಹುದು. ಕೆಲವು ವಿದ್ಯಾ ಸಂಸ್ಥೆಗಳು ತಮ್ಮ ಮೂಲ ಸೌಕರ್ಯವನ್ನು ಪಂಚತಾರಾ ಹೋಟೆಲ್‌ಗಳ ರೀತಿ ಅಭಿವೃದ್ಧಿಪಡಿಸಿವೆ. ಅವುಗಳ ಆವರಣಕ್ಕೆ ಪ್ರವೇಶ ಮಾಡಿದರೆ ಯಾವುದೋ ಅಂತಾರಾಷ್ಟ್ರೀಯ ಪಂಚತಾರಾ ಹೋಟೆಲ್ ಒಳಗೆ ಹೋದ ಅನುಭವವೇ ಆಗುತ್ತದೆ.

ನಾನು ಭಾರತೀಯ ಅಭಿಯಂತರ ಸಂಸ್ಥೆಯ ನ್ಯಾಷನಲ್ ಕೌನ್ಸಿಲ್ ಸದಸ್ಯನಾಗಿದ್ದೆ. ಆ ಸಮಯದಲ್ಲಿ ನಾನು ತಪಾಸಣೆಗಾಗಿ ಶಿಕ್ಷಣ ಸಂಸ್ಥೆಗಳಿಗೆ

ಭೇಟಿ ನೀಡುತ್ತಿದ್ದೆ. ಹೀಗೆಯೇ ನಾನು ಒಮ್ಮೆ ತಮಿಳುನಾಡಿನ ಹಲವು ತಾಂತ್ರಿಕ ಕಾಲೇಜುಗಳಿಗೆ ತಪಾಸಣೆಗಾಗಿ ಭೇಟಿ ನೀಡಿದ್ದೆ. ಅಲ್ಲಿಯ ಕೆಲವು ಕಾಲೇಜುಗಳ ಮೂಲ ಸೌಕರ್ಯವನ್ನು ನೋಡಿ ನಾನು ನಿಜಕ್ಕೂ ದಂಗಾಗಿದ್ದೆ. ಯಾವ ಪಂಚತಾರಾ ಹೋಟೆಲ್‌ಗೂ ಕಡಿಮೆ ಇಲ್ಲದಂತೆ ವೈಭವಯುತವಾದ ಮೂಲ ಸೌಕರ್ಯವನ್ನು ಅವರು ಒದಗಿಸಿದ್ದರು. ಆದರೆ ಬೋಧಕರ ಗುಣಮಟ್ಟ ಮಾತ್ರ ತೀರಾ ಕಳಪೆಯಾಗಿತ್ತು !

ಅತ್ಯುತ್ತಮ ಮೂಲ ಸೌಕರ್ಯದ ಮೂಲಕ ಜನರನ್ನು ಆಕರ್ಷಿಸುವ ಇಂತಹ ಸಂಸ್ಥೆಗಳು, ಶಿಕ್ಷಣದ ಮೂಲ ತಳಹದಿಯಾದ ಅತ್ಯುತ್ತಮ ಭೋಧಕರನ್ನು ನೇಮಿಸಿಕೊಳ್ಳುವುದಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ. ಏಕೆಂದರೆ ಅಂತಹ ಕಾಲೇಜುಗಳನ್ನು ಸ್ಥಾಪಿಸುವ ಹಲವರು ಉದ್ಯಮಿಗಳ ಮನಸ್ಥಿತಿ ಇರುವವರು. ಅವರು ತಾವು ಹೂಡಿದ ಬಂಡವಾಳಕ್ಕೆ ಎಷ್ಟು ಬೇಗ ಲಾಭ ಬರಬಹುದು ಎನ್ನುವ ಲೆಕ್ಕಾಚಾರದಲ್ಲಿ ತೊಡಗಿರುತ್ತಾರೆ. ಅಂತಹ ಸಂದರ್ಭದಲ್ಲಿ ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಮಾತ್ರ ಅವರ ಉದ್ದೇಶವಾಗಿರುತ್ತದೆ. ಏಕೆಂದರೆ ಅವರಿಗೆ ತಕ್ಷಣಕ್ಕೆ ಹಣ ಬೇಕು, ಶಿಕ್ಷಣದ ಗುಣಮಟ್ಟದ ಕಡೆ ಅವರು ಹೆಚ್ಚು ಗಮನ ಹರಿಸುವುದಿಲ್ಲ. ಗುಣಮಟ್ಟದ ಶಿಕ್ಷಣದ ಬಗ್ಗೆ ಜ್ಞಾನದ ಕೊರತೆಯೂ ಅವರಿಗಿರುತ್ತದೆ. ಇದರ ಪರಿಣಾಮವೇ ಇಂದು ಶೈಕ್ಷಣಿಕ ವಲಯದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಗುಣಮಟ್ಟದ ಬೋಧಕರಿದ್ದಾರೆ.

ಇದರ ಜೊತೆಗೆ ಬೋಧಕರ ಗುಣಮಟ್ಟ ಕುಸಿತಕ್ಕೆ ಇನ್ನೊಂದಿಷ್ಟು ಪೂರಕ ಬೆಳವಣಿಗೆಗಳೂ ನಡೆದವು. ಬೋಧಕರಿಗೆ ನೀಡುತ್ತಿರುವ ಸಂಬಳ ಬಹಳ ಕಡಿಮೆ ಎಂದು ಸರ್ಕಾರ ಮನಗಂಡು ಯು.ಜಿ.ಸಿ. ಸ್ಕೇಲ್ ವೇತನ ಪದ್ಧತಿಯನ್ನು ಜಾರಿಗೆ ತಂದಿತು. ತಮಗೆಲ್ಲ ತಿಳಿದಿರುವಂತೆ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅದು ಜಾರಿಯಲ್ಲಿದೆ. ಯು.ಜಿ.ಸಿ. ಸ್ಕೇಲ್ ವೇತನ ಪದ್ಧತಿ ಹಲವರನ್ನು ಬೋಧಕ ವೃತ್ತಿಗೆ ಆಕರ್ಷಿಸಿತು. ಸರ್ಕಾರವು ಉನ್ನತ ಶಿಕ್ಷಣ ಬೋಧನೆ ಮಾಡುವವರಿಗೆ ಪಿಎಚ್.ಡಿ ಅಗತ್ಯ ಎನ್ನುವ ಹೊಸ ನಿಯಮವನ್ನು ಜಾರಿಗೆ ತಂದಿತು. ಇವೆಲ್ಲದರ ಪರಿಣಾಮವಾಗಿ ಪಿಎಚ್.ಡಿಗಳ ಗುಣಮಟ್ಟ ಕುಸಿಯಿತು. ಏಕೆಂದರೆ ಯು.ಜಿ.ಸಿ. ಸ್ಕೇಲ್ ಆಕರ್ಷಣೆಯಿಂದ ಕಡಿಮೆ ಗುಣಮಟ್ಟದವರೂ ಸಹ ಪಿಎಚ್.ಡಿ ಮಾಡತೊಡಗಿದರು.

2014ರಲ್ಲಿ ಪಿಎಚ್.ಡಿ ಮುಗಿಸಿದವರ ಸಂಖ್ಯೆಯಲ್ಲಿ ವಿಶ್ವದಲ್ಲಿಯೇ ಭಾರತಕ್ಕೆ ನಾಲ್ಕನೇ ಸ್ಥಾನ ದೊರಕಿತು. ಪಿಎಚ್.ಡಿ ಮುಗಿಸುವವರ ಸಂಖ್ಯೆಯೇನೋ ದೊಡ್ಡದು. ಆದರೆ ಗುಣಮಟ್ಟ? 2017-18ರಲ್ಲಿ ಭಾರತವು 1,500 ವಿಶ್ವದರ್ಜೆಯ ಅತ್ಯುತ್ತಮ ಸಂಶೋಧನಾ ಲೇಖನಗಳನ್ನು ಪ್ರಕಟಿಸಿತು. ಆದರೆ ಇದೇ ವರ್ಷ ಇಂಗ್ಲೆಂಡ್ 7,000 ವಿಶ್ವದರ್ಜೆಯ ಸಂಶೋಧನಾ ಲೇಖನಗಳನ್ನು ಪ್ರಕಟಿಸಿತು.

ಚೀನಾ 13,200 ಲೇಖನಗಳನ್ನು ಪ್ರಕಟಿಸಿತು. ನಾನಿಲ್ಲಿ ಏನು ಹೇಳಲು ಹೊರಟಿದ್ದೇನೆ ಎಂದರೆ, ನಮ್ಮ ದೇಶ ಸುಮಾರು ನೂರಾ ಮೂವತ್ತು ಕೋಟಿ ಜನಸಂಖ್ಯೆ ಹೊಂದಿದೆ. ಜಗತ್ತಿನಲ್ಲಿಯೇ ಎರಡನೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶ ನಮ್ಮದು. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ನಮ್ಮದು. ಆದರೆ ವಿಶ್ವದರ್ಜೆಯ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದರಲ್ಲಿ ಮಾತ್ರ ನಾವು ಬಹಳ ಹಿಂದಿದ್ದೇವೆ.

ಯಾವುದೇ ದೇಶದ ಶೈಕ್ಷಣಿಕ ಪದ್ಧತಿ, ಆ ದೇಶದ ಆರ್ಥಿಕ ಪ್ರಗತಿಯ ಜೊತೆ ಹೊಂದಿಕೊಂಡಿದೆ. ಯಾವುದಾದರೂ ದೇಶದಲ್ಲಿ ಶೈಕ್ಷಣಿಕ ಪದ್ಧತಿ ಅತ್ಯುತ್ತಮವಾಗಿದ್ದರೆ ಹಾಗೂ ಎಲ್ಲರಿಗೂ ಸುಲಭವಾಗಿ ಶಿಕ್ಷಣ ಸಿಗುತ್ತಿದ್ದರೆ, ಆ ದೇಶ ಆರ್ಥಿಕವಾಗಿಯೂ ಪ್ರಬಲವಾಗಿದೆ ಎಂದು ನಾವು ಸುಲಭವಾಗಿ ಊಹಿಸಬಹುದು. ಸೈದ್ಧಾಂತಿಕವಾಗಿ ಹೇಳುವುದಾದರೆ ಭಾರತದಲ್ಲಿ ಶಿಕ್ಷಣವು ಸೇವಾ ಕಾರ್ಯ. ಏಕೆಂದರೆ ಲಾಭರಹಿತ ಸೇವಾ ಸಂಸ್ಥೆಗಳಿಗೆ ಮಾತ್ರ ಸರ್ಕಾರವು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಲು ಅನುಮತಿ ನೀಡುತ್ತದೆ. ಆದರೆ ಹಲವು ಕಡೆ ವಾಸ್ತವಾಂಶ ಬೇರೆಯೇ ಇದೆ. ಲಾಭದ ಉದ್ದೇಶದಿಂದಲೇ ಸೇವಾ ಸಂಸ್ಥೆಗಳ ನೋಂದಾವಣಿ ಮಾಡಿ, ಶಿಕ್ಷಣ ಸಂಸ್ಥೆಗಳನ್ನು ನಡೆಸುವವರ ಸಂಖ್ಯೆಯೇ ಜಾಸ್ತಿ. ಆ ಸಂಸ್ಥೆಗೆ ಸದಸ್ಯರು, ಪದಾಧಿಕಾರಿಗಳು ಎಲ್ಲರೂ ಅವರ ಮನೆಯವರೇ ಆಗಿರುತ್ತಾರೆ. ಕಾನೂನಿನ ದೃಷ್ಟಿಯಲ್ಲಿ ಅವರು ಸೇವಾ ಕಾರ್ಯವನ್ನೇ ಮಾಡುತ್ತಿರುತ್ತಾರೆ, ಆದರೆ ವಾಸ್ತವವಾಗಿ ಅವರು ವ್ಯವಹಾರ ನಡೆಸುತ್ತಿರುತ್ತಾರೆ.

ಉನ್ನತ ಶಿಕ್ಷಣ– ವ್ಯಕ್ತಿಯ ವೈಯಕ್ತಿಕ ಆಯ್ಕೆ

ಹಾಗೆ ನೋಡಿದರೆ ನಾವು ಈವತ್ತಿಗೂ ಸಹ ಉನ್ನತ ಶಿಕ್ಷಣವನ್ನು ಒಂದು ಸವಲತ್ತು ಎಂದೇ ಕರೆಯಬೇಕು. ಇತ್ತೀಚಿನ ದಿನಗಳಲ್ಲಾದ ಬೆಳವಣಿಗೆಗಳು ಉನ್ನತ ಶಿಕ್ಷಣಕ್ಕೆ ಉದ್ಯಮದ ರೂಪ ಕೊಟ್ಟರೂ ಉನ್ನತ ಶಿಕ್ಷಣ ಇಂದಿಗೂ ಸಹ ಒಂದು ಸವಲತ್ತೇ. ಏಕೆಂದರೆ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ತರಹ ಉನ್ನತ ಶಿಕ್ಷಣ ಸಂವಿಧಾನಬದ್ಧ ಹಕ್ಕಲ್ಲ. ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಲೇಬೇಕು ಎಂದು ಸಂವಿಧಾನದಲ್ಲಿ ನಮೂದಿಸಲಾಗಿದೆ. ಆದರೆ ನಮ್ಮ ಸಂವಿಧಾನ ಉನ್ನತ ಶಿಕ್ಷಣವನ್ನು ಕಡ್ಡಾಯ ಹಕ್ಕು ಎಂದು ಪರಿಗಣಿಸಿಲ್ಲ. ಆದ್ದರಿಂದ ಉನ್ನತ ಶಿಕ್ಷಣ ಅಗತ್ಯವಿರುವ ವ್ಯಕ್ತಿಗಳಿಗೆ ನೀಡುವ ಒಂದು ಸವಲತ್ತು ಮಾತ್ರ.

ಒಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗಾಗಿ ಉನ್ನತ ಶಿಕ್ಷಣವನ್ನು ಒದಗಿಸಬೇಕು. ಅದು ಅವನನ್ನು ಒಳಗಿನಿಂದಲೇ ಬಲಶಾಲಿಯನ್ನಾಗಿ, ಧೈರ್ಯಶಾಲಿಯನ್ನಾಗಿ ಮಾಡಬೇಕು, ಅವನನ್ನು ಸಮಗ್ರತೆಯ ಕಡೆಗೆ ಕೊಂಡೊಯ್ಯಬೇಕು. ಆದರೆ ಬಹಳಷ್ಟು ಜನ ಉನ್ನತ ಶಿಕ್ಷಣ ಪಡೆದವರಲ್ಲಿ ಈ

ಗುಣ ಕಂಡು ಬರುವುದಿಲ್ಲ. ನಾನು ಗಮನಿಸಿದ ಹಾಗೆ ಉನ್ನತ ಶಿಕ್ಷಣ ಮುಗಿಸಿದ ಹಲವರಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಏಕೆಂದರೆ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ– ಪದವಿ ಶಿಕ್ಷಣದ ಮುಂದುವರೆದ ಭಾಗ. ನಾನು ಗಮನಿಸಿದ ಹಾಗೆ ಇತರ ಹಲವಾರು ದೇಶಗಳಲ್ಲಿ ಬೇರೇಯೇ ಪದ್ಧತಿ ಇದೆ. ಉದಾಹರಣೆಗೆ ಅಲ್ಲಿ ಪದವಿ ಮುಗಿದ ತಕ್ಷಣ ಎಂ.ಬಿ.ಎ. ಮಾಡುವವರ ಸಂಖ್ಯೆ ಬಹಳ ಕಡಿಮೆ. ವಿದ್ಯಾರ್ಥಿಯೊಬ್ಬ ಮೂಲ ಪದವಿಯನ್ನು ಮುಗಿಸಿ, ಯಾವುದಾದರೂ ಕಂಪನಿಯಲ್ಲಿ ಕೆಲವು ವರ್ಷ ಕೆಲಸ ಮಾಡಿ, ನಂತರ ತನ್ನ ವೃತ್ತಿ ಬೆಳವಣಿಗೆಗಾಗಿ ಆತ ಪುನಃ ವಿದ್ಯಾಭ್ಯಾಸಕ್ಕೆ ಮರಳಿ ಎಂ.ಬಿ.ಎ. ಮಾಡುತ್ತಾನೆ. ಆದರೆ ನಮ್ಮ ದೇಶದಲ್ಲಿ ಹಾಗಿಲ್ಲ. ಯಾವ ರೀತಿ ಎಸ್.ಎಸ್.ಎಲ್.ಸಿ. ಮುಗಿಸಿದವರು ಪಿ.ಯು.ಸಿ.ಗೆ ಹೋದ ಹಾಗೆ, ಬಿ.ಕಾಂ. ಮುಗಿಸಿದವರು ಎಂ.ಬಿ.ಎ. ಹೋಗಿ ಸೇರುತ್ತಾರೆ. ಯಾವುದೇ ವೃತ್ತಿ ಅನುಭವ ಅವರಿಗೆ ಇರುವುದಿಲ್ಲ.

ಯಾರಿಗೆ ಅವಶ್ಯಕತೆ ಇದೆ ಹಾಗೂ ಯಾರು ಅದಕ್ಕಾಗಿ ಹಣ ಕೊಡಲು ತಯಾರಿರುತ್ತಾರೆ ಅಂಥವರಿಗೆ ಉನ್ನತ ಶಿಕ್ಷಣ ಸಿಗಬೇಕು ಎನ್ನುವುದು ವಿಶ್ವದಾದ್ಯಂತ ಇರುವ ಅರ್ಥಶಾಸ್ತ್ರಜ್ಞರ ಅಭಿಮತ. ಇದರರ್ಥ ಸರ್ಕಾರಗಳು ಉನ್ನತ ಶಿಕ್ಷಣಕ್ಕಾಗಿ ಸಹಾಯ ಮಾಡುವ ಅವಶ್ಯಕತೆ ಇಲ್ಲ. ಅದು ವ್ಯಕ್ತಿಯೊಬ್ಬನ ವೈಯಕ್ತಿಕ ಆಯ್ಕೆ ಹಾಗೂ ಅವನು ಹಣ ಕೊಟ್ಟು ಪಡೆದುಕೊಳ್ಳುವ ಸವಲತ್ತು.

ವಿಶ್ವಕ್ಕೆ ಭಾರತದ ಉನ್ನತ ಶಿಕ್ಷಣದ ಕೊಡುಗೆ

ಭಾರತವು ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ವಿದ್ಯಾ ಸಂಸ್ಥೆಗಳ ಜಾಲವನ್ನು ಹೊಂದಿದೆ. ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆ ಸಹ ಎಷ್ಟು ಅಗಾಧವಾಗಿದೆ ಎಂದರೆ, ನಮ್ಮ ದೇಶದಲ್ಲಿ ಒಟ್ಟೂ 42 ಕೇಂದ್ರಿಯ ವಿಶ್ವವಿದ್ಯಾಲಯಗಳಿವೆ. 275 ರಾಜ್ಯ ವಿಶ್ವವಿದ್ಯಾಲಯಗಳು, 130 ಡೀಮ್ಡ್ ಟು ಬಿ ಯುನಿವರ್ಸಿಟಿಗಳು ಹಾಗೂ 90 ಖಾಸಗೀ ವಿಶ್ವವಿದ್ಯಾಲಯಗಳು ನಮ್ಮಲ್ಲಿವೆ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಶೇಕಡಾ 30 ಖಾಸಗಿ ವಲಯದಲ್ಲಿದ್ದರೆ, 70 ಪ್ರತಿಶತ ಸರ್ಕಾರದ ಹಿಡಿತದಲ್ಲಿವೆ.

ಜಗತ್ತಿನಲ್ಲಿರುವ 200 ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ 23 ವಿಶ್ವವಿದ್ಯಾಲಯಗಳು ಭಾರತದಲ್ಲಿವೆ. ನಮ್ಮ ಬೆಂಗಳೂರಿನ 'ಭಾರತೀಯ ವಿಜ್ಞಾನ ಸಂಸ್ಥೆ' ವಿಶ್ವದ 10 ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಇದು ನಮಗೆಲ್ಲಾ ಹೆಮ್ಮೆಯ ವಿಷಯ.

ವಿಶ್ವಕ್ಕೆ ಪ್ರತಿಭೆಗಳನ್ನು ಒದಗಿಸುವುದರಲ್ಲಿ ಭಾರತ ಅಗ್ರಗಣ್ಯ ರಾಷ್ಟ್ರ. ಸ್ವಾತಂತ್ರ್ಯ ನಂತರ ಐ.ಐ.ಎಂ., ಐ.ಐ.ಟಿ. ಗಳಂತಹ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು. ಪರಿಣಾಮ ಅತ್ಯುತ್ತಮ ಬೌದ್ಧಿಕ ಸಾಮರ್ಥ್ಯವನ್ನು ನಾವು ಉತ್ಪಾದಿಸಿದೆವು. ಆದರೆ ಪ್ರತಿಭಾ ಪಲಾಯನದ ಸಮಸ್ಯೆ ಎದುರಾಯಿತು. ನಮ್ಮಲ್ಲಿ

ತಯಾರಾದ ವಿಶ್ವದರ್ಜೆಯ ಪ್ರತಿಭೆಗಳು ಭಾರತದ ಅಭಿವೃದ್ಧಿಗೇ ಶ್ರಮಿಸುತ್ತವೆ ಎಂದು ನಾವು ಊಹಿಸಿದ್ದೆವು, ಆದರೆ ಅದು ಹಾಗಾಗಲಿಲ್ಲ. ಸಾಮಾನ್ಯವಾಗಿ ಹೆಚ್ಚಿನ ಶೈಕ್ಷಣಿಕ ಅರ್ಹತೆ ಪಡೆದವರು ಉನ್ನತವಾದ ವೃತ್ತಿ ಜೀವನದ ಕಡೆ ನೋಡುವುದು ವಾಡಿಕೆ. ಆದ್ದರಿಂದ ಇಲ್ಲಿ ಉನ್ನತ ಶಿಕ್ಷಣ ಪಡೆದವರು ದೇಶ ಬಿಟ್ಟು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಕಡೆ ಪಲಾಯನ ಮಾಡಿದರು. ಅವರ ಶೈಕ್ಷಣಿಕ ಅರ್ಹತೆಗೆ ಹಾಗೂ ಪ್ರತಿಭೆಗೆ ಅಲ್ಲಿ ಹೆಚ್ಚಿನ ಮಾನ್ಯತೆ ಸಿಗುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಇವತ್ತು ಇಂಗ್ಲೆಂಡಿನಲ್ಲಿರುವ ಎಂಬತ್ತು ಸಾವಿರ ವೈದ್ಯರ ಪೈಕಿ ಮೂವತ್ತು ಸಾವಿರ ವೈದ್ಯರು ಭಾರತೀಯರು. ಅಮೇರಿಕಾದ ವಿಜ್ಞಾನಿಗಳಲ್ಲಿ ಶೇಕಡಾ 12ರಷ್ಟು ಭಾರತೀಯರು. ಅಮೇರಿಕಾದ ವೈದ್ಯರ ಪೈಕಿ 38 ಪ್ರತಿಶತ ಭಾರತೀಯರು. ಅಮೇರಿಕಾದ ಪ್ರಖ್ಯಾತ ಬಾಹ್ಯಾಕಾಶ ಸಂಸ್ಥೆಯಾದ ನಾಸಾದಲ್ಲಿಯೂ ಸಹ ಹತ್ತರಲ್ಲಿ ನಾಲ್ಕು ವಿಜ್ಞಾನಿಗಳು ಭಾರತೀಯರು. ಈ ಅರ್ಥದಲ್ಲಿ ನೋಡುವುದಾದರೆ ವಿಶ್ವಕ್ಕೆ ಪ್ರತಿಭೆಗಳನ್ನು ಒದಗಿಸುವುದಲ್ಲಿ ಭಾರತೀಯ ಉನ್ನತ ಶಿಕ್ಷಣ ಮಹತ್ತರ ಕೊಡುಗೆ ನೀಡಿದೆ. ಇವೆಲ್ಲ ಭಾರತೀಯರಾದ ನಮಗೆ ಹೆಮ್ಮೆ ತರುವ ವಿಷಯಗಳು. (ನಾನಿಲ್ಲಿ ವೈದ್ಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣವನ್ನೂ ಉನ್ನತ ಶಿಕ್ಷಣದ ಪರಿಧಿಯ ಒಳಗೇ ಸೇರಿಸಿ ಮಾತಾಡುತ್ತಿದ್ದೇನೆ. ಏಕೆಂದರೆ, ಸಾಮಾನ್ಯ ಪದವಿಯವರಿಗಿಂತ ಅಧಿಕ ವರ್ಷ ಅವರು ವ್ಯಾಸಂಗ ಮಾಡಿರುತ್ತಾರೆ.)

ಉನ್ನತ ಶಿಕ್ಷಣ ಎದುರಿಸುತ್ತಿರುವ ಸಮಸ್ಯೆಗಳು

ಮೊಟ್ಟಮೊದಲ ಸಮಸ್ಯೆ ಎಂದರೆ ಉನ್ನತ ಶಿಕ್ಷಣಕ್ಕೆ ಸೇರುವವರ ಸಂಖ್ಯೆ ತೀರಾ ಕಡಿಮೆ ಇದೆ. ಉನ್ನತ ಶಿಕ್ಷಣಕ್ಕೆ ಸೇರುವ ಅರ್ಹತೆ ಇರುವವರಲ್ಲಿ ಕೇವಲ 15 ಪ್ರತಿಶತ ಮಾತ್ರ ಉನ್ನತ ಶಿಕ್ಷಣಕ್ಕೆ ಸೇರುತ್ತಿದ್ದಾರೆ. ಇದನ್ನು 2030ರ ವೇಳೆಗೆ ಹೇಗಾದರೂ ಮಾಡಿ 30 ಪ್ರತಿಶತಕ್ಕೆ ಏರಿಸಬೇಕು ಎನ್ನುವುದು ಸರ್ಕಾರದ ಗುರಿ. ಆದರೆ ಇದು ಅಷ್ಟು ಸುಲಭವಲ್ಲ. ಏಕೆಂದರೆ ಇದನ್ನು ಒಂದು ಪ್ರತ್ಯೇಕ ಸಮಸ್ಯೆಯಾಗಿ ನಾವು ನೋಡಲು ಸಾಧ್ಯವಿಲ್ಲ. ಮೊದಲಿಗೆ ನಾವು ನಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ನೋಂದಾವಣಿಯ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಅಲ್ಲಿ ನೋಂದಾವಣಿ ಹೆಚ್ಚಾದರೆ ಮಾತ್ರ ಉನ್ನತ ಶಿಕ್ಷಣ ಬಯಸುವವರಲ್ಲಿ ಏರಿಕೆ ಸಾಧ್ಯವಿದೆ.

ಎರಡನೆಯ ಸಮಸ್ಯೆ ಎಂದರೆ ಗುಣಮಟ್ಟದ ಶಿಕ್ಷಣದ ಲಭ್ಯತೆಯಲ್ಲಿ ಅಸಮಾನತೆ ಇದೆ. ಎಲ್ಲ ಪ್ರದೇಶದ ಜನರಿಗೆ ಸಮಾನವಾದ ರೀತಿಯಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಮಹಾನಗರಗಳಲ್ಲಿ ವಾಸಿಸುವ ಜನರಿಗೆ ಸಿಗುವ ಉನ್ನತ ಶಿಕ್ಷಣಕ್ಕೂ, ದೂರದ ಪ್ರದೇಶದಲ್ಲಿ ವಾಸಿಸುವವರಿಗೆ ಸಿಗುವ ಉನ್ನತ

ಶಿಕ್ಷಣಕ್ಕೂ ತುಂಬಾ ವ್ಯತ್ಯಾಸವಿದೆ. ನಾನೊಮ್ಮೆ ಈಶಾನ್ಯ ರಾಜ್ಯವಾದ ತ್ರಿಪುರಾದ ಹತ್ತಿರದ ವಿಶ್ವವಿದ್ಯಾಲಯವೊಂದಕ್ಕೆ ಹೋಗಿದ್ದೆ. ಅದಕ್ಕೆ ಡಿಮ್ಡ್ ಟು ಬಿ ಯುನಿವರ್ಸಿಟಿ ಮಾನ್ಯತೆ ಕೊಟ್ಟಿದ್ದರು. ಅದು ತುಂಬಾ ಹಿಂದುಳಿದ ಪ್ರದೇಶ. ಅಂತಹ ಜಾಗದಲ್ಲಿಯೂ ಶಿಕ್ಷಣ ಅಭಿವೃದ್ಧಿ ಆಗಬೇಕು ಎನ್ನುವುದು ಸರ್ಕಾರದ ಅಭಿಲಾಷೆ. ಆದ್ದರಿಂದಲೇ ಅಲ್ಲಿ ಅದನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿತ್ತು. ತ್ರಿಪುರಾದಿಂದ ಆ ಜಾಗ ಸುಮಾರು 60 ಕಿ.ಮೀ. ದೂರದಲ್ಲಿತ್ತು. ರೋಡಿನಲ್ಲಿ ಪ್ರಯಾಣ ಮಾಡಿ ಆ ಜಾಗವನ್ನು ತಲುಪಲು ನಮಗೆ ಸುಮಾರು ಎರಡೂವರೆ ಗಂಟೆ ತಗಲಿತು. ಅಲ್ಲಿ ಹೋಗಿ ನೋಡಿದರೆ, ಒಂದು ಪ್ರಾಥಮಿಕ ಶಾಲೆಯನ್ನು ನಡೆಸಬಹುದಾದ ಜಾಗದಲ್ಲಿ ಅವರು ವಿಶ್ವವಿದ್ಯಾಲಯವನ್ನೇ ನಡೆಸುತ್ತಿದ್ದರು ! ಚಿಕ್ಕ ಚಿಕ್ಕ ಕಟ್ಟಡಗಳು, ಚಿಕ್ಕ ಚಿಕ್ಕ ರೂಮುಗಳು. ಅಲ್ಲಿ ಕಲಿಯುವ ವಿದ್ಯಾರ್ಥಿಗಳು ಸಹಜವಾಗಿಯೇ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಾರೆ.

ಉನ್ನತ ಶಿಕ್ಷಣವನ್ನು ಬಯಸಿ ನೋಂದಣಿ ಮಾಡಿಸುವವರಲ್ಲಿ ಪುರುಷ ಮತ್ತು ಮಹಿಳೆಯರ ಪ್ರಮಾಣದಲ್ಲಿ ತುಂಬಾ ಅಸಮಾನತೆ ಇದೆ. ಇದು ಇನ್ನೊಂದು ಸಮಸ್ಯೆ. ಇಂದಿಗೂ ಸಹ ಉನ್ನತ ಶಿಕ್ಷಣ ಪಡೆಯುವವರಲ್ಲಿ ಮಹಿಳೆಯರ ಪ್ರಮಾಣ ಬಹಳ ಕಡಿಮೆ ಇದೆ. ಭಾರತೀಯ ಉನ್ನತ ಶಿಕ್ಷಣದ ಮೇಲಿನ ಒಂದು ಸಮೀಕ್ಷೆಯ ಪ್ರಕಾರ ಭಾರತೀಯ ವಿಜ್ಞಾನ ಸಂಸ್ಥೆಯಂತಹ ರಾಷ್ಟ್ರೀಯ ಮಹತ್ವ ಪಡೆದ ಸಂಸ್ಥೆಗಳಲ್ಲೂ ಸಹ ,ಮಹಿಳೆಯರ ನೋಂದಣಿ ಪ್ರಮಾಣ ತುಂಬಾ ಕಡಿಮೆ ಇದೆ.

ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಪ್ರಸ್ತುತತೆಯ ಕೊರತೆ ನಮ್ಮನ್ನು ಕಾಡುತ್ತಿರುವ ಇನ್ನೊಂದು ಬಹಳ ದೊಡ್ಡ ಸಮಸ್ಯೆ. ಕೈಗಾರಿಕೆಗಳಿಗೆ ವಿದ್ಯಾವಂತ ಯುವಕರ ಅವಶ್ಯಕತೆ ಬಹಳ ಇದೆ. ಆದರೆ ಅವರ ಅಗತ್ಯತೆಗೂ ವಿಶ್ವವಿದ್ಯಾಲಯಗಳಲ್ಲಿ ತಯಾರಾಗುತ್ತಿರುವ ಪದವೀಧರರ ಕಲಿಕೆಗೂ ಸಂಬಂಧವೇ ಇಲ್ಲದಂತಾಗಿದೆ. ಕೈಗಾರಿಕೆಗಳ ಇಂದಿನ ಅಗತ್ಯತೆಗೆ ತಕ್ಕಂತೆ ಪಠ್ಯಕ್ರಮವಿಲ್ಲ.

ಸರಕಾರದಿಂದ ಅನುದಾನ ಪಡೆದ ವಿಶ್ವವಿದ್ಯಾಲಯಗಳಲ್ಲಿ ಇನ್ನೊಂದು ಹೊಸ ರೀತಿಯ ಸಮಸ್ಯೆ ಕಾಡುತ್ತಿದೆ. ಅತಿಯಾದ ಅಧಿಕಾರ ಕೇಂದ್ರೀಕರಣ, ಅಧಿಕಾರಿಗಳ ಹಸ್ತಕ್ಷೇಪ ಮತ್ತು ವೃತ್ತಿಪರತೆಯ ಕೊರತೆ ಇವು ಇಂತಹ ವಿಶ್ವವಿದ್ಯಾಲಯಗಳ ಬೆಳವಣಿಗೆಗೆ ತಡೆಗೋಡೆಯಾಗಿ ನಿಂತಿವೆ. ಅತಿಯಾದ ನೀತಿ ನಿಯಮಗಳನ್ನು ಹೇರುವುದು ಯಾವಾಗಲೂ ಅಪಾಯವೇ. ಅದರಿಂದ ಅಡ್ಡ ಪರಿಣಾಮಗಳೇ ಹೆಚ್ಚು. ಪಬ್ಲಿಕ್ ವಿಶ್ವವಿದ್ಯಾಲಯಗಳ ಪರಿಸ್ಥಿತಿ ಅದೇ ಆಗಿದೆ. ಅವೆಲ್ಲವೂ ಸರ್ಕಾರಿ ಕಾನೂನಿನ ಅಡಿಯಲ್ಲಿ ಸ್ಥಾಪಿತವಾದವು. ಆದ್ದರಿಂದ ಪ್ರತಿಯೊಂದೂ ಸಹ ನೀತಿ ನಿಯಮಾವಳಿಗಳ ಪ್ರಕಾರವೇ ನಡೆಯಬೇಕು.

ಪ್ರತಿಯೊಂದು ಕಾರ್ಯಚಟುವಟಿಕೆಗೂ ಒಂದೊಂದು ನಿಯಮವಿರುತ್ತದೆ. ಆದ್ದರಿಂದ ಅಲ್ಲಿ ಸೃಜನಾತ್ಮಕತೆಗೆ ಅಥವಾ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆಗೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಅಗತ್ಯವಾದ ವಿನೂತನ ಕ್ರಮಗಳನ್ನು ಕೈಗೊಳ್ಳಲು ಅವುಗಳಿಗೆ ಸಾಧ್ಯವೇ ಆಗುವುದಿಲ್ಲ.

ಗುಣಮಟ್ಟದ ಕೊರತೆ ಉನ್ನತ ಶಿಕ್ಷಣದ ಅತ್ಯಂತ ದೊಡ್ಡ ಸಮಸ್ಯೆ. ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡಿ, ಅವುಗಳಿಗೆ ರೇಟಿಂಗ್ ಕೊಡುವ ಉದ್ದೇಶದಿಂದ ಸರ್ಕಾರವು ನ್ಯಾಕ್(ಎನ್.ಎ.ಎ.ಸಿ.) ಸಂಸ್ಥೆಯನ್ನು ಸ್ಥಾಪಿಸಿದೆ. ಆದರೆ ಪರಿಸ್ಥಿತಿ ಹೇಗಿದೆ ಎಂದರೆ ಇವತ್ತಿನವರೆಗೆ ನಮ್ಮಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೇವಲ 30 ಪ್ರತಿಶತ ಸಂಸ್ಥೆಗಳು ಮಾತ್ರ ನ್ಯಾಕ್‌ನಿಂದ ಮಾನ್ಯತೆ ಪಡೆದಿವೆ. ಅವುಗಳಲ್ಲಿ ಕೇವಲ 30 ಪ್ರತಿಶತ ವಿಶ್ವವಿದ್ಯಾಲಯಗಳು ಹಾಗೂ ಕೇವಲ 45 ಪ್ರತಿಶತ ಕಾಲೇಜುಗಳು ಮಾತ್ರ 'ಎ' ಗ್ರೇಡ್ ಪಡೆದಿವೆ. ಇದು ಸಧ್ಯದ ಪರಿಸ್ಥಿತಿಯಲ್ಲಿ ನಮ್ಮ ಉನ್ನತ ಶಿಕ್ಷಣದ ಗುಣಮಟ್ಟವನ್ನು ಸೂಚಿಸುತ್ತದೆ.

ಇತ್ತೀಚೆಗೆ ಇನ್‌ಫೋಸಿಸ್ ಸಂಸ್ಥೆಯ ಸ್ಥಾಪಕ ನಾರಾಯಣ ಮೂರ್ತಿಯವರು ಹೇಳಿದ ಮಾತು ತಮಗೆಲ್ಲಾ ಗೊತ್ತಿರಬಹುದು, 'ನಮ್ಮಲ್ಲಿ ತಯಾರಾಗುತ್ತಿರುವ ಇಂಜಿನಿಯರಿಂಗ್ ಪದವೀಧರರಲ್ಲಿ ಶೇಕಡಾ 15 ರಷ್ಟು ಜನ ಸಹ ಕೆಲಸಕ್ಕೆ ಸೇರುವ ಯೋಗ್ಯತೆ ಪಡೆದಿಲ್ಲ' ಎಂದು. ಇವತ್ತಿನ ಉನ್ನತ ಶಿಕ್ಷಣದ ಗುಣಮಟ್ಟವನ್ನು ಅವಲೋಕಿಸಿದಾಗ ಈ ಮಾತು ಅತಿಶಯೋಕ್ತಿ ಎನ್ನಿಸುವುದಿಲ್ಲ. ನನ್ನ ಅಭಿಪ್ರಾಯದಂತೆ ಎಂ.ಬಿ.ಎ. ಪದವೀಧರರಲ್ಲಿ ಸಹ ನೂರಕ್ಕೆ ತೊಂಬತ್ತು ಭಾಗ ವೃತ್ತಿ ಯೋಗ್ಯತೆ ಪಡೆದಿಲ್ಲ.

ಇದಕ್ಕೆ ಕಾರಣ ಏನಿರಬಹುದು? ಮೊದಲೇ ಹೇಳಿದಂತೆ ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ ಹಾಗೂ ಪಠ್ಯಕ್ರಮದಲ್ಲಿ ಪ್ರಸ್ತುತತೆಯ ಕೊರತೆ. ಇದರ ಜೊತೆಗೆ ನಮ್ಮ ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುವುದಕ್ಕೆ ಇನ್ನೊಂದು ಪ್ರಮುಖ ಕಾರಣವಿದೆ. ಅದೇನೆಂದರೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯ ಕೊರತೆ. ಬಹಳ ವಿದ್ಯಾರ್ಥಿಗಳು ಬೇರೆ ಯಾವುದೋ ಒತ್ತಡದಿಂದ ತಮಗೆ ಆಸಕ್ತಿ ಇಲ್ಲದ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ತಮ್ಮ ಮನೆಯವರ ಒತ್ತಡದಿಂದ, ಗೆಳೆಯರ ಒತ್ತಡದಿಂದ ಅಥವಾ ಸುತ್ತಲಿನ ಸಮಾಜದ ಒತ್ತಡದಿಂದ ತಮಗೆ ಆಸಕ್ತಿಯೇ ಇಲ್ಲದ ವಿಷಯವನ್ನು ಕಲಿಯಲು ಪ್ರಾರಂಭಿಸುತ್ತಾರೆ. ಅವರ ಮೈಮನಸ್ಸೆಲ್ಲವೂ ಬೇರೆಯ ಕಡೆಗೇ ಇರುತ್ತದೆ. ಇದು ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯಲಿಕ್ಕೆ ಬಹಳ ದೊಡ್ಡ ಕಾರಣ ಎಂದು ನಾನು ಭಾವಿಸಿದ್ದೇನೆ.

ಸರ್.ಎಂ.ವಿಶ್ವೇಶ್ವರಯ್ಯನವರು ಭಾರತದಲ್ಲಿ ಕೈಗಾರಿಕಾ ಕ್ರಾಂತಿ ನಡೆದ ಕಾಲದವರು. 'ಕೈಗಾರಿಕೀಗೊಳಿಸು ಇಲ್ಲವೇ ನಾಶವಾಗು' ಎನ್ನುವುದು ಆ

ಕಾಲದಲ್ಲಿ ಅವರು ಹೇಳಿದ ಮಾತಾಗಿತ್ತು. ನಂತರದ ದಿನಗಳಲ್ಲಿ 'ಪ್ರಕಟಿಸು ಇಲ್ಲವೇ ನಾಶವಾಗು' ಎನ್ನುವ ನುಡಿ ಬಳಕೆಗೆ ಬಂತು. ಈಗ ಚಾಲ್ತಿಯಲ್ಲಿರುವ ಮಾತೆಂದರೆ 'ಆವಿಷ್ಕರಿಸು ಇಲ್ಲವೇ ನಾಶವಾಗು.'

ಭಾರತದಲ್ಲಿನ ಉನ್ನತ ಶಿಕ್ಷಣ ಎದುರಿಸುತ್ತಿರುವ ಸಮಸ್ಯೆಯನ್ನು ನಾನು ಈ ರೀತಿ ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ನಾವು 18ನೇ ಶತಮಾನದ ಮೂಲ ಸೌಕರ್ಯವನ್ನು ಹೊಂದಿದ್ದೇವೆ, 19ನೇ ಶತಮಾನದ ಬೋಧಕರಿದ್ದಾರೆ, 20ನೇ ಶತಮಾನದ ಪಠ್ಯಕ್ರಮವನ್ನು ಉಪಯೋಗಿಸಿ, 21ನೇ ಶತಮಾನಕ್ಕಾಗಿ ನಾವು ನಮ್ಮ ಯುವಜನರನ್ನು ತಯಾರುಮಾಡಲು ಪ್ರಯತ್ನಿಸುತ್ತಿದ್ದೇವೆ. ಆದರೆ ಇದು ಇರಬೇಕಾಗಿದ್ದು ಹೀಗೆ ನಮ್ಮಲ್ಲಿ ಕನಿಷ್ಠ 20ನೇ ಶತಮಾನದ ಮೂಲಸೌಕರ್ಯ ಇರಬೇಕು, 21 ನೇ ಶತಮಾನದ ಬೋಧಕರಿರಬೇಕು, ಕೊನೇ ಪಕ್ಷ 21ನೇ ಶತಮಾನದ ಪಠ್ಯಕ್ರಮವನ್ನು ಉಪಯೋಗಿಸಿ, 22ನೇ ಶತಮಾನಕ್ಕಾಗಿ ನಮ್ಮ ಯುವಜನರನ್ನು ತಯಾರುಮಾಡಬೇಕು.

ನಾನು ಮತ್ತೆ ಮತ್ತೆ ಪಠ್ಯಕ್ರಮದ ಬಗ್ಗೆ ಯಾಕೆ ಒತ್ತಿ ಹೇಳುತ್ತಿದ್ದೇನೆ ಎಂದರೆ ಪ್ರಪಂಚ ಬಹಳ ವೇಗವಾಗಿ ಬದಲಾಗುತ್ತಿದೆ. ಈ ಬದಲಾವಣೆಗೆ ತಕ್ಕಂತೆ ನಮ್ಮ ಉನ್ನತ ಶಿಕ್ಷಣ ವಲಯ ಸ್ಪಂದಿಸಬೇಕು, ಇಲ್ಲವಾದರೆ ನಾವು ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತೇವೆ.

ಪರಿಹಾರೋಪಾಯಗಳು

2050ರ ಕಾಲಕ್ಕೆ ಭಾರತದ ಜನಸಂಖ್ಯೆ 169 ಕೋಟಿ ಮುಟ್ಟಲಿದೆ ಎನ್ನುವ ಅಂದಾಜಿದೆ. ಇವತ್ತಿನ ದಿನಕ್ಕೆ ಭಾರತದಲ್ಲಿರುವ ಜನಸಂಖ್ಯೆಯ 50 ಪ್ರತಿಶತ ಇಪ್ಪತ್ತೈದು ವರ್ಷಕ್ಕಿಂತ ಕೆಳಗಿನವರು. 2030ರ ಸಮಯಕ್ಕೆ ಸುಮಾರು 14 ಕೋಟಿ ಜನ ಉನ್ನತ ಶಿಕ್ಷಣ ವ್ಯಾಸಂಗ ಮಾಡುವ ವಯಸ್ಸಿನವರು ಭಾರತದಲ್ಲಿ ಇರುತ್ತಾರೆ. ಮೊದಲೇ ಹೇಳಿದಂತೆ, 2030ರ ಸಮಯಕ್ಕೆ 30 ಪ್ರತಿಶತ ಉನ್ನತ ಶಿಕ್ಷಣದ ನೊಂದಾವಣಿಯ ಗುರಿಯನ್ನು ಸರ್ಕಾರ ಇರಿಸಿಕೊಂಡಿದೆ. ಇದು ಕಡಿಮೆ ಎನ್ನುವುದು ನನ್ನ ಭಾವನೆ. ಈ ಗುರಿಯನ್ನು ಸರ್ಕಾರ ಇನ್ನಷ್ಟು ಹೆಚ್ಚಿಸಿಕೊಂಡರೆ ಒಳ್ಳೆಯದು.

ಇಂದಿಗೂ ಸಹ ನಮ್ಮ ದೇಶದಲ್ಲಿ ಅಪಾರ ಪ್ರಮಾಣದ ಬಡತನವಿದೆ. ನಮ್ಮ ದೇಶದ 69 ಪ್ರತಿಶತ ಜನ ಇವತ್ತಿಗೂ ಬಡತನರೇಖೆಗಿಂತ ಕೆಳಗೆ ಬದುಕುತ್ತಿದ್ದಾರೆ. ಅಂದರೆ ಅವರ ಆದಾಯ ದಿನಕ್ಕೆ 160 ರೂಪಾಯಿ ಅಥವಾ ಅದಕ್ಕಿಂತ ಕಡಿಮೆ ಇದೆ. ನಮ್ಮ ಜನಸಂಖ್ಯೆಯ ಶೇಕಡಾ 5 ರಷ್ಟು ಜನ ಮಧ್ಯಮ ವರ್ಗದವರು. ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಸೇರುವವರಲ್ಲಿ ಹೆಚ್ಚಿನವರು ಮಧ್ಯಮ ವರ್ಗದವರು. ಇದು ನಮ್ಮ ಮುಂದಿರುವ ಸವಾಲು. ಕಡಿಮೆ ಜನಸಂಖ್ಯೆ ಹೊಂದಿರುವ ಹಲವಾರು ದೇಶಗಳು ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಸಾಧನೆಗಳನ್ನು

ಮಾಡುತ್ತಿವೆ, ಉದಾಹರಣೆಗೆ ಇಂಗ್ಲೆಂಡ್. ಅದರ ಜನಸಂಖ್ಯೆ ಭಾರತಕ್ಕೆ ಹೋಲಿಸಿದರೆ ಬಹಳ ಕಡಿಮೆ. ಆದರೆ ಅಲ್ಲಿ ನಮಗಿಂತ ನಾಲ್ಕು ಪಟ್ಟು ಹೆಚ್ಚು ವಿಶ್ವದರ್ಜೆಯ ಸಂಶೋಧನಾ ಲೇಖನಗಳು ಪ್ರಕಟವಾಗುತ್ತಿವೆ.

ಒಂದು ಸಮೀಕ್ಷೆಯ ಪ್ರಕಾರ, 2012-13ರಲ್ಲಿ 20,000 ವಿದೇಶಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಭಾರತಕ್ಕೆ ಬಂದರು. ಅವರಲ್ಲಿ ಬಹುತೇಕ ಜನ ಬಡ ದೇಶದವರು. ಅಭಿವೃದ್ಧಿ ಹೊಂದಿದ ರಾಷ್ಟ್ರದ ವಿದ್ಯಾರ್ಥಿಗಳು ಭಾರತಕ್ಕೆ ಉನ್ನತ ಶಿಕ್ಷಣಕ್ಕಾಗಿ ಬರುವುದಿಲ್ಲ. ಆದರೆ ಅದೇ ವರ್ಷ ಎರಡು ಲಕ್ಷಕ್ಕೂ ಹೆಚ್ಚಿನ ಭಾರತೀಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಬೇರೆ ದೇಶಗಳಿಗೆ ಹೋದರು. ನಮ್ಮ ದೇಶದ ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಿಸುವ ಅವಶ್ಯಕತೆಯನ್ನು ಇದು ಸೂಚಿಸುತ್ತದೆ.

ಭಾರತದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಒಂದಾದ ಮೇಲೊಂದರಂತೆ ನಾವೀಗ ಚರ್ಚೆ ಮಾಡೋಣ.

ಉನ್ನತ ಶಿಕ್ಷಣದ ಬೆಳವಣಿಗೆಗೆ ನಾವು ಮೊಟ್ಟಮೊದಲು ಕೈಗೊಳ್ಳಬೇಕಾದ ಕ್ರಮವೆಂದರೆ ಉತ್ತಮ ಕ್ರೆಡಿಟ್ ವ್ಯವಸ್ಥೆಯನ್ನು ಜಾರಿಗೆ ತರುವುದು. ಸುಲಭವಾಗಿ ವರ್ಗಾವಣೆ ಮಾಡಬಹುದಾದ ಕ್ರೆಡಿಟ್ ಸಿಸ್ಟಮ್ ನಮ್ಮಲ್ಲಿ ಇಲ್ಲ. ಯಾವುದೋ ಕಾರಣಕ್ಕೆ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಬಿಟ್ಟ ಅರ್ಹ ವಿದ್ಯಾರ್ಥಿಗಳಿಗೆ ಇದು ಸಹಕಾರಿಯಾಗಲಿದೆ. ಜೊತೆಗೆ ನಾವು 'ಆಯ್ಕೆ ಆಧಾರಿತ ವ್ಯವಸ್ಥೆ'ಯನ್ನು ಜಾರಿಗೆ ತರಬೇಕು.

ಹಿಂದೊಮ್ಮೆ ನಾನು ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ರಾಜ್ಯ ಘಟಕದ ಮುಖ್ಯಸ್ಥನಾಗಿದ್ದೆ. ಆ ಸಮಯದಲ್ಲಿ ಇನ್‌ಫೋಸಿಸ್ ಕಂಪನಿಯಲ್ಲಿ ನಾವೊಂದು ರಕ್ತದಾನ ಶಿಬಿರವನ್ನು ಏರ್ಪಾಟು ಮಾಡಿದ್ದೆವು. ಮಾಹಿತಿ ತಂತ್ರಜ್ಞಾನ ವೃತ್ತಿಯವರರಲ್ಲೂ ರಕ್ತದಾನದ ಬಗ್ಗೆ ಆಸಕ್ತಿ ಹುಟ್ಟಿಸುವುದು ನಮ್ಮ ಉದ್ದೇಶವಾಗಿತ್ತು. ಆ ಸಮಯದಲ್ಲಿ ನಾನೂ ಸಹ ಅಲ್ಲಿಗೆ ಹೋಗಿದ್ದೆ. ಆ ಕಾರ್ಯಕ್ರಮದಲ್ಲಿ ಐ.ಟಿ. ವೃತ್ತಿಯಲ್ಲೇ ಇರುವ ಯುವತಿ ಓರ್ವಳು ಉದ್ಘಾಟನಾ ಗೀತೆಯನ್ನು ಹಾಡಿದಳು. ಅವಳು ಅತಿ ಅದ್ಭುತವಾಗಿ ಹಾಡಿದಳು. ಶಾಸ್ತ್ರೀಯ ಸಂಗೀತದಲ್ಲಿ ಅವಳಿಗೆ ಉತ್ತಮ ಹಿಡಿತ ಇರುವುದು ಗೊತ್ತಾಗುತ್ತಿತ್ತು. ಕಾರ್ಯಕ್ರಮ ಮುಗಿದ ಮೇಲೆ ನಾವು ಅವಳನ್ನು ಮಾತಾಡಿಸಿದೆ. "ನೀನು ಇಷ್ಟು ಅದ್ಭುತವಾಗಿ ಹಾಡುತ್ತೀಯ. ಆದರೆ ಯಾಕೆ ಇಲ್ಲಿ ಕೆಲಸ ಮಾಡುತ್ತಿದ್ದೀಯಾ? ಸಾಂಸ್ಕೃತಿಕ ಕ್ಷೇತ್ರದಲ್ಲಿ ಇರಬಹುದಿತ್ತಲ್ಲ...?" ಅದಕ್ಕೆ ಅವಳು ಸ್ವಲ್ಪ ಬೇಸರದಿಂದಲೇ ಉತ್ತರಿಸಿದಳು- "ಏನು ಮಾಡೋದು ಸರ್? ಬಹಳ ಒತ್ತಡ ಇತ್ತು. ಅದಕ್ಕೆ ಐ.ಟಿ. ಕೋರ್ಸ್ ಆಯ್ಕೆ ಮಾಡಿಕೊಂಡೆ".

ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಅಮೇರಿಕಾದಲ್ಲಿ ಈ ರೀತಿ ಆಗಲು ಸಾಧ್ಯವಿಲ್ಲ. ಏಕೆಂದರೆ, ಅಲ್ಲಿ ವ್ಯವಸ್ಥೆಯೇ ಬೇರೆ ರೀತಿ ಇದೆ. ಅಲ್ಲಿ ವಿದ್ಯಾರ್ಥಿಗಳು ಮುಖ್ಯ ವಿಷಯದ ಜೊತೆಗೆ ಅವರ ಆಸಕ್ತಿಯ ಇನ್ನೊಂದು ಹೆಚ್ಚುವರಿ ವಿಷಯವನ್ನೂ ವ್ಯಾಸಂಗ ಮಾಡಲು ಅವಕಾಶವಿದೆ. ಉದಾಹರಣೆಗೆ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮಾಡುವ ವಿದ್ಯಾರ್ಥಿ, ಅದರ ಜೊತೆಗೆ ಚಿತ್ರಕಲೆಯನ್ನು ಅಭ್ಯಾಸ ಮಾಡಬಹುದು. ಅದರಲ್ಲಿ ಆತ ಪಡೆದ ಕ್ರೆಡಿಟ್‌ಗಳನ್ನು ಆತನ ಪದವಿಯ ಜೊತೆಗೆ ಸೇರಿಸಿ ಪ್ರಮಾಣ ಪತ್ರ ನೀಡಲಾಗುತ್ತದೆ. ಈ ರೀತಿಯ ಸಮಗ್ರ ಶಿಕ್ಷಣ ವ್ಯವಸ್ಥೆ ನಮ್ಮಲ್ಲಿ ಇಲ್ಲ. ನಾವು ಹಳೆಯ ಕಾಲದ ವಿಭಾಗೀಯ ಶಿಕ್ಷಣ ವ್ಯವಸ್ಥೆಯನ್ನೇ ಇನ್ನೂ ಅನುಸರಿಸುತ್ತಿದ್ದೇವೆ. ಇದು ಬದಲಾಗಬೇಕು ಹಾಗೂ ನಮ್ಮಲ್ಲಿ ಸಹ ಆಯ್ಕೆ ಆಧಾರಿತ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಬೇಕು ಎನ್ನುವುದು ನನ್ನ ಅಭಿಮತ.

ಇನ್ನೊಂದು ಬಹಳ ಮುಖ್ಯ ಬದಲಾವಣೆ ಆಗಬೇಕಾಗಿರುವುದು ಎಂದರೆ ಉನ್ನತ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿ ಜಾರಿಗೆ ಬರಬೇಕು. ಈ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿರುವುದು ಸಂತೋಷದ ಬೆಳವಣಿಗೆ. ಈಗಾಗಲೇ ಹಲವು ವಿಶ್ವವಿದ್ಯಾಲಯಗಳು ಸೆಮಿಸ್ಟರ್ ಪದ್ಧತಿ ಅಳವಡಿಸಿಕೊಂಡಿವೆ. ಉಳಿದ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುವ ಹಂತದಲ್ಲಿವೆ.

ಇನ್ನೊಂದು ಪ್ರಮುಖ ವಿಷಯವೆಂದರೆ ಕೋರ್ಸಿನಲ್ಲಿ ವೈವಿಧ್ಯತೆ ಬರಬೇಕು ಹಾಗೂ ವಿದ್ಯಾರ್ಥಿಗಳಿಗೆ ಕೋರ್ಸಿನ ಆಯ್ಕೆಗೆ ಅವಕಾಶ ಇರಬೇಕು.

ಉನ್ನತ ಶಿಕ್ಷಣದ ಪರೀಕ್ಷೆಯನ್ನು ನಡೆಸುವ ವಿಧಾನ ಸಹ ಬದಲಾಗಬೇಕಾದ ಅವಶ್ಯಕತೆ ಇದೆ. ಈಗ ಹೇಗೂ ಆನ್‌ಲೈನ್ ಪರೀಕ್ಷೆಗಳನ್ನು ನಡೆಸುವ ಅವಕಾಶವಿದೆ. ವರ್ಷಪೂರ್ತಿ ಕಲಿತದ್ದನ್ನು ನೆನಪಿನಲ್ಲಿ ಇಟ್ಟುಕೊಂಡು ಪರೀಕ್ಷೆ ಬರೆಯುವ ಹಳೆಯ ಪದ್ಧತಿಯ ಅವಶ್ಯಕತೆ ಈಗಿಲ್ಲ. ಆನ್‌ಲೈನ್ ಪರೀಕ್ಷಾ ಪದ್ಧತಿಯನ್ನು ಉನ್ನತ ಶಿಕ್ಷಣದಲ್ಲಿ ಅಳವಡಿಸಿಕೊಂಡರೆ ಹೆಚ್ಚಿನ ಅಭಿವೃದ್ಧಿ ಸಾಧ್ಯ. ಆನ್‌ಲೈನ್ ಪರೀಕ್ಷಾ ಪದ್ಧತಿಯ ಇನ್ನೊಂದು ಲಾಭವೆಂದರೆ ವಿದ್ಯಾರ್ಥಿಯು ಇಚ್ಛೆ ಪಟ್ಟಾಗ ಅವನಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲು ಸಾಧ್ಯವಾಗುತ್ತದೆ. ಈ ಪದ್ಧತಿ ಈಗಾಗಲೇ ಹಲವಾರು ದೇಶಗಳಲ್ಲಿ ಚಾಲ್ತಿಯಲ್ಲಿದೆ.

ಬಹಳ ಹಿಂದೆ ನಡೆದ ಘಟನೆಯೊಂದನ್ನು ನಾನಿಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತೇನೆ. ನನ್ನ ಪ್ರೊಫೆಸರ್ ಒಬ್ಬರು 1980ರ ದಶಕದಲ್ಲಿ ಎಂ.ಎಸ್. ಮಾಡಲು ಅಮೇರಿಕಾಕ್ಕೆ ಹೋಗಿದ್ದರು. ಆಗ ಎಂ.ಎಸ್. ಎರಡು ವರ್ಷಗಳ ಕೋರ್ಸ್ ಆಗಿತ್ತು. ಆದರೆ ಅವರು 18 ತಿಂಗಳಿಗೇ ವಾಪಸ್ ಬಂದು ಬಿಟ್ಟರು. 'ಯಾಕೆ ಇಷ್ಟು ಬೇಗ ಬಂದಿರಿ?' ಎಂದು ನಾನು ಅವರನ್ನು ಕೇಳಿದೆ. ಆಗ ಅವರು 'ನನ್ನ ಎಂ.ಎಸ್. ಮುಗಿಯಿತು' ಎಂದರು. ನಾನು ಆಶ್ಚರ್ಯದಿಂದ 'ಹೇಗೆ'

ಎಂದು ಕೇಳಿದೆ. 'ನನಗೆ ಕೋರ್ಸಿನ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಿದರು. ನಾನು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದೆ. ಎಂ.ಎಸ್. ಮುಗಿಯಿತು. ವಾಪಸ್ ಬಂದೆ' ಎಂದರು !

ಹಲವು ದೇಶಗಳಲ್ಲಿ ಈ ಪದ್ಧತಿ ಇದೆ. ಅಲ್ಲಿ 16 ಕ್ರೆಡಿಟ್ ಕೋರ್ಸ್‌ಗಳು ಇರುತ್ತವೆ. ನಿಮ್ಮ ಆಯ್ಕೆಯ ಸಮಯದಲ್ಲಿ ನಿಮಗೆ ಪರೀಕ್ಷೆಗಳನ್ನು ತೆಗೆದು ಕೊಳ್ಳಲು ಅವಕಾಶವಿದೆ. ಅಂದರೆ ಒಂದು ವೇಳೆ ನಿಮಗೆ ಯಾವುದಾದರೂ ಕೋರ್ಸಿನಲ್ಲಿ ಪ್ರಾವೀಣ್ಯತೆ ಬಂದಿದೆ ಎಂದು ಎನ್ನಿಸಿದರೆ, ನೀವು ಆನ್ ಲೈನ್ ಪರೀಕ್ಷಾ ಕೊಠಡಿಗೆ ಹೋಗಿ ಪರೀಕ್ಷೆ ತೆಗೆದುಕೊಳ್ಳಬಹುದು. ಸಿಲೆಬಸ್ ಮುಗಿಯುವ ತನಕ ಕಾಯುವ ಅವಶ್ಯಕತೆ ಇಲ್ಲ. ಹಾಗೆಯೇ ಎಲ್ಲ ಕೋರ್ಸಿನ ಪರೀಕ್ಷೆಯನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು ಎನ್ನುವ ನಿಬಂಧನೆಯೂ ಇಲ್ಲ.

ಆ ರೀತಿಯ ಫ್ಲೆಕ್ಸಿಬಿಲಿಟಿ ನಮ್ಮಲ್ಲಿಲ್ಲ. ಇಲ್ಲಿ ಶೈಕ್ಷಣಿಕ ವರ್ಷ ಪೂರ್ತಿ ಆಗುವವರೆಗೆ ಕಾಯಬೇಕು. ಪ್ರತಿಯೊಂದೂ ಪದ್ಧತಿ ಪ್ರಕಾರವೇ ನಡೆಯಬೇಕು. ಇದು ಬದಲಾದರೆ ಉತ್ತಮ ಎನ್ನುವುದು ನನ್ನ ಅಭಿಮತ. ಆನ್‌ಲೈನ್ ಪರೀಕ್ಷಾ ಪದ್ಧತಿ ನಮ್ಮ ಉನ್ನತ ಶಿಕ್ಷಣದಲ್ಲೂ ಸಹ ಬರಬೇಕು ಹಾಗೂ ಅದರ ಮೂಲಕ ಪರೀಕ್ಷಾ ಪದ್ಧತಿಯ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕು.

ಮೊದಲೇ ಹೇಳಿದಂತೆ ಬೋಧಕರ ಗುಣಮಟ್ಟದ ಕೊರತೆ ನಮ್ಮ ಉನ್ನತ ಶಿಕ್ಷಣವನ್ನು ಕಾಡುತ್ತಿರುವ ಬಹುಮುಖ್ಯ ಸಮಸ್ಯೆಗಳಲ್ಲಿ ಒಂದು. ಇದಕ್ಕೆ ಪರಿಹಾರ ಎಂದರೆ ಬೋಧಕರ ಅಭಿವೃದ್ಧಿ ಕಾರ್ಯಕ್ರಮಗಳು. ಇಂತಹ ಕಾರ್ಯಕ್ರಮಗಳ ಕೊರತೆ ನಮ್ಮ ಉನ್ನತ ಶಿಕ್ಷಣದಲ್ಲಿ ಎದ್ದು ಕಾಣುತ್ತಿದೆ. ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣದಲ್ಲಿ ಪಾಠ ಮಾಡಲು ಬಿ.ಎಡ್.ನ್ನು ಕನಿಷ್ಠ ವಿದ್ಯಾರ್ಹತೆಯಾಗಿ ನಿಗದಿ ಪಡಿಸಲಾಗಿದೆ. ಅಂದರೆ ತರಬೇತಿ ಪಡೆದ ಶಿಕ್ಷಕರು ಮಾತ್ರ ಅಲ್ಲಿ ಸೇರುತ್ತಾರೆ. ಆದರೆ ಉನ್ನತ ಶಿಕ್ಷಣದಲ್ಲಿ ಈ ವ್ಯವಸ್ಥೆಯಿಲ್ಲ. ಸ್ನಾತಕೋತ್ತರ ಪದವಿ ಪಡೆದವರು ನೇರವಾಗಿ ಬೋಧಕರಾಗಿ ಕ್ಲಾಸ್ ರೂಮಿಗೆ ತೆರಳುತ್ತಾರೆ. ನಾಲ್ಕು ಗೋಡೆಗಳ ಮಧ್ಯೆ ಏನು ನಡೆಯುತ್ತೋ ದೇವರೇ ಬಲ್ಲ. ಏಕೆಂದರೆ ಅವರ ಕೈಯಲ್ಲಿ ಡಿಗ್ರಿ ಇರುತ್ತದೆಯೇ ಹೊರತು, ಬೋಧನೆಗೆ ಅವಶ್ಯವಾದ ಯಾವುದೇ ತರಬೇತಿ ಇರುವುದಿಲ್ಲ. ಆದ್ದರಿಂದಲೇ ಉನ್ನತ ಶಿಕ್ಷಣದಲ್ಲಿ ಬೋಧಕರ ಅಭಿವೃದ್ಧಿ ಕಾರ್ಯಕ್ರಮಗಳು ಯತೇಚ್ಛವಾಗಿ ನಡೆಯಬೇಕು. ಇದು ಉನ್ನತ ಶಿಕ್ಷಣದ ಗುಣಮಟ್ಟದ ಹೆಚ್ಚಳಕ್ಕೆ ಸಹಕಾರಿ ಆಗುತ್ತದೆ.

ನಾವು ನಮ್ಮ ವಿದ್ಯಾರ್ಥಿಗಳನ್ನು ಸಮಸ್ಯೆಗೆ ಪರಿಹಾರ ಹುಡುಕುವವರನ್ನಾಗಿ ರೂಪಿಸಬೇಕು. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ ಸಂಪೂರ್ಣ ಉನ್ನತ ಶಿಕ್ಷಣ ಸಿದ್ಧಾಂತ ಆಧಾರಿತ ಕಲಿಕೆಯಾಗಿದೆ. ಪ್ರಾಯೋಗಿಕ ಕಲಿಕೆಗೆ ಅವಕಾಶ ಕಡಿಮೆ ಇದೆ. 'ಮಾಡಿ ಕಲಿ' ಇದು ಜಾರಿಗೆ ಬರಬೇಕು. ಒಂದು ಉದಾಹರಣೆಯನ್ನು

ನಾನಿಲ್ಲಿ ಹೇಳುತ್ತೇನೆ. ನಾನು ಮೆಕ್ಯಾನಿಕಲ್ ಇಂಜಿನೀಯರಿಂಗ್‌ನಲ್ಲಿ ಪದವಿ ಪಡೆದವನು. ಆದರೆ ನನ್ನ ಕಾರು ಹಾಳಾದರೆ ನಾನು ಸಂಪೂರ್ಣವಾಗಿ ಮೆಕ್ಯಾನಿಕ್‌ನನ್ನೇ ಅವಲಂಬಿಸಬೇಕು. ಚಿಕ್ಕ ಪುಟ್ಟ ರಿಪೇರಿಯನ್ನು ಸಹ ನನ್ನಿಂದ ಮಾಡಲು ಸಾಧ್ಯವಿಲ್ಲ. ಆದರೆ ಸೈದ್ಧಾಂತಿಕವಾಗಿ ಕಾರಿನ ಬಗ್ಗೆ ನನಗೆಲ್ಲ ಗೊತ್ತು. ಟೇಬಲ್ ಮೇಲೆ ಕುಳಿತು ವಿನ್ಯಾಸ ರೂಪಿಸಬಲ್ಲೆ. ಆದರೆ ಪ್ರಾಯೋಗಿಕವಾಗಿ ರಿಪೇರಿ ಮಾಡಲು ನನ್ನಿಂದ ಸಾಧ್ಯವಿಲ್ಲ. ಇದು ಏನನ್ನು ಸೂಚಿಸುತ್ತದೆ ಎಂದರೆ ಥಿಯರಿ ಮತ್ತು ಪ್ರಾಕ್ಟಿಕಲ್ ನಡುವೆ ನಮ್ಮ ದೇಶದಲ್ಲಿ ಒಂದು ದೊಡ್ಡ ಕಂದಕವಿದೆ, ಅದನ್ನು ನಾವು ಸರಿಪಡಿಸಬೇಕು.

ನಮ್ಮ ಉನ್ನತ ಶಿಕ್ಷಣ ಕೆಲಸ ಕೊಡುವವರನ್ನು ರೂಪಿಸಬೇಕೇ ಹೊರತು ಕೆಲಸ ಕೇಳುವವರನ್ನಲ್ಲ. ನಾವು ವಿದ್ಯಾರ್ಥಿಗಳಲ್ಲಿ ಎಷ್ಟು ಆತ್ಮವಿಶ್ವಾಸ ತುಂಬಬೇಕು ಎಂದರೆ ಅವರು ತಾವೇ ಕೆಲಸ ಹುಡುಕುವ ಬದಲು ಇನ್ನೊಬ್ಬರಿಗೆ ಕೆಲಸ ಕೊಡುವ ಬಗ್ಗೆ ಆಲೋಚಿಸಲು ಪ್ರಾರಂಭಿಸಬೇಕು.

ಇನ್ನೊಂದು ಬಹಳ ಮುಖ್ಯ ವಿಷಯ ಎಂದರೆ ನಮ್ಮ ಬೋಧಕರು ಬದಲಾವಣೆಗೆ ಸಿದ್ಧರಿರಬೇಕು. ಏಕೆಂದರೆ ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ತಾಂತ್ರಿಕತೆಗೆ ನಾವು ಹೆಚ್ಚಿನ ಉತ್ತೇಜನ ಕೊಡುವ ಅವಶ್ಯಕತೆ ಇದೆ. ಈಗಾಗಲೇ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ತಾಂತ್ರಿಕತೆ ಬಹಳ ವೇಗವಾಗಿ ಆವರಿಸತೊಡಗಿದೆ. ಇಂದು ಆನ್‌ಲೈನ್ ವಿದ್ಯಾಲಯಗಳೇ ಅಸ್ತಿತ್ವಕ್ಕೆ ಬಂದು ಬಿಟ್ಟಿವೆ. ನೀವು ಬೋಧಕರನ್ನು ನೋಡುವ ಅವಶ್ಯಕತೆಯೇ ಇಲ್ಲ. ಆನ್‌ಲೈನ್ ಮೂಲಕವೇ ಕೋರ್ಸ್ ಮುಗಿಸಬಹುದು. ಈ ವ್ಯವಸ್ಥೆ ಸಾಂಪ್ರದಾಯಿಕ ಬೋಧಕ ವ್ಯವಸ್ಥೆಗೆ ಪರ್ಯಾಯ ಎಂದು ನಾನಿಲ್ಲಿ ಹೇಳುತ್ತಿಲ್ಲ. ಆದರೆ ಶಿಕ್ಷಣದಲ್ಲಿ ತಾಂತ್ರಿಕತೆ ಎಷ್ಟು ಮುಂದುವರೆದಿದೆ ಎನ್ನುವುದನ್ನು ಸೂಚ್ಯವಾಗಿ ಹೇಳಲು ನಾನು ಈ ಉದಾಹರಣೆಯನ್ನು ತೆಗೆದುಕೊಂಡೆ. ಪರಿಸ್ಥಿತಿ ಹೀಗಿರುವಾಗ ಬೋಧಕರು ಬದಲಾವಣೆಗೆ ಒಗ್ಗಿಕೊಳ್ಳಲೇಬೇಕು. ತಾವು ಬದಲಾಗುವುದಿಲ್ಲ ಎಂದು ಕುಳಿತರೆ ಪ್ರಪಂಚ ಅವರನ್ನು ಅಲ್ಲಿಯೇ ಬಿಟ್ಟು ಮುಂದುವರೆಯುತ್ತದೆ.

ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳ ಇನ್ನೊಂದು ಬಹು ದೊಡ್ಡ ಸಮಸ್ಯೆ ಎಂದರೆ ಅವು ಕೇವಲ 'ಕಲಿಸುವ ಮತ್ತು ಪರೀಕ್ಷೆ ನಡೆಸುವ' ಕೇಂದ್ರಗಳಾಗಿವೆ. ಪಾಠ ಮಾಡೋದು ಮತ್ತು ಪರೀಕ್ಷೆ ನಡೆಸೋದು ಮಾತ್ರ ಅವುಗಳ ಕೆಲಸವಾಗಿಬಿಟ್ಟಿದೆ. ಅಧ್ಯಯನದ ಬಹುಮುಖ್ಯ ಅಂಗವಾದ ಸಂಶೋಧನೆಯನ್ನು ಅವು ಮರೆತುಬಿಟ್ಟಿವೆ. ಮೊದಲೇ ಹೇಳಿದಂತೆ 'ಆವಿಷ್ಕಾರ ಮಾಡು ಇಲ್ಲವೇ ನಾಶವಾಗು' ಎನ್ನುವುದು ಈಗಿನ ಕಾಲದ ಸಿದ್ಧಾಂತವಾಗಿದೆ. ಈ ಹಿನ್ನೆಲೆಯಲ್ಲಿ ಸಂಶೋಧನೆ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಪದವಿ ಶಿಕ್ಷಣದಲ್ಲೂ ಸಹ ಸಂಶೋಧನೆಗೆ ಪ್ರಾಮುಖ್ಯತೆ ಕೊಡುವತ್ತ ಈಗ ಯು.ಜಿ.ಸಿ.

ಗಮನ ಹರಿಸುತ್ತಿದೆ. ಇದು ಬಹಳ ಉತ್ತಮ ಬೆಳವಣಿಗೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣದಲ್ಲಿ ಸಂಶೋಧನೆಯ ಸಂಸ್ಕೃತಿ ಬೆಳೆಸಲು ಇದು ಸಹಾಯವಾಗಬಹುದು.

ಇಲ್ಲಿಯವರೆಗೆ ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಕಲಿಕಾ ಫಲಿತಾಂಶ(ಲರ್ನಿಂಗ್ ಔಟ್‌ಕಮ್)ವನ್ನು ಅಳತೆ ಮಾಡುವ ಪದ್ಧತಿ ಇರಲಿಲ್ಲ. ಈಗ ಯು.ಜಿ.ಸಿ.ಯು ಮೊಟ್ಟ ಮೊದಲ ಬಾರಿಗೆ ಕಲಿಕಾ ಫಲಿತಾಂಶವನ್ನು ಅಳತೆ ಮಾಡುವ ಬಗ್ಗೆ ಆಲೋಚಿಸಿದೆ. ಇದು ಬಹಳ ಸಂತೋಷದ ವಿಷಯ. ಇಂದಿನ ದಿನದಲ್ಲಿ ಫಲಿತಾಂಶ ಆಧಾರಿತ ಶಿಕ್ಷಣಕ್ಕೆ (ಔಟ್‌ಕಮ್ ಬೇಸ್ಡ್ ಎಜುಕೇಶನ್) ನಾವು ಸ್ವಾಗತ ಹೇಳಬೇಕಿದೆ. ಈ ಪದ್ಧತಿಯು ವಾಸ್ತವಿಕ ಪಠ್ಯಕ್ರಮವನ್ನು, ಬೋಧಕರ ಹೊಣೆಗಾರಿಕೆಯನ್ನು ಹಾಗೂ ಸ್ವಯಂ ಪ್ರೇರಿತ ಕಲಿಕೆಯನ್ನು ಉತ್ತೇಜಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ 'ಶಿಕ್ಷಣದ ಮುಂದುವರಿಕೆ'ಯನ್ನು ಈ ಪದ್ಧತಿಯು ಹೆಚ್ಚು ಉತ್ತೇಜಿಸುತ್ತದೆ. 'ಓದುವುದು, ಪದವಿ ಪಡೆಯುವುದು ಹಾಗೂ ಓದನ್ನು ನಿಲ್ಲಿಸುವುದು'- ಇದು ಇಂದು ಅಸ್ತಿತ್ವದಲ್ಲಿರುವ ಪದ್ಧತಿ. ಅಂದರೆ ಪದವಿ ಪಡೆದ ತಕ್ಷಣ ಓದು ಮುಗಿಯಿತು ಎನ್ನುವುದು ಎಲ್ಲರ ಭಾವನೆ. ಫಲಿತಾಂಶ ಆಧಾರಿತ ಶಿಕ್ಷಣವು ಶಿಕ್ಷಣದ ಮುಂದುವರಿಕೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತದೆ. ಶಿಕ್ಷಣ ಮುಗಿದ ನಂತರವೂ ವಿದ್ಯಾರ್ಥಿ ಮತ್ತು ಸಂಸ್ಥೆಯ ನಡುವೆ ಸಂಪರ್ಕವಿರಬೇಕು ಹಾಗೂ ಈ ಸಂಪರ್ಕ ನಿರಂತರ ಪ್ರಕ್ರಿಯೆಯಾಗಿರಬೇಕು.

ಕೈಗಾರಿಕೆಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳ ನಡುವೆ ನಿರಂತರ ಸಂಪರ್ಕ ಇರಬೇಕಾದ್ದು ಸಹ ಅಗತ್ಯವಿದೆ. ಭಾರತ ಸರ್ಕಾರ ಇದರ ಅಗತ್ಯವನ್ನು ಮನಗಂಡು ಕೈಗಾರಿಕೆ ಮತ್ತು ಶಿಕ್ಷಣ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸಲು ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರಿಂದ ಕೈಗಾರಿಕೆಗಳ ಅಗತ್ಯತೆಗೆ ತಕ್ಕ ಪದವೀಧರರನ್ನು ಶಿಕ್ಷಣ ಸಂಸ್ಥೆಗಳು ತಯಾರು ಮಾಡಲು ಸಾಧ್ಯವಾಗುತ್ತದೆ.

ನನ್ನ ಅಭಿಪ್ರಾಯದಲ್ಲಿ, ಒಂದು ಉತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯ ಸೂಚಕಗಳೇನು ಎನ್ನುವುದನ್ನು ಹೇಳಲು ಬಯಸುತ್ತೇನೆ:

- ಅದು ಅತ್ಯುತ್ತಮ ಸಂಶೋಧನಾ ಲೇಖನಗಳನ್ನು ಪ್ರಕಟಿಸಬೇಕು.
- ಬೋಧಕರು ಮತ್ತು ವಿದ್ಯಾರ್ಥಿಗಳು, ಇಬ್ಬರಿಗೂ ಸಂಶೋಧನೆಯ ಕಡೆಗೆ ಮೋಹ ಇರಬೇಕು. ಅಂತವರೇ ಉನ್ನತ ಶಿಕ್ಷಣಕ್ಕೆ ಬಂದರೆ ಅವರು ಹೆಚ್ಚಿನ ಕೊಡುಗೆಗಳನ್ನು ನೀಡಬಹುದು.
- ಹೆಚ್ಚು ಹೆಚ್ಚು ಪೇಟೆಂಟ್‌ಗಳನ್ನು ನಾವು ಪಡೆಯಬೇಕು.
- ಆವಿಷ್ಕಾರವನ್ನು ಉತ್ತೇಜಿಸಬೇಕು.
- ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು 'ಸಲಹಾ ಕೇಂದ್ರ'ಗಳಾಗಬೇಕು.

ಕೈಗಾರಿಕೆಗಳು ಜ್ಞಾನಕ್ಕಾಗಿ ಹಾಗೂ ತಾಂತ್ರಿಕ ಮಾಹಿತಿಗಳಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಸಂಪರ್ಕಿಸಬೇಕು.

- ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು 'ವಿಶ್ವ ನಾಗರೀಕ'ರನ್ನು ತಯಾರು ಮಾಡಬೇಕು. ಹೊಸಹೊಸ ಅವಕಾಶಗಳನ್ನು ಅರಸುತ್ತಾ ತಮ್ಮನ್ನೇ ತಾವು ವಿಸ್ತರಿಸಿಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ನಾವು ನೀಡಬೇಕು. ಇಡೀ ಪ್ರಪಂಚವೇ ತನ್ನ ಕಾರ್ಯಕ್ಷೇತ್ರ ಎನ್ನುವ ಭಾವನೆ ಬರುವಷ್ಟು ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿ ತುಂಬಬೇಕು.

ಕೊನೆಯದಾಗಿ ನಾನು ಹೇಳಬಯಸುವ ವಿಷಯವೇನೆಂದರೆ ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು ಕೇವಲ ಉದ್ಯೋಗ ಸೇವಾ ಕೇಂದ್ರಗಳಾಗಬಾರದು. ಬಹಳ ಮುಖ್ಯವಾದ ವಿಷಯ ಇದು. ಕೇವಲ ಕೆಲಸಕ್ಕೋಸ್ಕರ ವಿದ್ಯಾಭ್ಯಾಸ ಒದಗಿಸುವ ಟ್ರೆಂಡ್ ಹೋಗಬೇಕು. ಏಕೆಂದರೆ ಉದ್ಯೋಗ ನೀಡುವಿಕೆ ಎನ್ನುವುದು ಆರ್ಥಿಕ ವ್ಯವಸ್ಥೆಯ ಒಂದು ಭಾಗ. ಆದಕ್ಕೂ ಶಿಕ್ಷಣಕ್ಕೂ ತಳಕು ಹಾಕಬಾರದು. ಉದಾಹರಣೆಗೆ ಮುಂದಿನ 25 ವರ್ಷಗಳ ಕಾಲ ನಮ್ಮಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳನ್ನೂ ಬಂದ್ ಮಾಡಿದರೆ, ಈಗಿರುವ ಎಲ್ಲ ನಿರುದ್ಯೋಗಿಗಳಿಗೂ ಕೆಲಸ ಸಿಗಬಹುದಾ? ಖಂಡಿತಾ ಇಲ್ಲ. ಆದ್ದರಿಂದಲೇ ಉದ್ಯೋಗ ಹಾಗೂ ಶಿಕ್ಷಣಕ್ಕೆ ನಾವು ಯಾವತ್ತಿಗೂ ಸಂಪರ್ಕ ಕಲ್ಪಿಸಲೇಬಾರದು.

(ದಿನಾಂಕ 9-12-2018ರಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್‌ವರ್ಲ್ಡ್ ಕಲ್ಚರ್‌ನಲ್ಲಿ ನೀಡಿದ ಶ್ರೀ ವೆಂಕಟರಾಮು ಸ್ಮಾರಕ ದತ್ತಿ ಉಪನ್ಯಾಸ.)

2001, ಬೆಂಗಳೂರಿನ ಬಳ್ಳಾಪುರಪೇಟೆ ಸಿದ್ಧಾರೂಢಸ್ವಾಮಿ ಮಠದ ಪ್ರವಚನ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ವೂಡೇ ಪಿ. ಕೃಷ್ಣ ಮಾತನಾಡುತ್ತಿರುವುದು. ಧರ್ಮದರ್ಶಿಗಳಾದ ತಂದೆ ಡಬ್ಲ್ಯೂ.ಹೆಚ್. ಪುಟ್ಟಯ್ಯ, ಬಿ. ಪಿ. ಚಂದ್ರಶೇಖರ, ಟಿ. ಜಿ. ಸಿದ್ಧವೀರಪ್ಪ, ಕೊಳದ ಮಠದ ಶ್ರೀಗಳು ಹಾಗೂ ಇತರರು.

ಚಿತ್ರಾವಳಿ

ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ, ಗಾಂಧಿ ಚಿಂತಕ ಎಸ್.ವಿ. ಮಂಜುನಾಥ್

ರಾಜ್ಯಪಾಲರಾದ ಹಂಸರಾಜ್ ಭಾರಧ್ವಾಜ್, ಪ್ರೊ. ಜೆ.ಎಸ್. ಪಾಟೀಲ್, ಡಾ. ಹೊ. ಶ್ರೀನಿವಾಸಯ್ಯ

ಮಕ್ಕಳ ಹಕ್ಕುಗಳ ಹೋರಾಟಗಾರ ನೋಬೆಲ್ ಪ್ರಶಸ್ತಿ ಪುರಸ್ಕೃತರಾದ ಕೈಲಾಶ್ ಸತ್ಯಾರ್ಥಿ

ಸಂಪರ್ಕ ಕ್ರಾಂತಿಯ ಮೂಲಕ ಭಾರತವನ್ನು ಬೆಸೆದ ಸ್ಯಾಮ್ ಪಿತ್ರೋಡ

ಇಸ್ರೋದ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್, ಬೌದ್ಧ ಧರ್ಮಗುರು ಹಾಗೂ ನೋಬೆಲ್ ಪ್ರಶಸ್ತಿ ಪುರಸ್ಕೃತ ದಲೈಲಾಮ, ಎನ್.ಆರ್. ಪಂಡಿತಾರಾಧ್ಯ



ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ

ನಾಡೋಜ ಡಾ. ದೇ.ಜವರೇಗೌಡ, ಎಂ.ವಿ. ರಾಜಶೇಖರನ್, ಎಚ್.ಆರ್. ದಾಸೇಗೌಡ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ
ಮಹಾತ್ಮ ಗಾಂಧಿ ಮೊಮ್ಮಗಳಾದ ಸುಮಿತ್ರ ಗಾಂಧಿ ಕುಲಕರ್ಣಿ

ತೆಲಂಗಾಣ ರಾಜ್ಯಪಾಲರಾದ ನರಸಿಂಹನ್

ಖ್ಯಾತ ಐಟಿ ಉದ್ಯಮಿ ಬಿ.ವಿ. ಜಗದೀಶ್

ದೆಹಲಿಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ
ಪದ್ಮಭೂಷಣ ಡಾ. ಎಸ್.ಪಿ. ಅಗರ್‌ವಾಲ್, ರಾಜು ಚಂದ್ರಶೇಖರ್

ಡಾ. ನಿರ್ಮಲಾನಂದನಾಥ ಸ್ವಾಮಿಯವರಿಂದ ಶ್ರೀ ಬಾಲಗಂಗಾಧರನಾಥರಿಗೆ ಗೌರವಾರ್ಪಣೆ

ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಮಹಾಸ್ವಾಮೀಜಿಗಳು

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್

ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದಗೌಡ

ಭೂದಾನ ಚಳುವಳಿಯ ಗೌತಮ್ ಬಜಾಜ್, ಉಷಾ ಬೆನ್ ಮತ್ತು ಗಂಗಮ್ಮರೊಂದಿಗೆ

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು, ಕರ್ನಾಟಕ ಸಂಗೀತ ಅಕಾಡೆಮಿ ಅಧ್ಯಕ್ಷರಾದ ಆನೂರು ಅನಂತ ಕೃಷ್ಣಾಶರ್ಮ, ಡಾ. ಪ್ರೇಮ ಸಿದ್ದರಾಜು, ಡಾ. ಬಂಡ್ಲಹಳ್ಳಿ ವಿಜಯಕುಮಾರ್

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ
ಅಧ್ಯಕ್ಷರಾದ ಟಿ.ಎಸ್.ನಾಗಭರಣ ಅವರು ಸನ್ಮಾನ ಸ್ವೀಕರಿಸುತ್ತಿರುವುದು.

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರನ್ನು ತುಮಕೂರಿನಲ್ಲಿ ಸನ್ಮಾನಿಸಲಾಯಿತು.
ಇದೇ ಸಂದರ್ಭದಲ್ಲಿ ಕೆ. ಕೃಷ್ಣಸ್ವಾಮಿ, ಟಿ.ಎಸ್. ಹೆಂಜಾರಪ್ಪ,
ಪ್ರೊ. ಬಸವರಾಜು ಉಪಸ್ಥಿತರಿದ್ದರು.

ಶ್ರೀನಿವಾಸ ಚಾರಿಟಬಲ್ ಟ್ರಸ್ಟ್ ಅವರಿಂದ ನಾಡೋಜ ಪ್ರಶಸ್ತಿ ಪುರಸ್ಕತ
ಡಾ. ವೂಡೇ ಪಿ. ಕೃಷ್ಣ ಅವರಿಗೆ ಗೌರವ ಸಮರ್ಪಣೆ

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗೌರವ ಸಮರ್ಪಣೆ. ಡಾ. ಕೆ. ನಾಗಭೂಷಣ, ಮಾಸ್ಟರ್ ಕಾರ್ತಿಕ್ ನಾಗ್, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಡಾ. ಕೆ.ವಿ. ಮುದ್ದವೀರಪ್ಪ

'ಜನನಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಬೈರಮಂಗಲ ರಾಮೇಗೌಡ, ಡಾ. ನಾಗತಿಹಳ್ಳಿ ಚಂದ್ರಶೇಖರ್, ಲೇಖಕಿ ಲಿಖಿತ ಪಿ. ಪಟೇಲ್

ಇನ್ಫೋಸಿಸ್ ಸಹ ಸ್ಥಾಪಕ ಗುರುರಾಜ್ ದೇಶಪಾಂಡೆ, ಬಿ.ವಿ. ಜಗದೀಶ್, ಡಾ. ಎಸ್.ಎನ್. ವೆಂಕಟೇಶ್


ಡಾ. ವೂಡೇ ಪಿ. ಕೃಷ್ಣ
ಬೆಳ್ಳಕ್ಕಿ ಸಾಲು


ಡಾ. ವೂಡೇ ಪಿ. ಕೃಷ್ಣ ಐವತ್ತರ ನೆನಪುಗಳು
ನದಿಯಂತೆ ನೆನಪು
ವಿನಯ ಭಟ್


ಡಾ. ವೂಡೇ ಪಿ. ಕೃಷ್ಣ
ಐವತ್ತರ ಹೊತ್ತಿಗೆ
ಕೃಷ್ಣಸಿರಿ

ಒಬ್ಬ ವ್ಯಕ್ತಿ ತನ್ನ ಜೀವಿತದ ಅರವತ್ತೇ ವರ್ಷಗಳಲ್ಲಿ ಬಹುಮುಖಿ ಸಾಧನೆ ಮಾಡುವುದು ಹುಡುಗಾಟದ ವಿಚಾರವಲ್ಲ. ಅದೂ ಸಮಾಜಮುಖಿಯಾಗಿ ನಿಸ್ವಾರ್ಥತೆಯಿಂದ ಜನಸೇವೆಗೆ ಕಂಕಣ ಕಟ್ಟಿಕೊಂಡು ಅದರಲ್ಲೇ ಪರಮಾರ್ಥ ಕಾಣುವ ವ್ಯಕ್ತಿ ಯಾರಾದರೊಬ್ಬರು ಇದ್ದರೆ ಅದು ಬೆಂಗಳೂರಿನ ಪ್ರತಿಷ್ಠಿತ ವೂಡೇ ಮನೆತನಕ್ಕೆ ಸೇರಿದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು.

ಇಂಜಿನಿಯರಿಂಗ್, ಕಾನೂನು, ಸಮಾಜಶಾಸ್ತ್ರ, ಪತ್ರಿಕೋದ್ಯಮ, ಮ್ಯಾನೇಜ್‌ಮೆಂಟ್‌ಗಳಲ್ಲಿ ಅತ್ಯುನ್ನತ ಪದವಿಗಳನ್ನು ಪಡೆದು ವಿದ್ಯೆಯ ಪರ್ವತವೇ ಆಗಿರುವ ಅವರು ಸುಖ-ವೈಭೋಗಗಳನ್ನು ಅನುಭವಿಸಬಹುದಿತ್ತು. ಆದರೆ ಅದೆಲ್ಲವನ್ನೂ ತೊರೆದು ಅವರು ಆರಿಸಿಕೊಂಡಿದ್ದು ಸಮಾಜಸೇವೆಯನ್ನು! ಇಡೀ ತಮ್ಮ ಜೀವನವನ್ನೇ ಸಾರ್ವಜನಿಕ ಸೇವೆಗಾಗಿ ಗಂಧದಂತೆ ತೇಯುವ ಅನನ್ಯ ಸುಖವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಭಾರತ ಸೇವಾದಲ, ಭಾರತೀಯ ಕ್ಷಯರೋಗ ಸಂಸ್ಥೆ, ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ, ಕರ್ನಾಟಕ ಸರ್ವೋದಯ ಮಂಡಲ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಕಂಡುಕೊಂಡಿರುವ ಕೃಷ್ಣ ಅವರ ಬದುಕೇ ಸಮಾಜ ಸೇವೆಗೆ ಒಂದು ರೂಪಕದಂತಿದೆ.

ಅವರ ಜೀವನದ ಒಂದು ಸಂಕ್ಷಿಪ್ತ ಚಿತ್ರವನ್ನು **'ಶಿಕ್ಷಣ ಶಿಲ್ಪಿ'** ಕಟ್ಟಿಕೊಡುತ್ತದೆ.

– ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಸಿಬಿಜಿ ಇಂಡಿಯಾ

₹ 150/-